ಸಂಪುಟ 22 ಸಂಚಿಕೆ 12
ಮಾರ್ಚ್ 19, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ
ಪೆಕ್ಷ್ಯಾರಂಗ



ಬಹುರಾಷ್ಟ್ರೀಯ ಕಂಪನಿಗಳ ಏಜೆಂಟ್

ಕ್ಲಿಂಟನ್ ಗೋ ಬ್ಯಾಕ್

ಬಿಜೆಪಿಗೆ ಮುಖಭಂಗ

ಮೇ 11 ರಾಷ್ಟ್ರವ್ಯಾಪಿ ಮುಷ್ಕರ



ಹೇ ರಾಮ್

ಕೃಷ್ಣಾನದಿ ನೀರಿನ ವಿವಾದ-ತಾಳ್ಮೆ ಅಗತ್ಯ

ಸುಪ್ರೀಂಕೋರ್ಟ್‌ನ ಮೆಟ್ಟಿಲೇರಿರುವ ಕೃಷ್ಣಾನದಿ ನೀರಿನ ಹಂಚಿಕೆಯ ವಿವಾದದ ಬಗೆಗೆ ಆಂಧ್ರ, ಕರ್ನಾಟಕ ರಾಜ್ಯಗಳು ತಮ್ಮ ವಾದಗಳನ್ನು ಮಂಡಿಸುತ್ತಿವೆ. ಈ ಬೆಳವಣಿಗೆಗಳ ಕುರಿತು ಅಭಿಪ್ರಾಯ ವಿನಿಮಯಕ್ಕಾಗಿ ಸರ್ವ ಪಕ್ಷಗಳ(ಶಾಸಕರುಳ್ಳ ಪಕ್ಷಗಳ) ಪ್ರತಿನಿಧಿಗಳ ಸಭೆಯನ್ನು ಇತ್ತೀಚಿಗೆ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಕರೆದಿದ್ದರು. ಚರ್ಚೆಯ ವಿವರಗಳನ್ನು ಪ್ರಕಟಿಸಿಲ್ಲವಾದರೂ ತಮ್ಮ ನಿಲುವಿಗೆ ಬದ್ಧರಾಗಿರಲು ಈ ಸಭೆಯಲ್ಲಿ ಅಭಿಪ್ರಾಯ ಮೂಡಿದೆಯೆಂದು ವರದಿ ಇದೆ.

ಉಭಯ ರಾಜ್ಯಗಳ ವಾದಗಳನ್ನು ಆಲಿಸಿರುವ ನ್ಯಾಯಾಲಯವು ತನ್ನ ತೀರ್ಪನ್ನು ಕಾಯ್ದಿರಿಸಿದೆ. ಬಚಾವತ್ ಅವಾರ್ಡಿನ ಪ್ರಕಾರ ಮೊದಲ ಹಂತದ 'ಎ' ಸ್ಕೀಮಿನಲ್ಲಿ ಆಣೆಕಟ್ಟಿನ ಎತ್ತರವನ್ನು 519 ಅಡಿಗೆ ಹೊಂದಲು ತೀರ್ಮಾನವಿದೆ. ಇದು ಪರಿಗಣಿಸಬೇಕಾದ ಹಾಗೂ ತುರ್ತಾಗಿ ಇತ್ಯರ್ಥಗೊಳ್ಳಬೇಕಾದ ಅಂಶವಾಗಿದೆ. ಇನ್ನು 'ಬಿ' ಸ್ಕೀಂನಲ್ಲಿ ಬಳಸಬೇಕಾದ ನೀರು ಹಾಗೂ ವಿದ್ಯುತ್ ಉತ್ಪಾದನಾ ಯೋಜನೆ ಬಗ್ಗೆ ಉಭಯ ರಾಜ್ಯಗಳು ಮಾತುಕತೆ ನಡೆಸಿ ಒಪ್ಪಂದಕ್ಕೆ ಬರುವುದೇ ಸೂಕ್ತ.

ಸಂಪಾದಕೀಯ

ನ್ಯಾಯಾಲಯ ಬಹುತೇಕ ಈ ಅಭಿಪ್ರಾಯಕ್ಕೆ ಹೊಂದಿದಂತೆ ಕಂಡು ಬರುತ್ತಿದೆ. ಅಂದರೆ ಆಂಧ್ರ ಪ್ರದೇಶ ಸರ್ಕಾರ ವಾದಿಸುತ್ತಿರುವಂತೆ ಮತ್ತು ಕೇಂದ್ರ ಸರ್ಕಾರ ನೀಡಿರುವ ಪಕ್ಷಪಾತದ ಅಫಿಡವಿಟ್‌ನಂತೆ 509 ಅಡಿಗೆ ಆಣೆಕಟ್ಟು ಸೀಮಿತಗೊಳಿಸಬೇಕು ಎಂಬುದಕ್ಕಿಂತ ಭಿನ್ನ ಎಂಬುದು ಗಮನಿಸಬೇಕು. ಒಟ್ಟಾರೆ ತೀರ್ಪು ಕಾದಿಟ್ಟಿರುವುದರಿಂದ ತಾಳ್ಮೆಯಿಂದ ಕಾದು ನೋಡುವುದು ಅಗತ್ಯವಾಗಿದೆ. ಜೊತೆಗೆ ಎರಡೂ ರಾಜ್ಯಗಳ ಜನತೆಯನ್ನು ಉದ್ರೇಕಗೊಳಿಸದೇ, ಜನರ ಒಗ್ಗಟ್ಟು ಕಾಪಾಡುವುದು ತುರ್ತಿನ ಕೆಲಸ.

ಆದರೆ ವಿಜಾಪುರದಲ್ಲಿ ಕೆಲವರು ಮಾರ್ಚ್ 9 ರಿಂದ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದು, ಮಾರ್ಚ್ 26 ರಂದು 'ಕರಸೇವೆ' ಮಾಡುವುದಾಗಿ ಘೋಷಿಸಿದ್ದಾರೆ. ಈ ಹಿಂದೆಯೂ ಮಾಜಿ ಸಚಿವ ವೈಜನಾಥ ಪಾಟೀಲರನ್ನು ಒಳಗೊಂಡು ಇಂತಹ ಕರೆ ನೀಡಿ ಪ್ರತಿಕ್ರಿಯೆ ಸಿಗದೇ 'ವಿಶ್ರಾಂತಿ' ಅನುಭವಿಸಿದ್ದರು ಎಂಬುದು ಗಮನಾರ್ಹ. ಈಗ ಮತ್ತೆ ವಿಜಾಪುರದ ಮಠಾಧೀಶರ ನೇತೃತ್ವದಲ್ಲಿ ಚಳುವಳಿ ಆರಂಭಗೊಂಡಿದೆ. 524 ಅಡಿಯಲ್ಲೇ ಕ್ರೆಸ್ಟ್‌ಗೇಟ್‌ಗಳನ್ನು ಕೂಡಿಸುವುದು 'ಕರಸೇವೆ'ಯ ಉದ್ದೇಶವಂತೆ. ಇದೊಂದು ಅತ್ಯಂತ ಹಾಸ್ಯಾಸ್ಪದವಾದ, ಆದರೆ ಗಂಭೀರ ಅಪಾಯ ಬೀರುವ ನಿಲುವಾಗಿದೆ. ಮಠಾಧೀಶರು ಮುಂದುವರಿದು 'ಬಾಂಬ್' ಹಾಕುವಂತಹ ಹೇಳಿಕೆ ನೀಡಿರುವುದು ಬೇಜವಾಬ್ದಾರಿ ಮತ್ತು ಅಪ್ರಬುದ್ಧತೆಯ ಖಂಡನೀಯ ಹೇಳಿಕೆಯಾಗಿದೆ. ಮಾನಸಿಕ ಹತೋಟಿ ತಪ್ಪಿರುವ ಈ ಚಳುವಳಿಯು ರಾಜ್ಯದ ಹಿತಕ್ಕೆ ಮಾರಕವಾದ ಪರಿಣಾಮ ಉಂಟುಮಾಡಲಿದೆ. ಈ ಸಮಸ್ಯೆಗೆ ವೈಜ್ಞಾನಿಕ ಪರಿಹಾರ ಸೂಚಿಸದೇ ಭಾವೋದ್ರೇಕ ಕೆರಳಿಸಿ ಕೇವಲ ರಾಜಕೀಯ ಲಾಭ ಮಾಡಲು ಉಭಯ ರಾಜ್ಯಗಳ ಬಂಡವಾಳಶಾಹಿ ಪಕ್ಷಗಳು ನಿರತವಾಗಿ, ನ್ಯಾಯಾಲಯದ ಕಟ್ಟೆ ಹತ್ತಬೇಕಾಗಿ ಬಂತೆಂಬುದು ನೆನಪಿಸಿಕೊಳ್ಳಬೇಕು. ವಿಜಾಪುರದಲ್ಲಿ ನಡೆಯುತ್ತಿರುವ ಆ ಚಳುವಳಿಯನ್ನು ಕೈಬಿಡಬೇಕು, ಜನತೆಯನ್ನು ಉದ್ರೇಕಿಸುವ ಪ್ರಯತ್ನಗಳನ್ನು ತಕ್ಷಣವೇ ನಿಲ್ಲಿಸುವುದು ರಾಜ್ಯದ ಜನತೆಯ ಹಿತದೃಷ್ಟಿಯಲ್ಲಿ ಅತ್ಯಗತ್ಯ. ಇಲ್ಲವೇ ಜನರೇ ಇಂತಹವರನ್ನು ಪೂರ್ಣವಾಗಿ ತಿರಸ್ಕರಿಸಬೇಕು. ಏನಿದ್ದರೂ ಈ ಪ್ರಶ್ನೆಗಳು ಸಂಯಮ, ಸಮಾಲೋಚನೆ, ಸಹಕಾರ-ಸಹಬಾಳ್ವೆ, ನ್ಯಾಯಸಮ್ಮತ ಸೂತ್ರದ ಮೇಲೆಯೇ ಬಗೆಹರಿಯಬೇಕಾಗಿದೆ. ಹೋರಾಟವೂ ಸಹ ಈ ನೆಲೆಯಲ್ಲೇ ಬೆಳೆದುಬರಬೇಕು.



"ಬ್ರೆಡ್ ತಯಾರಿಸುವುದು ಸರಕಾರದ ಕೆಲಸವಲ್ಲ"!

ಹೀಗೆ ಅಪ್ಪಣೆ ಕೊಡಿಸಿದವರು ಮಾನ್ಯ ಕೇಂದ್ರ ಸಚಿವರಾದ ಅರುಣ ಜೇಟ್ಲೆ. ನರಸಿಂಹರಾಯರ ಕಾಂಗ್ರೆಸ್ ಸರಕಾರ 1991 ರಲ್ಲಿ 'ಆರ್ಥಿಕ ಸುಧಾರಣೆ'ಗಳನ್ನು ವಿಶ್ವ ಬ್ಯಾಂಕ್, ವಿತ್ತ ನಿಧಿಗಳ ನಿರ್ದೇಶನದಲ್ಲಿ ಜಾರಿಗೊಳಿಸಲು ಆರಂಭಿಸಿದಂದಿನಿಂದ ಇತ್ತೀಚಿನವರೆಗೆ ಸಾರ್ವಜನಿಕ ಸಂಸ್ಥೆಗಳಿಂದ 'ಬಂಡವಾಳ ಹಿಂತೆಗೆಯುವಿಕೆ' ಒಂದು ಸರಕಾರಿ ಖಾತೆಯಾಗಿರಲಿಲ್ಲ. ಈಗಿನ ಭಾ.ಜ.ಪ. ಸರಕಾರ ಅದಕ್ಕೊಬ್ಬ ಮಂತ್ರಿಯನ್ನೇ ನೇಮಿಸಿದೆ. ಆ ಸಚಿವರೇ ಅರುಣ ಜೇಟ್ಲೆ.

ಸಾರ್ವಜನಿಕ ಸರಕಾರಿ ಸಂಸ್ಥೆಗಳಿಂದ ಸರಕಾರ ತನ್ನ ಬಂಡವಾಳ ಹಿಂತೆಗೆದುಕೊಂಡು ರೂ. 10,000 ಕೋಟಿ ಸಂಪನ್ಮೂಲ ಸಂಗ್ರಹಿಸಬೇಕೆಂದು ಕೇಂದ್ರ ವಿತ್ತ ಮಂತ್ರಿಗಳು 1999-2000 ಮುಂಗಡ ಪತ್ರದಲ್ಲಿ ಯೋಜಿಸಿದ್ದಾರೆ. ಅದನ್ನು ಸಾಧಿಸಲಾಗದ್ದಕ್ಕೆ ಮುಖ ಪರಚಿಕೊಳ್ಳುತ್ತಿದ್ದಾರೆ. ಈ ಪ್ರಕ್ರಿಯೆಯಿಂದ ಸುಮಾರು ರೂ. 1,00,000 ಕೋಟಿ ಹಣ ಕೂಡಿಹಾಕಬಹುದೆಂದು ಹಿಂದಿನ ಅರ್ಥ ಸಚಿವರಾದ ಪಳನಿ ಅಪ್ಪನ್ ಚಿದಂಬರಂ ಒಂದು ಸಂದರ್ಶನದಲ್ಲಿ ತಿಳಿಸಿದ್ದಾರೆ. ಇದು ಆ ಸಂಸ್ಥೆಗಳ ಸುಧಾರಣೆಗಳಿಗಲ್ಲ. ಅಲ್ಲಿ ನೌಕರಿಗಳನ್ನು ಹೆಚ್ಚಿಸುವುದಕ್ಕಲ್ಲ. ಅವುಗಳನ್ನು ಲಾಭಕೋರ ಖಾಸಗೀ ಬಂಡವಾಳದಾರರಿಗೆ ಮಾರುವುದು ಸರಕಾರದ ಸಂಚು ದಿವಾಳಿಖೋರ ನೀತಿ.

ಕಳೆದ ತಿಂಗಳು ಸುಮಾರು ರೂ. 2200 ಕೋಟಿ ಆಸ್ತಿ ಹೊಂದಿದ ತನ್ನ ಒಡೆತನದ 'ಮಾಡರ್ನ್ ಫುಡ್ ಇಂಡಸ್ಟ್ರೀಸ್' ಸಂಸ್ಥೆಯನ್ನು ಕೇಂದ್ರ ಸರಕಾರ ಕೇವಲ ರೂ. 106 ಕೋಟಿಗಳಿಗೆ ಖಾಸಗೀ ಬಹುರಾಷ್ಟ್ರೀಯ ಕಂಪನಿಯಾದ ಹಿಂದುಸ್ತಾನ್ ಲೀವರ್ ಲಿಮಿಟೆಡ್ ಕಂಪನಿಗೆ ಮಾರಿದೆ.

ಬಡ ಭಾರತದಲ್ಲಿ ಕೋಟ್ಯಾಂತರ ಜನ ಬೆಳಿಗ್ಗೆ ಚಹಾದೊಂದಿಗೆ ಸೇವಿಸುವುದು ಒಂದು ತುಣುಕು ಬ್ರೆಡ್. ನಮ್ಮ ಘನ ಸರಕಾರ ಅದನ್ನೂ ಕಸಿದುಕೊಳ್ಳುತ್ತಿದೆ.

ಹಳ್ಳಿಯಿಂದ ದಿಲ್ಲಿಯವರೆಗೆ ಜನಸಾಮಾನ್ಯರಿಗೆ ಪರಿಚಿತವಾಗಿರುವ ಮಾಡರ್ನ್ ಫುಡ್ ಇಂಡಸ್ಟ್ರೀಸ್ 1965 ರಲ್ಲಿ ಸ್ಥಾಪನೆಗೊಂಡು ಯಶಸ್ವಿ ಕಾರ್ಯನಿರ್ವಹಿಸಿ ಲಾಭಗಳಿಸುತ್ತಿರುವ ಉದ್ದಿಮೆ. ಬಡ ಕಾರ್ಮಿಕರು, ಶಾಲಾ ಮಕ್ಕಳು, ಸೈನ್ಯದ ಸಿಬ್ಬಂದಿ ಹೀಗೆ ಸುಮಾರು 5 ಕೋಟಿಗೂ ಹೆಚ್ಚು ಜನರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಬ್ರೆಡ್ ನೀಡುತ್ತಿರುವ ಹೆಗ್ಗಳಿಕೆ ಈ ಸಂಸ್ಥೆಯದು. 1997-98ನೇ ಸಾಲಿಗೆ 167 ಕೋಟಿ ರೂ. ವ್ಯವಹಾರ ಮಾಡಿ 9 ಕೋಟಿ ರೂ. ನಿವ್ವಳ ಲಾಭಗಳಿಸಿದ ಉದ್ದಿಮೆಯನ್ನು ಮಾರುವುದು ಯಾವ ನ್ಯಾಯ? ಯಾರ ಹಿತಾಸಕ್ತಿಗಾಗಿ ಸರಕಾರ ಈ ಪುಣ್ಯದ ಕೆಲಸ ಮಾಡುತ್ತಿದೆ.? ಯಾರ ಲಾಭಕ್ಕಾಗಿ ಈ ಘನಕಾರ್ಯ? ದೆಹಲಿ, ಮುಂಬಯಿ, ಚೆನ್ನೈ, ಚಂಡೀಗಢ, ಕಾನಪೂರ ಮುಂತಾದ ಶಹರಗಳಲ್ಲಿ 14 ಬೇಕರಿಗಳನ್ನು ಹಾಗೂ 27 ಸಂಬಂಧಿತ ಘಟಕಗಳನ್ನು ಮಾಡರ್ನ್ ಫುಡ್ ಹೊಂದಿದೆ. ಅಲ್ಲಿ ಸುಮಾರು 6500 ಕೆಲಸಗಾರರಿದ್ದಾರೆ. ಸರಕಾರದ 'ರಕ್ಷಣೆ' ಹೊಂದಿದ್ದ ಈ ಕಾರ್ಮಿಕರೀಗ ಹಿಂದುಸ್ತಾನ್ ಲೀವರ್ ಕಂಪನಿಯ ಗುಲಾಮರು. ಹೊಸ ಮಾಲಕರು ಇವರಿಗೆ ಒಂದು ವರ್ಷದ 'ಸುಧೀರ್ಘ' ಅವಧಿಯ ಕೆಲಸದ ಗ್ಯಾರಂಟಿ ನೀಡುವ ದೊಡ್ಡ ಮನಸ್ಸು ಮಾಡಿದ್ದಾರೆ. ಅಂದರೆ ಮುಂದಿನ ವರ್ಷ ಈ ಕೆಲಸಗಾರರನ್ನು ಮನೆಗೆ ಕಳಿಸುವ ಹಕ್ಕು ಹಿಂದುಸ್ತಾನ್ ಲೀವರ್ ಕಂಪನಿ ಉಳಿಸಿಕೊಂಡಿದೆ. ಅಂದರೆ ಒಂದು ವರ್ಷದ ಮೊದಲೇ 'ಸ್ವಯಂ ನಿವೃತ್ತಿ ಲಾಭ' ಪಡೆದು ಮನೆಗೆ ಹೋಗುವ ಸೂಚನೆ ಇದಲ್ಲವೇ?

ಸಾಮ್ರಾಜ್ಯಶಾಹಿ ದೊರೆಗಳನ್ನು ಪ್ರಸನ್ನಗೊಳಿಸಲು ಅಧಿಕಾರಕ್ಕೆ ಬರುತ್ತಲೇ ಯಾವ ವಿರೋಧವನ್ನೂ ಲೆಕ್ಕಿಸದೆ ವಿಮಾ ಕ್ಷೇತ್ರವನ್ನು ಖಾಸಗೀ ಬಂಡವಾಳದ ಪ್ರವೇಶಕ್ಕೆ ತೆರೆದ ಕೇಂದ್ರ ಸರಕಾರ ಇತ್ತೀಚೆಗೆ ದಾವೋಸ್‌ನಲ್ಲಿ ನಡೆದ 'ವರ್ಲ್ಡ್ ಇಕಾನೋಮಿಕ್ ಫೋರಮ್ಮಿನ' ಸಭೆಯ ಕೆಲವೇ ದಿನಗಳ ಮೊದಲು ಇಂಡಿಯನ್ ಏರ್‌ಲೈನ್ಸ್ ಹಾಗೂ ಮಾಡರ್ನ್ ಫುಡ್ ಇಂಡಸ್ಟ್ರೀಸ್‌ಗಳನ್ನು ಖಾಸಗೀ ಕರಣಗೊಳಿಸುವ ನಿರ್ಣಯ ಘೋಷಿಸಿದ್ದು ಅಂತರಾಷ್ಟ್ರೀಯ - ರಾಷ್ಟ್ರೀಯ ಬಂಡವಾಳಗಾರರನ್ನು ಸುಪ್ರೀತಗೊಳಿಸುವ ದಿಶೆಯಲ್ಲಿ ಮತ್ತೊಂದು ಹೆಜ್ಜೆಯಲ್ಲವೇ? ಖಾಸಗೀಕರಣದ ಭೂತನರ್ತನ ಭಾ.ಜ.ಪ. ನಾಟಕ ಮಂಡಳಿಯ ಕೃಪಾ ಪೋಷಣೆಯಲ್ಲಿ ನಡೆಯುತ್ತಿದೆ. ಜನರಿಗೆ ಶಿಕ್ಷಣ, ಆರೋಗ್ಯ, ನಾಗರಿಕ ಸೌಲಭ್ಯಗಳಾದ ನೀರು, ವಿದ್ಯುತ್‌ಶಕ್ತಿ ಮುಂತಾದವುಗಳನ್ನು ಒದಗಿಸುವ ಜವಾಬ್ದಾರಿಯನ್ನು ಸರಕಾರ ಕಳಚಿಕೊಂಡು ಉಳ್ಳವರು ಅವುಗಳನ್ನು ಹಣಕೊಟ್ಟು ಖಾಸಗೀ ಪ್ರಭುಗಳಿಂದ ಪಡೆದುಕೊಳ್ಳಬೇಕೆಂದು ಈಗಾಗಲೇ ಸಾರಿದೆ. 'ಕಲ್ಯಾಣ ರಾಜ್ಯ' ಕಲ್ಪನೆಯನ್ನೇ ಮಣ್ಣುಗೂಡಿಸಿದೆ. ರಾಷ್ಟ್ರಾಧ್ಯಕ್ಷರ ಹಿತವಚನಕ್ಕೆ ಸರಕಾರ ಕಿವುಡಾಗಿದೆ. ಬಡಜನರ ಹಸಿವನ್ನು ಹಿಂಗಿಸಲು ಬೇಕಾದ ಬ್ರೆಡ್ ತಯಾರಿಸುವುದು ಸರಕಾರದ ಕೆಲಸವಲ್ಲ ಹಾಗಾದರೆ ಸರಕಾರದ ಕೆಲಸವೇನು? ಭ್ರಷ್ಟತೆ, ಕೋಮುವಾದಗಳನ್ನು ಬೆಳೆಸುವ ರಾಜಕೀಯ! ವಿದೇಶಿ ಹಾಗೂ ದೇಶಿ ಬಂಡವಾಳದಾರರನ್ನು ಬೆಳೆಸುವ ರಾಜಕೀಯ!! ಇದೇ "ಸ್ವದೇಶಿ" ಸೋಗಿನಲ್ಲಿ ಭಾ.ಜ.ಪ. ಸರಕಾರದ 'ಎರಡನೇ ಸುತ್ತಿನ ಆರ್ಥಿಕ ಸುಧಾರಣೆಗಳು'.

ಜನ ಎಚ್ಚರಗೊಳ್ಳುತ್ತಿದ್ದಾರೆ. ಕಾರ್ಮಿಕರು ಬೀದಿಗಿಳಿಯುತ್ತಿದ್ದಾರೆ. ಹೋರಾಟದ ಅಲೆ ಏಳುತ್ತಿದೆ. ಬನ್ನಿ, ನಾವೆಲ್ಲ ಸೇರಿ ಈ ಜನವಿರೋಧಿ ಹೊಸ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸೋಣ ದೇಶವನ್ನು ಆರ್ಥಿಕ ದಿವಾಳಿಯಿಂದ ರಕ್ಷಿಸೋಣ.

- ಆರ್. ಎಚ್. ಆಯಿ.

ಶ್ಮಶಾನ ಕುರುಕ್ಷೇತ್ರ ಹಾಗೂ ಯುದ್ಧ ವಿರೋಧಿ ನಿಲುವುಗಳು

ಪುಟ 12 ರಿಂದ

ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ ಮಕ್ಕಳ್ ಅವರಿವರು ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ ಮಡಿಯುವರ್' ಎಂದು ಆಕ್ರೋಶ ವ್ಯಕ್ತಪಡಿಸುತ್ತಾಳೆ. ಯುದ್ಧವನ್ನು ವೈಭವೀಕರಿಸುವ, ಸಮರ್ಥಿಸುವ ಸುಳ್ಳು ಭಾವಾವೇಶ, ಹುಸಿ ದೇಶಪ್ರೇಮ, ಶೌರ್ಯ ಮುಂತಾದವುಗಳನ್ನೆಲ್ಲಾ ತಿರಸ್ಕರಿಸುತ್ತಾಳೆ. ತನ್ನ ಮಗನ ಶವದ ಮುಂದೆ ನಿಂತು ರೋಧಿಸುವ ಆ ತಾಯಿ ಮಾತುಗಳನ್ನು ಗಮನಿಸಿ "ನೀನ್ ತುಳಿಲಾಳೆಂದು ತಿಳಿದು ದೊರೆಯ ಸೇನಾಧಿಕಾರಿಗಳು ನನ್ನೆಡೆಗೆ ಬಂದು ನೂರಾರು ಸವಿನುಡಿಗಳಿಂದ, ಕವಡಾಸೆಗಳಿಂದ ಬೆನ್ನನ್ ತಟ್ಟಿ ಬೋಳೈಸಿ ದೇಶಾಭಿಮಾನ ಸ್ವಾಮಿ ಭಕ್ತಿ, ಧರ್ಮನಿಷ್ಠೆ, ಕ್ಷಾತ್ರ ಧರ್ಮಂ ಮೊದಲಾದ ಸಮಯಕ್ಕೊದಗುವ ಉಪಾಯ ವೇದಾಂತಮಂ ಪೇಳ್ದು ನಿನ್ನನ್ ಕೊಂಡೊಯ್ದರ್. ಈಗಳೆಲ್ಲಿ ಆ ತತ್ವಂಗಳುಂ..... ಆ ಭಕ್ತಿ ಧರ್ಮಾಭಿಮಾನಂಗಳುಂ? ಎಲ್ಲ ಬರಿ ಪುಸಿಯಲ್ತೇ!" ಈ ಮಾತುಗಳನ್ನು ಕೇಳಿದಾಗ ಬಾಬರೀ ಮಸೀದಿ ನಾಶದ ಸಂದರ್ಭದಲ್ಲಿ ಹಾಗೂ ಕಾಶ್ಮೀರ ಯುದ್ಧದ ಸಂದರ್ಭದಲ್ಲಿ ಬಿಜೆಪಿ, ಆರ್‌ಎಸ್‌ಎಸ್‌ನವರ ವರ್ತನೆ ನೆನಪಾಗುವುದಿಲ್ಲವೇ?

1931 ರಲ್ಲಿ ಶ್ಮಶಾನ ಕುರುಕ್ಷೇತ್ರ ನಾಟಕದ ಮೊದಲ ಆವೃತ್ತಿ ಬಿಡುಗಡೆಯಾದಾಗ ಮೊದಲ ಮಹಾಯುದ್ಧ ಸಂಭವಿಸಿತ್ತು. ಆದರೆ ಎರಡನೇ ಮಹಾಯುದ್ಧವಿನ್ನೂ ಸಂಭವಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಈ ನಾಟಕವನ್ನು ಗಮನಿಸಿದಾಗ ಈ ನಾಟಕದ ಮಹತ್ವ ನಮಗರಿವಾಗುತ್ತದೆ. ಆದರೆ ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ನಾವು ಮರೆಯುವಂತಿಲ್ಲ. ಎಲ್ಲಾ ಯುದ್ಧಗಳೂ ನಿರರ್ಥಕ" ಎನ್ನುವ ಕುವೆಂಪು ಅವರ ಮಾತು ಶೋಷಿತರು, ಶೋಷಕರ ವಿರುದ್ಧ ನಡೆಸುವ ಸಮಾನತೆಗಾಗಿನ ಯುದ್ಧಕ್ಕೂ ಅನ್ವಯಿಸುತ್ತದೆಯೋ ಎಂಬುದು. ಉದಾಹರಣೆಗೆ ವಿಯೆಟ್ನಾಂ ಯುದ್ಧ, ಇರಾಕ್ ಯುದ್ಧಗಳಲ್ಲಿ ಆಕ್ರಮಣಕ್ಕೆ ಒಳಗಾದವರು ತಮ್ಮನ್ನು ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲೆಂದು ಮಾಡುವ ಯುದ್ಧಗಳು. ಈ ನಾಟಕ ರಚನೆಗೆ ಪೂರ್ವದಲ್ಲಿಯೇ ಸೋವಿಯತ್ ಮಹಾಕ್ರಾಂತಿ ನಡೆದು ಅದು ಕುವೆಂಪು ಅವರ ಮೇಲೂ ಸಾಕಷ್ಟು ಗಾಢ ಪರಿಣಾಮವನ್ನು ಬೀರಿತ್ತು ಎಂಬುದು ಅವರ ಇತರ ಬರವಣಿಗೆಗಳಲ್ಲಿ ಕಂಡುಬರುತ್ತದೆ. ಆದರೆ ಆ ವಿಚಾರವನ್ನು ಕುವೆಂಪು ಇಲ್ಲಿ ನಿರ್ಲಕ್ಷಿಸಿದ್ದಾರೆ. ಇದೊಂದು ದೋಷವನ್ನು ಹೊರತುಪಡಿಸಿ ಯುದ್ಧ ವಿರೋಧಿ ನಿಲುವುಗಳನ್ನು ಬಹುಮುಖ್ಯವಾಗಿ ಸಾಮ್ರಾಜ್ಯಶಾಹಿ ಪರ ಯುದ್ಧಗಳನ್ನು ವಿರೋಧಿಸುವ, ಪ್ರತಿಯುದ್ಧದಲ್ಲಿಯೂ ಎರಡು ಕಡೆಯೂ ಸಾಮಾನ್ಯ ಜನರೇ ಸಾವು ನೋವಿಗೀಡಾಗುವುದು ಎಂಬ ದೃಷ್ಟಿಯನ್ನು ತಳೆದ ಸಮರ್ಥ ನಾಟಕ ಶ್ಮಶಾನ ಕುರುಕ್ಷೇತ್ರ.

- ಎಂ.ಅನಂತ.

ಆರ್.ಎಸ್.ಎಸ್. ಬಿಜೆಪಿ. ಧೂಳುಂಡ ಪರಿ

ಪ್ರಧಾನ ಮಂತ್ರಿ ಹಾಗೂ ಗೃಹ ಮಂತ್ರಿಗಳು ಏನೆಲ್ಲಾ ಮೀನಾಮೇಷದಿಂದ ಗುಜರಾತ್ ರಾಜ್ಯ ಸರಕಾರವು, ಆರ್.ಎಸ್.ಎಸ್. ಚಟುವಟಿಕೆಗಳಲ್ಲಿ ಸರಕಾರಿ ನೌಕರರು ಭಾಗವಹಿಸಬಾರದೆಂಬ ನಿಷೇಧವನ್ನು ತೆಗೆದುಹಾಕಿದ್ದ ಕ್ರಮವನ್ನು ಬಹಿರಂಗವಾಗಿ, ಪ್ರತಿಪಾದಿಸಿಕೊಂಡಿದ್ದರೂ ಸಹ, ಅಂತಿಮವಾಗಿ ಬಿಜೆಪಿಯೂ ಗುಜರಾತ್ ರಾಜ್ಯ ಸರ್ಕಾರಕ್ಕೆ ನಿಷೇದ ತೆಗೆದುಹಾಕಿದ್ದ ಆಜ್ಞೆಯನ್ನು ವಾಪಸ್ಸು ಪಡೆಯಲು ನಿರ್ದೇಶಿಸಬೇಕಾಗಿ ಬಂದಿತು.

ಬಿಜೆಪಿಯೂ ವಿರೋಧ ಪಕ್ಷಗಳಿಂದ ಹಾಗೂ ತನ್ನ ಸರ್ಕಾರದಲ್ಲಿನ ಮಿತ್ರ ಪಕ್ಷಗಳಿಂದಲೇ ಸಂಪೂರ್ಣ ಮೂಲೆಗುಂಪಾದ ನಂತರ ಬಿಜೆಪಿಯ ಒತ್ತಾಯ ಪೂರ್ವಕ ಹಿಂತೆಗೆದುಕೊಳ್ಳುವಿಕೆ ಬಂದಿದೆ. ಈ ವಿಷಯ ಕುರಿತು ಬಿಜೆಪಿಯನ್ನೂ ಬಹಿರಂಗವಾಗಿ ಬೆಂಬಲಿಸಿದ್ದು, ಮಾಜಿ ಸಮಾಜವಾದಿಗಳಾದ ಜಾರ್ಜ್ ಫರ್ನಾಂಡೀಸ್‌ರ ಸಮತಾ ಪಕ್ಷವೊಂದೇ ಮಾತ್ರವಾಗಿದೆ. ಸಂಸತ್ತಿನ ಎರಡೂ ಸದನಗಳಲ್ಲಿ ಐಕ್ಯವಿರೋಧಿ ಹಾಗೂ ಈ ವಿಷಯ ಕುರಿತು ಮತದಾನ ಆಧಾರಿತ ಚರ್ಚೆಗೆ ಬಿಜೆಪಿಯ ನಿರಾಕರಣೆಯಿಂದ ಸಂಸತ್ತಿನ ಕಲಾಪಗಳಿಗೆ ಅಡ್ಡಿಯುಂಟಾಯಿತು. ಜಾತ್ಯಾತೀತ ವಿರೋದವು ಕೋಮುವಾದಿ ಶಕ್ತಿಗಳು ಆರ್.ಎಸ್.ಎಸ್.ನ್ನು ಪ್ರಮಾಣೀಕರಿಸುವ ಹಾಗೂ ಆ ಮೂಲಕ ಅದರ ಚಟುವಟಿಕೆಗಳನ್ನೂ, ಕಾನೂನು ಬದ್ಧಗೊಳಿಸುವ ಕೆಲಸವನ್ನು ಯಶಸ್ವಿಯಾಗಿ ತಡೆದಿವೆ.

ಸಂಸತ್ತಿನ ಒಳಗೂ ಹಾಗೂ ಹೊರಗೆ ಜನತೆಯ ನಡುವೆ ಇರುವ ಬಿನ್ನಾಭಿಪ್ರಾಯವೆಂದರೆ, ಆರ್.ಎಸ್.ಎಸ್. ರಾಷ್ಟದಲ್ಲಿ ಅಸಹಿಷ್ಣುತೆ ಆಧಾರದಲ್ಲಿ ಹಿಂದೂ ರಾಷ್ಟವನ್ನು ಸ್ಥಾಪಿಸುವ ರಾಜಕೀಯ ಯೋಜನೆಯ ಭಾಗವಾಗಿ ಅಲ್ಪಸಂಖ್ಯಾತರ ವಿರುದ್ಧ ತೀವ್ರ ದ್ವೇಷವನ್ನೂ ಹರಡುವ ಒಂದು ಕೋಮುವಾದಿ ಸಂಘಟನೆ ಎಂಬುದಾಗಿದೆ.

ಆರ್.ಎಸ್.ಎಸ್. ವಿಷಯಕ್ಕೆ ಕುರಿತಂತೆ ಬಿಜೆಪಿಯವರ ಹಿನ್ನಡೆ ಜಾತ್ಯಾತೀತ ಶಕ್ತಿಗಳು ಐಕ್ಯಬಲವು ಕೋಮುವಾದಿ ದಾಳಿಗಳನ್ನು ಹಿಮ್ಮೆಟ್ಟಿಸಿ ರಾಷ್ಟದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗುಣಲಕ್ಷಣವನ್ನೂ ಕಾಪಾಡುವ ಶಕ್ತಿ ಹೊಂದಿದೆ ಮಾತ್ರವಲ್ಲದೇ, ಕೋಮುವಾದಿ ಧಾಳಿಗಳನ್ನು ಸಮರ್ಪಕವಾಗಿ ಹಿಮ್ಮೆಟ್ಟಿಸುವ ಶಕ್ತಿ ಹೊಂದಿವೆ ಎಂಬುದನ್ನು ತೋರಿಸುತ್ತವೆ.

ಇದರ ಮಧ್ಯೆಯೂ ಪ್ರಮುಖ ಅಂಶವೇನೆಂದರೆ ಕೋಮುವಾದಿ ಶಕ್ತಿಗಳು ತಮ್ಮ ಗುರಿಸಾಧನೆಗಾಗಿ ಅವಿರತ ಪ್ರಯತ್ನದಲ್ಲಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ. ಈ ಅಂಶಗಳನ್ನು ರಾಷ್ಟದ ಸಂವಿಧಾನವನ್ನೂ ಪರಾಮರ್ಶಿಸುವ ಪ್ರಯತ್ನ ಅಂತೆಯೇ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ (ICHR) ಮೂಲಕ ಇತಿಹಾಸವನ್ನು ಪುನರ್‌ರಚಿಸುವ ಹಾಗೂ ಸಂಸ್ಕೃತಿಯ ಹೆಸರಿನಲ್ಲಿ ಕೋಮು ಆವೇಶಗಳನ್ನು ಕೆರಳಿಸುವ, ಪೊಲೀಸ್‌ಗಿರಿ ನಡೆಸುವ ಅವರ ಪ್ರಯತ್ನಗಳಿಂದ ಅರಿಯಬಹುದು.

ಬಹು ಸಂಖ್ಯೆಯಲ್ಲಿರುವ ಭಾರತದ ಜಾತ್ಯಾತೀತ ಮನೋಭಾವದ ದೇಶಪ್ರೇಮಿಗಳು ಕೋಮುವಾದಿ ಶಕ್ತಿಗಳು ಯಶಸ್ವಿಯಾಗಲು ಬಿಡುವುದಿಲ್ಲ.

ಕೋಮುವಾದಿ ಶಕ್ತಿಗಳ ಪಿತೂರಿಯ ಸೋಲು

ನಾವು ಮುದ್ರಣಕ್ಕೆ ಹೋಗುವ ಮೊದಲೇ ಬಿಹಾರದ ಮುಖ್ಯಮಂತ್ರಿ ನಿತೀಷ್ ಕುಮಾರ್‌ರವರ ರಾಜೀನಾಮೆಯ ಸ್ವಾಗತಾರ್ಹ ಸುದ್ದಿ ಬಂದಿದೆ. ಇದರಿಂದ ಸ್ಪಷ್ಟವಾಗಿರುವ ಅಂಶವೇನೆಂದರೆ ಅವರೆಂದೂ ವಿಶ್ವಾಸಮತವನ್ನು ಪಡೆಯಲು ಸಾಧ್ಯವಾಗುವಂತಿಲ್ಲ. ಈ ಕಾನೂನು ಬಾಹಿರ ಸರ್ಕಾರವನ್ನೂ ಬಿಹಾರದ ಮೇಲೆ ಹೇರಿದ ಅಪಕೀರ್ತಿ ಅಲ್ಲಿನ ರಾಜ್ಯಪಾಲ ವಿ.ಸಿ. ಪಾಂಡೆರ ಪಕ್ಷಪಾತದ ನಿರ್ಣಯಕ್ಕೆ ಸಲ್ಲುತ್ತದೆ. ಯಾವುದೇ ವಿಧಿ ವಿಧಾನದಿಂದಲೂ ಅವರು ಈ ಕ್ರಮವನ್ನು ಅವರಿಗೆ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಅತಂತ್ರ ವಿಧಾನಸಭೆಯಲ್ಲಿ ಅತೀ ದೊಡ್ಡ ಚುನಾವಣಾ ಪೂರ್ವ ಮೈತ್ರಿಕೂಟವನ್ನು ಸ್ವಾಗತಿಸಬೇಕಿತ್ತು. ಆರ್.ಜೆ.ಡಿ., ಸಿಪಿಎಂ ಮೈತ್ರಿಕೂಟಕ್ಕೆ 124 ಸ್ಥಾನಗಳು ಲಬ್ಯವಾಗಿದ್ದವು. ಎನ್.ಡಿ.ಎಯ 121 ಸ್ಥಾನಗಳಿಗೆ ಹೋಲಿಸಿದಲ್ಲಿ ಏಕೈಕ ಅತೀ ದೊಡ್ಡ ಪಕ್ಷವಾಗಿ ಹೋರಹೊಮ್ಮಿದ್ದು 122 ಸ್ಥಾನಗಳನ್ನ ಹೊಂದಿದೆ ಆರ್.ಜೆ.ಡಿ ಪಕ್ಷ, ಕೋಮುವಾದೀ ಮೈತ್ರಿಕೂಟದ ಒಟ್ಟು ಸಂಖ್ಯೆಗಿಂತಲೂ ಒಂದು ಸ್ಥಾನವನ್ನು ಹೆಚ್ಚು ಪಡೆದಿದೆ. ಎನ್.ಡಿ.ಎ 146 ಶಾಸಕರ ಪಟ್ಟಿಯನ್ನು ಸಲ್ಲಿಸಿರುವಾಗ, ಆರ್.ಜೆ.ಡಿ. 161 ಶಾಸಕರ ಪಟ್ಟಿಯನ್ನು ಸಲ್ಲಿಸಿದೆ.

"ರಾಜನಿಗೆ ಎಷ್ಟು ನಿಷ್ಟಾವಂತನೆಂದು ತೋರಿಸಲು ರಾಜ್ಯಪಾಲರು ಬಹಳ ಉತ್ಸುಕದಿಂದ ಇದ್ದರು. ಕೋಮುವಾದೀ ಮೈತ್ರಿಕೂಟಕ್ಕೆ ಹಿಂದಿನ ರಾಜ್ಯಪಾಲರಾದ ಆರ್.ಎಸ್.ಎಸ್. ಪ್ರಚಾರಕ ಎಸ್.ಎಸ್. ಭಂಡಾರಿಯವರಿಗಿಂತ ಇವರು ಉತ್ತಮರೆನಿಸಿಕೊಂಡರು. ಹೀಗಾಗಿ ರಾಜ್ಯಪಾಲರು ಎನ್.ಡಿ.ಎ.ಗೆ ಕುದುರೆ ವ್ಯಾಪಾರ ಮಾಡಲು ಹಾಗೂ ಹಣದ ಹೊಳೆ ಹರಿಸಲು ಪೂರ್ಣ ಅವಕಾಶ ಹಾಗೂ ಸಮಯವನ್ನು ಒದಗಿಸಿಕೊಟ್ಟರು.

ಇತರೇ ಪಕ್ಷಗಳ ಶಾಸಕರನ್ನೂ ತನ್ನೆಡೆಗೆ ಸೆಳೆಯಲು ಎನ್.ಡಿ.ಎ ಶತ ಪ್ರಯತ್ನ ನಡೆಸಿತು. ಕೆಲವು ರಾಷ್ಟ್ರೀಯ ಪತ್ರಿಕೆಗಳು ವರದಿ ಮಾಡಿದ ಮೊದಲ ಮಾಹಿತಿಗಳ ಮೇರೆಗೆ ತನ್ನ ಸರ್ಕಾರವನ್ನು ಬೆಂಬಲಿಸುವ ಪ್ರತಿಯೊಬ್ಬ ಶಾಸಕರಿಗೂ ಒಂದು ಮಂತ್ರಿ ಪದವಿ ಹಾಗೂ 50 ಲಕ್ಷ ರೂಪಾಯಿಗಳ ಪ್ರಸ್ತಾಪ ಇಟ್ಟಿತು.

ಈ ಎಲ್ಲದರ ಮದ್ಯೆಯೂ ರಾಜ್ಯಪಾಲರಿಗೆ ಸಲ್ಲಿಸಿದ್ದ 146 ಶಾಸಕರ ಪಟ್ಟಿಯನ್ನೂ ಧಾಟಿ ಮುಂದೆ ಹೋಗಲು ಎನ್.ಡಿ.ಎ.ಗೆ. ಸಾಧ್ಯವಾಗಲಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ಸಂದ ದೊಡ್ಡ ಜಯ, ಹಾಗೂ ಕೋಮುವಾದಿ ಶಕ್ತಿಗಳಿಗಾದ ಮಹತ್ತರ ಹಿನ್ನಡೆಯಾಗಿದೆ.

ಸೋಲಿನ ಮುನ್ಸೂಚನೆ ಕಂಡ ಎನ್.ಡಿ.ಎ.ಯು ವಿಧಾನಸಭಾ ಅಧ್ಯಕ್ಷರ ಸ್ಥಾನಕ್ಕೆ ತನ್ನ ಅಭ್ಯರ್ಥಿಯನ್ನು ಹಿಂತೆಗೆದುಕೊಂಡು ಲಾಲೂ ಪ್ರಸಾದ್ ಯಾದವರ ಅಭ್ಯರ್ಥಿಯನ್ನೇ ಬೆಂಬಲಿಸಿತು. ಈ ಕ್ರಮವೇ ಎನ್.ಡಿ.ಎ ವಿಶ್ವಾಸಮತ ಪಡೆಯುವ ಅವಕಾಶಗಳ ಸಾಧ್ಯತೆಯನ್ನು ಮುಚ್ಚಿಹಾಕಿತು. ಬಿಹಾರದ ವಿಧಾನಸಭೆಯಲ್ಲಿ ಯಾವುದೇ ಕಾರಣಕ್ಕೂ ಬಹುಮತ ಸಾಬೀತು ಮಾಡುವ ಪರಿಸ್ಥಿತಿಯಲ್ಲಿ ಎನ್.ಡಿ.ಎ ಇರಲಿಲ್ಲ.

ಬಿಹಾರದಲ್ಲಿ ಪ್ರಜಾಸತ್ತಾತ್ಮಕ ಹಾಗೂ ಅಲ್ಪಮತದ ಸರ್ಕಾರವನ್ನು ಸ್ಥಾಪನೆ ಮಾಡಲು ಮುಂದಾದ ಕೋಮುವಾದಿ ಮೈತ್ರಿಕೂಟದ ಈ ಪ್ರಯತ್ನವು ಅವರಿಗೆ ಪ್ರಜಾಸತ್ತಾತ್ಮಕ ನಡವಳಿಕೆಗಳಲ್ಲಿ ಕನಿಷ್ಟ ಗೌರವವು ಇಲ್ಲದಿರುವುದನ್ನು ಬಹಿರಂಗಪಡಿಸಿದೆ. ರಾಜ್ಯಪಾಲರ ಕಛೇರಿಯನ್ನು ಕಳಂಕಿತಗೊಳಿಸಿರುವ ವಿ.ಸಿ.ಪಾಂಡೆಯವರು ಈ ಕೂಡಲೇ ರಾಜಿನಾಮೆ ನೀಡಬೇಕು ಇಲ್ಲವಾದ್ದಲ್ಲಿ ರಾಷ್ಟಪತಿಗಳು ಅವರನ್ನು ವಾಪಸ್ಸು ಕರೆಯಿಸಬೇಕು.



ಕೋಮುವಾದಿ ಶಕ್ತಿಗಳ ಈ ಪಿತೂರಿಯನ್ನು ಸೋಲಿಸಿರುವ ಜಾತ್ಯಾತೀತ ಶಕ್ತಿಗಳು ಇನ್ನು ಮುಂದೆ ಐಕ್ಯತೆಯಿಂದ ಕೋಮುವಾದದ ವಿರುದ್ಧದ ಹೋರಾಟವನ್ನೂ ಬಲಪಡಿಸುವ ಹಾಗೂ ಬಿಹಾರದ ಜನತೆಯ ಅಭಿವೃದ್ಧಿಪರ ಆಶಯಗಳನ್ನು ಈಡೇರಿಸುವಲ್ಲಿ ಗಂಭೀರ ಪ್ರಯತ್ನ ನಡೆಸಬೇಕು.

ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಜಯದ ಹಾದಿಯತ್ತ ಪಕ್ಷ

ಈ ಬಾರಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಪಕ್ಷದ ಸದಸ್ಯರು ಚುನಾವಣಾ ಕಣಕ್ಕಿಳಿದು ಜಿದ್ದಾಜಿದ್ದಾಗಿಳಿದು ಗೆದ್ದು ಬಂದಿರುವುದು ಪಕ್ಷಕ್ಕೆ ಹೆಮ್ಮೆಯ ಮಾತಾಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ವಿಶೇಷವಾಗಿ ಕಮಲಾಪುರ ಕ್ಷೇತ್ರದಲ್ಲಿ ಪಕ್ಷದ ಬಾವುಟವನ್ನು ಎತ್ತಿ ಹಿಡಿವ ಕೈಗಳು ಅಸಂಖ್ಯಾತ ಸಂಖ್ಯೆಯಲ್ಲಿ ಹೆಚ್ಚಾಗಿವೆ.


ಹಿಂದಿನ ಪಂಚಾಯತ್ ಚುನಾವಣೆಯಲ್ಲಿ ಅಂಬಲಗಾ ಮತ್ತು ಮುಗುಳಿ ಗ್ರಾಮ ಪಂಚಾಯತ್‌ಗಳಲ್ಲಿ ಪಕ್ಷವು ಗೆದ್ದು ಬಂದಿತ್ತು. ಸತತ ಐದು ವರ್ಷಗಳವರೆಗೆ ಪಾಳೇಗಿರಿ ಮತ್ತು ಜಮೀನ್ದಾರಿ ಶಕ್ತಿಗಳ ಜನವಿರೋಧಿ ಚಟುವಟಿಕೆಗಳನ್ನು ಹಿಮ್ಮೆಟ್ಟಿಸುತ್ತಲೇ ಅನೇಕ ಸಾಧನೆಗಳನ್ನು ಮಾಡಿದ ಹೆಗ್ಗಳಿಕೆ ಪಕ್ಷಕ್ಕಿದೆ. ಈ ಬಾರಿ ಅಂಬಲಗಾ ಗ್ರಾ.ಪಂ.ನ ಮಾಜಿ ಅಧ್ಯಕ್ಷರನ್ನು ಸೋಲಿಸಲೇಬೇಕೆಂದು ಪಟ್ಟು ಹಿಡಿದ ಕೋಮುವಾದಿ ಜಮೀನ್ದಾರಿ ಕುತಂತ್ರವನ್ನು ಪಕ್ಷವು ಯಶಸ್ವಿಯಾಗಿ ವಿಫಲಗೊಳಿಸಿದೆ. ಬಿಜೆಪಿ ಬೆಂಬಲಿತ ಅಭ್ಯರ್ಥಿ ಮತ್ತು ನಮ್ಮ ಅಭ್ಯರ್ಥಿಗೆ ಬಿದ್ದ ಮತಗಳನ್ನು ಎಣಿಸಿದಾಗ ಇಬ್ಬರಿಗೂ ಸಮಾನ ಮತಗಳಿದ್ದು ಎಣಿಕೆದಾರರು ಘೋಷಿಸಿದರು. ನಮ್ಮನ್ನು ಸೋಲಿಸಿಯೇ ತೀರುವ ಪಟ್ಟು ಹಿಡಿದ ಬಿಜೆಪಿ ಶಾಸಕರು ಚೀಟಿ ಎತ್ತಬೇಕೆಂದು ಹೇಳಿದನು. ಚುನಾವಣಾಧಿಕಾರಿಯೂ ಚೀಟಿ ಎತ್ತುವುದೇ ಸೂಕ್ತ ಎಂದರು. ಆದರೆ "ಪುನರ್ ಎಣಿಕೆ" ಆಗಲೇಬೇಕು ಎಣಿಕೆಯಲ್ಲಿ ಖಂಡಿತ ಮೋಸ ಆಗಿದೆ ಎಂದು ನಮ್ಮವರು ಹಠ ಹಿಡಿದ ಮೇಲೆ ಮಧ್ಯರಾತ್ರಿ ನಡೆದ ಪುನರ್ ಎಣಿಕೆಯಲ್ಲಿ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರಾದ ನಮ್ಮ ಅಭ್ಯರ್ಥಿ ಗೆಲುವು ಸಾಧಿಸಿದರು. ರಾತ್ರೋ ರಾತ್ರಿ ಹಣ-ಹೆಂಡ ಹಂಚಿದ ಗೂಂಡಾಗಿರಿ ಮಾಡಿದ ಜಮೀನ್ದಾರಿ ಕೋಮುವಾದಿಗಳು ಸೋಲಬೇಕಾಯಿತು.

ನಾಮಪತ್ರ ತುಂಬಿ ಕೈಯಲ್ಲೊಂದು ಕರಪತ್ರ ಹಿಡಿದು ಮನೆ ಮನೆಗೆ ಹೋಗಿ ಮತ ಕೇಳಿದ ನಮ್ಮ ಅಭ್ಯರ್ಥಿಗಳು 80ಕ್ಕೂ ಹೆಚ್ಚು ಜನ ಆರಿಸಿ ಬಂದಿರುವರು. ಈ ಬಾರಿ ಚಿತ್ತಾಪುರ ತಾಲ್ಲೂಕಿನ 'ತೋನಸನಳ್ಳಿ' ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 6 ಜನ ಅಭ್ಯರ್ಥಿಗಳು ಗೆದ್ದು ಪಂಚಾಯತ್ ರಚನೆ ಮಾಡುವ ಸಾಧ್ಯತೆಗಳೂ ಇವೆ. ಇದೇ ತಾಲ್ಲೂಕಿನ ಹರಸೂರು ಮತ್ತು ಚಿಂಚೋಳಿ ಗ್ರಾಮ ಪಂಚಾಯಿತಿನಲ್ಲಿ ಹೊಸದಾಗಿ 4 ಜನ ಅಭ್ಯರ್ಥಿಗಳು ಪ್ರವೇಶಿಸಿರುವರು. ಡಿವೈಎಫ್‌ಐನ ಜಿಲ್ಲಾ ಖಜಾಂಚಿ ಒಬ್ಬರ ಖಾನ ಇವರಲ್ಲೊಬ್ಬರು. ಕಮಲಾಪುರ ಕ್ಷೇತ್ರದ ತೆಕ್ಕೆಯಲ್ಲಿ ಬರುವ 3 ಗ್ರಾ.ಪಂ. (ಕಮಲಾಪುರ, ಬಬಲಾದ, ಕುರಿಕೋಟ)ಗಳಲ್ಲಿ ಸಮಶಕ್ತಿಯಾಗಿ ನಮ್ಮ ಅಭ್ಯರ್ಥಿಗಳು ಗೆದ್ದು ಬಂದಿರುವರು. ಮಹಾಗಾಂವ್. ದಸ್ತಾಪುರ, ಗ್ರಾಮ ಪಂಚಾಯ್ತಿಗಳಲ್ಲಿ ನಮ್ಮ ಸದಸ್ಯರು ಪ್ರವೇಶ ಪಡೆದಿರುವರು. ಶಹಾಪುರ ಸುರಪುರದ ವ್ಯಾಪ್ತಿಯಲ್ಲಿ 7 ಜನ ಆರಿಸಿ ಬಂದಿರುವರು. ಜಿಲ್ಲೆಯಲ್ಲಿ ನಮ್ಮ ಪಕ್ಷದ ಮಹಿಳಾ ಅಭ್ಯರ್ಥಿಗಳು ತಮ್ಮ ಕೆಲಸದ ಅರ್ಹತೆಯನ್ನು ಮುಂದಿಟ್ಟುಗೆದ್ದು ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ.

ಹಿಂದೆ ಆಳಂದ ತಾಲ್ಲೂಕಿನಲ್ಲಿ ಮಾತ್ರ ಅಧಿಕ ಸಂಖ್ಯೆಯಲ್ಲಿ ನಮ್ಮ ಪಕ್ಷದಿಂದ ಗೆದ್ದ ಸದಸ್ಯರು ಇದ್ದರು. ಆದರೆ ಈ ಬಾರಿ ಪಕ್ಷವು ನಿರಂತರವಾಗಿ ಕೋಮುವಾದಿ ಪಾಳೇಗಾರಿ ಜಮೀನ್ದಾರಿ ಶಕ್ತಿಯ ವಿರುದ್ಧ ನಡೆಸಿದ ಹೋರಾಟದ ಫಲವಾಗಿ ಮತ್ತು ದುಡಿವ ಜನತೆಯ ದನಿಯಾಗಿ ಕೆಲಸ ಮಾಡಿದ ಕಾರಣವಾಗಿ ಚಿತ್ತಾಪುರ, ಚಿಂಚೋಳಿ, ಅಪ್ಜಲಪುರ, ಶಹಾಪುರ, ಸುರಪುರ ಮತ್ತು ಗುಲಬರ್ಗಾ ತಾಲ್ಲೂಕಿನ ಗ್ರಾ. ಪಂ.ಗಳಲ್ಲಿ ಕೆಂಪು ಬಾವುಟ ಎದ್ದು ಬಂದಿದೆ. ಮಾತ್ರವಲ್ಲ ಅಂಬಲಗಾ, ಮುಗುಳಿ, ಬಬಲಾದ ಕುರಿಕೋಟ, ತೋನಸನಳ್ಳಿ ಚಿಂಚನಸೂರಗಳಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ಅಧಿಕಾರ ಹಿಡಿವದ ಹಂತದಲ್ಲಿದ್ದು ಕಮಲಾಪುರ, ಗೋಳಾ, ಗ್ರಾಮ ಪಂಚಾಯತ್‌ಗಳಲ್ಲಿ ದಾವಾ ಮಾಡುವ ಒಂದು ಪ್ರಮುಖ ಶಕ್ತಿಯು ನಮಗಿದೆ.

ಕಳೆದ ಸಂಚಿಕೆಯಲ್ಲಿ ಸ್ಥಳೀಯ ಸ್ವಯಮಾಡಳಿತದಲ್ಲಿ ಎಲ್ಲರಿಗೂ ಮತದಾನದ ಹಕ್ಕಿಗಾಗಿ ಪ್ರತಿಪಾದನೆ, ಉದ್ಯೋಗಕ್ಕಾಗಿ ಮಹಿಳೆಯರ ಪ್ರತಿಭಟನೆ ಹಾಗೂ ಚಹಾ ತೋಟ ಕಾರ್ಮಿಕರ ಹೋರಾಟದಲ್ಲಿ ಗೋಲಿಬಾರಿಗೆ 8 ಜನರ ಸಾವು ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಆಗಿನ ಸೋವಿಯತ್ ಒಕ್ಕೂಟದ ಖ್ರುಶ್ಚೆವ್ ಮತ್ತು ಬುಲ್ಗನಿನ್ನರಿಗೆ ದೊರೆತ ಅಭೂತಪೂರ್ವ ಸ್ವಾಗತ ಹಾಗೂ ಗೋವಾ ವಿಮೋಚನೆಗಾಗಿ ನಡೆಸಿದ ಹೋರಾಟಗಳ ಬಗ್ಗೆ ಓದಿ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 29

ಸೋವಿಯತ್ ನೇತಾರರ ಸಮ್ಮಾನಕ್ಕೆ ಜನಸಾಗರ....!

ನವೆಂಬರ್ 29 ರಂದು ಇಬ್ಬರು ಸೋವಿಯತ್ ಮುಖಂಡರಾದ ನಿಖಿತಾ ಖ್ರುಶ್ಚೆವ್ ಮತ್ತು ಬುಲ್ಗಾನಿನ್ ಕಲ್ಕತ್ತಕ್ಕೆ ಆಗಮಿಸಿದರು. ಅವರಿಗೆ ಅಭೂತಪೂರ್ವ ಸ್ವಾಗತ ನೀಡಲಾಯಿತು. ಇಬ್ಬರೂ ನಾಯಕರು ಆನಂದತುಂದಿಲಿತರಾದರು. ಖ್ರುಶ್ಚೆವ್ ಮತ್ತು ಬುಲ್ಗಾನಿನ್‌ರನ್ನು ಬರಮಾಡಿಕೊಳ್ಳಲು ಡಮ್ ಡಮ್ ವಿಮಾನ ನಿಲ್ದಾಣಕ್ಕೆ ಹೋದವರಲ್ಲಿ ನಾನೂ ಇದ್ದೆ. ಮುಖ್ಯಮಂತ್ರಿ ಡಾ.ರಾಯ್, ರಾಜ್ಯದ ಮಂತ್ರಿಗಳು, ಕಮ್ಯುನಿಸ್ಟ್ ನೇತಾರ ಬಂಕಿಮ್ ಮುಖರ್ಜಿ, ಅಸೆಂಬ್ಲಿ ಸ್ಪೀಕರ್ ಶೈಲಕುಮಾರ್ ಮುಖರ್ಜಿ ಮತ್ತು ಸುನಿತ ಚಟ್ಟೋಪಾಧ್ಯಾಯ ಮೊದಲಾದವರು ನಿಲ್ದಾಣಕ್ಕೆ ಹೋದವರಲ್ಲಿ ಸೇರಿದ್ದರು.

ನವೆಂಬರ್ 31 ರಂದು ಬ್ರಿಗೇಡ್ ಪರೇಡ್ ಮೈದಾನದಲ್ಲಿ ಉಭಯ ನಾಯಕರಿಗೆ ನಾಗರಿಕ ಸನ್ಮಾನ ನೀಡಲಾಯಿತು. ಪತ್ರಿಕೆಗಳು ಅಂದಾಜು ಮಾಡಿದ ಪ್ರಕಾರ ಕಾರ್ಯಕ್ರಮದಲ್ಲಿ 50 ಲಕ್ಷ ಜನರು ನೆರೆದಿದ್ದರು! ವಾಸ್ತವ ಸಂಖ್ಯೆ ಏನೇ ಇರಲಿ, ಇದೊಂದು ಅತ್ಯಂತ ಪ್ರಭಾವಶಾಲಿ ಕಾರ್ಯಕ್ರಮವಾಗಿತ್ತೆನ್ನುವುದು ಸತ್ಯ.

ದೂವರ್ಸ್ ಮತ್ತು ತೆರಾಯಿ ವಲಯಗಳ ಚಹಾತೋಟ ಕಾರ್ಮಿಕರ ಮುಷ್ಕರದ ಬಗ್ಗೆ ಅಂದಿನ ಕಾರ್ಮಿಕ ಸಚಿವ ಕಾಳಿಪಾದ ಮುಖರ್ಜಿ ವಿಧಾನಸಭೆಯಲ್ಲಿ ಒಂದು ಹೇಳಿಕೆ ನೀಡಿದರು. ಚಾ ತೋಟ ಕಾರ್ಮಿಕರ ವಾಸ್ತವ ಪರಿಸ್ಥಿತಿಯನ್ನು ಮುಚ್ಚಿಹಾಕುವುದು ಹೇಳಿಕೆಯ ಉದ್ದೇಶವಾಗಿತ್ತು. ಪ್ರತಿಪಕ್ಷದ ಸತತ ಒತ್ತಾಯದ ಮೇರೆಗೆ ಈ ವಿಚಾರದಲ್ಲಿ ಚರ್ಚೆಗೆ ಸ್ಪೀಕರ್ ಅವಕಾಶ ಕಲ್ಪಿಸಿದರು.

ಸಚಿವರ ಹೇಳಿಕೆ ಏಕಪಕ್ಷೀಯವಾಗಿದೆ. ಅದನ್ನು ಮನ್ನಿಸುವುದರಲ್ಲಿ ಯಾವ ಅರ್ಥವೂ ಇಲ್ಲ ಎಂದು ಚರ್ಚೆಯನ್ನು ಆರಂಭಿಸಿ ಮಾತನಾಡಿದ ನಾನು ಹೇಳಿದೆ. ಹಿಂದೆ ಹಲವು ಬಾರಿ ಸರಕಾರ ಅಸೆಂಬ್ಲಿಯಲ್ಲಿ ಹೇಳಿಕೆಗಳನ್ನು ಮಂಡಿಸಿತ್ತು. ಆದರೆ ಮಾತನಾಡಲು ನಮಗೆ ಅವಕಾಶ ಕೊಟ್ಟಿರಲಿಲ್ಲ. ನಮಗೆ ಮಾತನಾಡಲು ಇದೇ ಮೊದಲ ಸಲ ಅವಕಾಶ ಸಿಕ್ಕಿತು.

ಸಚಿವರ ಹೇಳಿಕೆ ಗಮನಿಸಿದರೆ ಅವರು ಚಹಾ ತೋಟ ಮಾಲಿಕರ ಪರವಾಗಿ ವಾದಿಸುತ್ತಿದ್ದಾರೆ ಎಂದು ಕಾಣುತ್ತದೆ ಎಂದು ನಾನು ಹೇಳಿದೆ. ಅದು ಮಂತ್ರಿಯ ಹೇಳಿಕೆಯಂತೆಯೇ ಭಾಸವಾಗುತ್ತಿಲ್ಲ ಎಂದೆ. ಹೇಳಿಕೆಯಲ್ಲಿ ಕಾರ್ಮಿಕರ ಪರ ಸಹಾನುಭೂತಿಯೇ ಇರಲಿಲ್ಲ. 'ಕಾಳಿಪಾದ ಬಾಬು ಒಂದು ಕಾಲದಲ್ಲಿ ಟ್ರೇಡ್ ಯೂನಿಯನ್ ನಾಯಕರಾಗಿದ್ದವರು' ಎಂದು ನಾನು ನೆನಪಿಸಿದೆ.

ಸಚಿವ ಕಾಳಿಪಾದ ಮುಖರ್ಜಿ ತಮ್ಮ ಹೇಳಿಕೆಯಲ್ಲಿ ಒಂದೇ ಒಂದು ಕಡೆ ಕೂಡ ಮಾಲಿಕರ ತಪ್ಪೇನೆಂದು ಹೇಳಲಿಲ್ಲ. ಅದಕ್ಕೆ ಬದಲಾಗಿ ಮಾಲಿಕರ ಪರ ವಕಾಲತ್ತು ವಹಿಸಿದಂತಿತ್ತು. ಮುಷ್ಕರಕ್ಕೆ ಕಾರಣವೇನು ಎಂಬುದನ್ನು ಕೂಡ ಒಮ್ಮೆಯೂ ಅವರು ಪ್ರಸ್ತಾಪಿಸಲಿಲ್ಲ. ಟೀ ತೋಟ ಕಾರ್ಮಿಕರು ದಯನೀಯ ಜೀವನ ಸಾಗಿಸುತ್ತಿರುವುದಕ್ಕೆ ಕಾರಣ ಏನೆಂಬುದನ್ನು ಅವರು ವಿಶ್ಲೇಷಿಸಲಿಲ್ಲ. ಕೆಲವು ಕಾಂಗ್ರೆಸ್ ಶಾಸಕರು ಕೂಡ ಮಂತ್ರಿಯನ್ನು ಸಮರ್ಥಿಸಿಯೇ ಮಾತನಾಡಿದರು.

ಗೋವಾ ವಿಮೋಚನೆ ಸಮರ.

ಗೋವಾ ವಿಮೋಚನೆ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ನಿರ್ವಹಿಸಿದ ಪಾತ್ರವನ್ನು ವಿವರಿಸುವುದು ಅಗತ್ಯವಾಗಿದೆ.

(ಬ್ರಿಟಿಷರ ದಾಸ್ಯದಿಂದ ಭಾರತ ಬಿಡುಗಡೆಗೊಂಡರೂ ಗೋವಾ ಇನ್ನು ಪೋರ್ಚುಗಿಸರ ಅಧೀನದಲ್ಲಿತ್ತು. ಅದರ ವಿಮೋಚನೆಗಾಗಿ ನಡೆದ ಧೀರ ಸಮರದಲ್ಲಿ ಪಕ್ಷದ ಕರ್ನಾಟಕದ ಮುಖಂಡರಾದ ಎನ್.ಎಲ್. ಉಪಾಧ್ಯಾಯ. ಎನ್ಕೆ. ಉಪಾಧ್ಯಾಯ ಮೊದಲಾದವರು ಪ್ರಾಣದ ಹಂಗು ತೊರೆದು ಹೋರಾಡಿದ್ದರು ಎಂಬುದು ಉಲ್ಲೇಖನೀಯ-)

ಗೋವೆ ವಿಚಾರವಾಗಿ ನಾನು ಮಂಡಿಸಿದ ಅನಧಿಕೃತ ಗೊತ್ತುವಳಿಯನ್ನು ಸರಕಾರ ತಿರಸ್ಕರಿಸಿತು. 1955 ಜುಲೈ 21ರಂದು ವೆಲ್ಲಿಂಗ್ಟನ್ ಚೌಕದಲ್ಲಿ ಕಮ್ಯುನಿಸ್ಟ್ ಪಕ್ಷ ಒಂದು ಸಭೆ ನಡೆಸಿತು. ಪೋರ್ಚುಗೀಸರಿಂದ ಗೋವೆಯನ್ನು ವಿಮೋಚನೆಗೊಳಿಸಲು ಹೋರಾಡಬೇಕು ಮತ್ತು ಈ ಆಂದೋಲನದಲ್ಲಿ ಪಶ್ಚಿಮ ಬಂಗಾಳದ ಜನರು ಭಾಗವಹಿಸಬೇಕು ಎಂದು ಸಭೆ ಕರೆ ಕೊಟ್ಟಿತು.

ಸಾಮ್ರಾಜ್ಯಶಾಹಿಯ ಈ ಕೊನೆಯ ಪಳೆಯುಳಿಕೆಯನ್ನು ಈ ದೇಶದಿಂದ ಕಿತ್ತೊಗೆಯಬೇಕು ಎಂದು ನಾನು ಈ ರ್‍ಯಾಲಿಯಲ್ಲಿ ಕರೆ ನೀಡಿದೆ. ಗೋವೆಯನ್ನು ಮುಕ್ತಗೊಳಿಸಬೇಕು ಮತ್ತು ಅಗತ್ಯಬಿದ್ದರೆ ಭಾರತ ಸರಕಾರ ಆಕ್ರಮಣವನ್ನು ನಡೆಸುವ ಮಟ್ಟಕ್ಕೆ ಈ ಆಂದೋಲನವನ್ನು ಕೊಂಡೊಯ್ಯಬೇಕು. ಗೋವಾ ಹೋರಾಟಕ್ಕೆ ನೆರವು ನೀಡುವಂತೆ ಕರೆ ಕೊಟ್ಟೆವು. ಇದು ರಾಷ್ಟ್ರೀಯ ಗೌರವದ ಪ್ರಶ್ನೆ ಮಾತ್ರವಲ್ಲ, ದೇಶದ ಸಮಗ್ರತೆಯ ಪ್ರಶ್ನೆಯೇ ಇದರಲ್ಲಿ ಅಡಕವಾಗಿತ್ತು.

ಕಮ್ಯುನಿಸ್ಟ್ ಸ್ವಯಂಸೇವಕರು

ಗೋವಾ ವಿಮೋಚನೆ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರಥಮ ಕಮ್ಯುನಿಸ್ಟ್ ಸ್ವಯಂಸೇವಕರು ಜುಲೈ 28ರಂದು ಹೊರಟರು. ತಾವು ಸಾಧಿಸಬೇಕಾಗಿರುವ ಗುರಿಯ ಮಹತ್ವ ಏನೆಂಬುದನ್ನು ಸ್ವಯಂಸೇವಕರಿಗೆ ಚೆನ್ನಾಗಿ ಮನವರಿಕೆ ಮಾಡಿಕೊಡಲಾಗಿತ್ತು. ಪಕ್ಷದ ಪಶ್ಚಿಮ ಬಂಗಾಳ ಘಟಕದ ಕಚೇರಿಯಲ್ಲಿ ನಡೆದ ವಿದಾಯ ಸಮಾರಂಭದ ಅಧ್ಯಕ್ಷತೆಯನ್ನು ಕಾಂ। ನಿರಂಜನ್ ಸೇನ್ ವಹಿಸಿದ್ದರು.

ತಂಡದ ಮುಖಂಡ ಮೊಹಿತೋಷ ನಂದಿ, ರಂಜನ್ ರಾಯ್; ಕಾಂತಿಭೌಮಿಕ, ನಿತ್ಯಾನಂದದ ಸಹಾ, ಪ್ರಿಯನಾಥ ಚಟರ್ಜಿ, ಶಂಕರ್ ರಾಯ್ ಮತ್ತು ಜಾಮಿನಿ ಸಹಾ ಮೊದಲಾದವರು ಪ್ರಥಮ ತಂಡದಲ್ಲಿ ಇದ್ದರು. ವಿಮೋಚನೆ ಸಮರದಲ್ಲಿ ಕಾಂ। ನಿತ್ಯಾನಂದ ಸಹಾ ಹುತಾತ್ಮರಾದರು. ಮದ್ಯಪ್ರದೇಶದ ಕಮ್ಯುನಿಸ್ಟ್ ಕಾರ್ಯಕರ್ತ ಬಿ.ಕೆ. ತೊರಟೆ ಸಹ ಹತರಾದರು. ಮೊಹಿತೊಷ ನಂದಿ ಗುಂಡೇಟಿನಿಂದ ಗಾಯಗೊಂಡರು.

ಪುಣೆಯಲ್ಲಿ ನಿತ್ಯಾನಂದ ಸಹಾ ಮತ್ತು ತೊರಟೆ ಅವರ ಅಂತಿಮ ಸಂಸ್ಕಾರ ನಡೆದಾಗ ಒಂದು ಲಕ್ಷಕ್ಕೂ ಹೆಚ್ಚು ಜನರು ಜಮಾಯಿಸಿದ್ದರು. ಆ ವಿಮೋಚನೆ ಹೋರಾಟದಲ್ಲಿ ಇನ್ನೂ ಅನೇಕ ಮಂದಿ ಹುತಾತ್ಮರಾದರು.

ಅಮೀರ್ ಚಾಂದ್, ಬಾಬು ರಾಯ್, ತೊರಟೆ ಮತ್ತು ಸಹಾ ಮೊದಲಾದ ಹುತಾತ್ಮರ ಗೌರವಾರ್ಥ ಒಂದು ನಿಮಿಷ ಮೌನ ಆಚರಿಸಬೇಕು ಎಂದು ಆಗಸ್ಟ್ 11 ರಂದು ಅಸೆಂಬ್ಲಿಯಲ್ಲಿ ನಾನು ಹೇಳಿದೆ. ಇದು ಕೇಂದ್ರದ ವ್ಯಾಪ್ತಿಗೆ ಬರುವುದರಿಂದ ಹಾಗೆ ಮಾಡಲು ಆಗುವುದಿಲ್ಲ ಎಂದು ಸ್ಪೀಕರ್ ಹೇಳಿಬಿಟ್ಟರು!.

ನಾನು ಯಾವುದೇ ಪ್ರಸ್ತಾವವನ್ನು ಮುಂದಿಟ್ಟಿಲ್ಲ, ಸರಳ ಕ್ರಮದ ಮೂಲಕ ಹುತಾತ್ಮರಿಕೆ ಗೌರವ ತೋರಿಸಬೇಕು. ಎಂದು ಮನವಿ ಮಾಡಿದ್ದೇನೆ ಅಷ್ಟೆ ಎಂದು ಸ್ಪೀಕರ್‌ಗೆ ಹೇಳಿದೆ. ಅದನ್ನು ಸ್ಪೀಕರ್ ತಿರಸ್ಕರಿಸಿದರು. ಸ್ವಲ್ಪ ಸಮಯ ಕಾದ ನಂತರ ಪಕ್ಷದ ಎಲ್ಲಾ ಸದಸ್ಯರು ಎದ್ದುನಿಂತು ಗೌರವ ಅರ್ಪಿಸಿದರು. ಆದರೆ ಕಾಂಗ್ರೆಸ್ ಸದಸ್ಯರು, ಸ್ವಲ್ಪವೂ ವಿಚಲಿತರಾಗಲಿಲ್ಲ. ಗೋವಾ ವಿಮೋಚನೆ ಹೋರಾಟ ಆ ಹೊತ್ತಿಗೆ ಒಂದು ರಾಷ್ಟ್ರೀಯ ಆಂದೋಲನವಾಗಿ ರೂಪುಗೊಂಡಿತ್ತು.

ಲಕ್ಷಾಂತರ ಕಾರ್ಮಿಕರ ಮುಷ್ಕರ

ಆಗಸ್ಟ್ 12 ರಂದು ಮೂರು ಲಕ್ಷ ಕಾರ್ಮಿಕರು ಮತ್ತು ಸಾವಿರಾರು ವಿದ್ಯಾರ್ಥಿಗಳು ಗೋವಾ ಹೋರಾಟಕ್ಕೆ ಬೆಂಬಲವಾಗಿ ಮುಷ್ಕರ ಹೂಡಿದರು. ಆಗಸ್ಟ್ 14 ರಂದು 200 ಸತ್ಯಾಗ್ರಹಿಗಳು ಪಶ್ಚಿಮ ಬಂಗಾಳದಿಂದ ಗೋವಾಕ್ಕೆ ತೆರಳಿದರು. ಆ ಸಂದರ್ಭದಲ್ಲಿ ಮಾತನಾಡಿದ ನಾನು, ಗೋವಾದಿಂದ ಸಾಮ್ರಾಜ್ಯಶಾಹಿಗಳನ್ನು ಹೊಡೆದೋಡಿಸಬೇಕೆಂಬ ಬೇಡಿಕೆಗೆ ದಿನದಿಂದ ದಿನಕ್ಕೆ ಬಲ ಬರುತ್ತಿದೆ ಎಂದು ಹೇಳಿದೆ.

"ನೂರಾರು ಭಾರತೀಯರು ಗೋವಾದತ್ತ ಮುನ್ನುಗ್ಗುತ್ತಿದ್ದಾರೆ. ಒಂದು ವೇಳೆ ಸಾಮ್ರಾಜ್ಯ ಆಕ್ರಮಣ ಮಾಡಲು ನಿರ್ಧರಿಸಿದರೆ, ಅದನ್ನು ಎದುರಿಸಲು ನಾವು ಸಿದ್ದರಿರಬೇಕು. ಸಾಮೂಹಿಕ ಚಳುವಳಿಗಳ ಅಗತ್ಯವಿದೆ. ಎಲ್ಲಾ ಫ್ಯಾಕ್ಟರಿಗಳು, ಶಿಕ್ಷಣ ಸಂಸ್ಥೆಗಳು, ಕಚೇರಿಗಳು, ನ್ಯಾಯಾಲಯಗಳು, ಬಂದರುಗಳು ಮತ್ತು ಸ್ಥಳೀಯ ಮಾರುಕಟ್ಟೆಗಳಿಗೆ ಕೂಡ ಪ್ರತಿಭಟನೆ ಹಬ್ಬಬೇಕು. ಈ 200 ಸ್ವಯಂಸೇವಕರ ಹಿಂದೆ ಇಡೀ ಪಶ್ಚಿಮ ಬಂಗಾಳವೇ ಇದೆ ಎಂಬುದನ್ನು ಪೋರ್ಚುಗೀಸ ಸರಕಾರಕ್ಕೆ ತೋರಿಸಿಕೊಡಲು ಎಲ್ಲ ಮಟ್ಟದಲ್ಲಿ ನಮ್ಮ ಸ್ಥಳೀಯ ಸಮಿತಿಗಳನ್ನು ಸಕ್ರಿಯಗೊಳಿಸಬೇಕು. ಸ್ವಯಂಸೇವಕರು, ಮತ್ತು ಅನಂತರ ಭಾರತೀಯ ಸೇನೆ-ಗೋವಾಕ್ಕೆ ತೆರಳುವುದನ್ನು ಖಾತರಿಪಡಿಸಲು ಪಶ್ಚಿಮ ಬಂಗಾಳ ಏನು ಬೇಕಾದರೂ ಮಾಡಲು ಸಿದ್ಧ ಎಂಬುದನ್ನು ನೆಹರು ಸರಕಾರಕ್ಕೆ ತಿಳಿಯಪಡಿಸಬೇಕು ಎಂದು ನಾನು ಹೇಳಿದೆ.

ಪೋರ್ಚುಗೀಸ ಸೇನೆ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಿದಾಗ ನಿಶಸ್ತ್ರ ಭಾರತೀಯ ಸ್ವಯಂಸೇವಕರ ಪೈಕಿ 20 ಜನರು ಮೃತಪಟ್ಟರು. ಅವರಲ್ಲಿ ಒಬ್ಬ ಮಹಿಳೆ ಸೇರಿದ್ದರು. ಈ ಹತ್ಯಾಕಾಂಡ ನಡೆದದ್ದು 1955ರ ಸ್ವಾತಂತ್ರ್ಯ ದಿನಾಚರಣೆಯಂದು ಅದೇ ದಿನ ಕಮ್ಯುನಿಸ್ಟ್ ಪಕ್ಷ ಪಾರ್ಕ್ ಸರ್ಕಸ್ ಮೈದಾನದಲ್ಲಿ ರ್‍ಯಾಲಿ ನಡೆಸಿತು. ತಕ್ಷಣವೇ ಗೋವಾದಲ್ಲಿ ಮಧ್ಯಪ್ರವೇಶ ಮಾಡುವಂತೆ ನೆಹರೂ ಸರಕಾರಕ್ಕೆ ಕರೆ ನೀಡಿತು.

ಗೋವಾಕ್ಕೆ ಸಂಬಂಧಿಸಿ ಪಕ್ಷದ ನೀತಿಯನ್ನು ಎಷ್ಟರವರೆಗೆ ವಿವರಿಸಿದ್ದಾಯಿತು. ಈಗ ದಾಖಲೆಗಳನ್ನು ಪರಿಶೀಲಿಸುವಾಗ ಕೆಳಗಿನ ಅಂಶಗಳು ಸ್ಪಷ್ಟವಾಗುತ್ತವೆ. ಗೋವಾ ವಿಮೋಚನೆ ಹೋರಾಟದಲ್ಲಿ 1955 ಆಗಸ್ಟ್ 15ರವರೆಗೆ 31 ಜನರು ಹತರಾದರು. 74 ಮಂದಿ ಗಾಯಗೊಂಡರು ಮತ್ತು ಐದು ಜನರು ನಾಪತ್ತೆಯಾದರು. ಮುಂಬಯಿಯಲ್ಲಿ ಒಂದು ಪ್ರತಿಭಟನಾ ಹರತಾಳ ತುಂಬ ಯಶಸ್ವಿಯಾಗಿ ನಡೆಯಿತು. ಆಗಸ್ಟ್ 16 ರಂದು ಪಶ್ಚಿಮಬಂಗಾಳದಲ್ಲಿ ಪೂರ್ಣ ಬಂದು ಆಚರಿಸಲಾಯಿತು. ಅದೇ ದಿನ, ಗೋವಾ ವಿಮೋಚನೆ ಸಮಿತಿ ಮತ್ತು ಮೂರು ಕೇಂದ್ರೀಯ ಟ್ರೇಡ್ ಯೂನಿಯನ್‌ಗಳು ಕರೆ ನೀಡಿದ ರ್‍ಯಾಲಿಯಲ್ಲಿ ಸುಮಾರು ಎರಡು ಲಕ್ಷ ಜನರು ಭಾಗವಹಿಸಿದ್ದರು. ಕಮ್ಯುನಿಸ್ಟರು ಗೋವಾ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದರು. ಸರಕಾರ ಒಂದು ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿದರು. ಪ್ರೊ. ಹಿರೇನ್ ಮುಖರ್ಜಿ ಪ್ರಸ್ತಾವವನ್ನು ಮಂಡಿಸಿದರು, ಲೋಕಸಭೆಯಲ್ಲಿ ಎ.ಕೆ. ಗೋಪಾಲನ್ ಈ ವಿಷಯದ ಮೇಲೆ ಮಾತನಾಡಿದರು.

ಆರ್.ಎಸ್.ಪಿ. ನಾಯಕ್ 'ತ್ರಿದಿಬ್ ಚೌಧರಿಗೆ ಸೆರೆಮನೆಯಲ್ಲಿ ಹಿಂಸೆ. (ಮುಂದುವರಿಯುವುದು)

ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಹೋರಾಡಲು ಸಾಮೂಹಿಕ ಸಂಘಟನೆಗಳ ನಿರ್ಧಾರ

ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಅತ್ಯುತ್ಸಾಹದಿಂದ ಜಾರಿ ಮಾಡುತ್ತಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ನೀತಿಗಳಿಂದಾಗಿ ಕಾರ್ಮಿಕ ವರ್ಗ ಮತ್ತು ಜನಸಾಮಾನ್ಯರು ಎದುರಿಸುತ್ತಿರುವ ಸಂಕಷ್ಟಗಳ ಕುರಿತು ಸಾಮೂಹಿಕ ಸಂಘಟನೆಗಳ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಸಮಾವೇಶವು ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಮಾರ್ಚ್ 2 ರಂದು ಮಂಗಳೂರಿನ ರಾಜ್ಯ ಸರಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಸಮಾವೇಶವು ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ನೇತೃತ್ವದಲ್ಲಿ ಮಾರ್ಚ್ 9 ರಂದು ದಿಲ್ಲಿಯಲ್ಲಿ ನಡೆಯಲಿರುವ ರ್‍ಯಾಲಿಯಲ್ಲಿ ಜಿಲ್ಲೆಯ ವಿವಿಧ ಸಂಘಟನೆಗಳ ಸದಸ್ಯರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದೂ, ಶೀಘ್ರದಲ್ಲೇ ಸಂಘಟಿಸಲ್ಪಡುವ ಅಖಿಲ ಭಾರತ ಮುಷ್ಕರಕ್ಕಾಗಿ ಸಿದ್ಧತೆ ನಡೆಸಬೇಕೆಂದೂ ತೀರ್ಮಾನಿಸಿದೆ.

ಸಿಐಟಿಯು ಜಿಲ್ಲಾಧ್ಯಕ್ಷ ಸಿ. ನಂಜುಂಡಪ್ಪ, ಎಐಟಿಯುಸಿ ಮುಂದಾಳು ಬಿ.ಕೆ. ಕೃಷ್ಣಪ್ಪ ಮತ್ತು ಎಚ್.ಎಂ.ಎಸ್. ಜಿಲ್ಲಾಧ್ಯಕ್ಷ ಕೆ. ಸಂಜೀವಶೆಟ್ಟಿಯವರನ್ನೊಳಗೊಂಡ ಅಧ್ಯಕ್ಷಮಂಡಳಿಯಿಂದ ನಡೆಸಲ್ಪಟ್ಟ ಸಮಾವೇಶದಲ್ಲಿ ಸಿಐಟಿಯು, ಎಐಟಿಯುಸಿ, ಎಚ್.ಎಂ.ಎಸ್., ಅಖಿಲ ಭಾರತ ವಿಮಾ ನೌಕರರ ಸಂಘ, ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ, ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನ್ ಆಫ್ ಇಂಡಿಯಾ, ಡಿವೈಎಫ್ಐ, ಎಐವೈಎಫ್, ಸಾಮಾನ್ಯ ವಿಮಾ ನೌಕರರ ಸಂಘ, ಎಸ್.ಎಫ್.ಐ, ಪಿಯರ್‌ಲೆಸ್ ಎಂಪ್ಲಾಯಿಸ್ ಯೂನಿಯನ್, ಎಸ್.ಎಂ.ಪಿ.ಟಿ ಸ್ಟಾಫ್ ಅಸೋಸಿಯೇಶನ್ ಮೊದಲಾದ ಸಂಘಟನೆಗಳ ನೇತೃತ್ವದ ಕಾರ್ಮಿಕರು, ನೌಕರರು, ವಿದ್ಯಾರ್ಥಿಗಳು ಮತ್ತು ಯುವಜನರು ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಮಾಧವರವರು ಮಾತನಾಡುತ್ತಾ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಐಎಂಎಫ್, ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಯ ಒತ್ತಡಗಳಿಗೆ ಮಣಿದು ನಮ್ಮ ದೇಶದ ಇಡೀ ಆರ್ಥಿಕ ರಂಗವನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಸುಲಿಗೆಗೆ ತೆರೆದಿಟ್ಟಿದೆ ಎಂದು ಟೀಕಿಸಿದರು. ಸರಕಾರವು ಜನತೆಯ ಹಿತವನ್ನು ಬಲಿಗೊಡಲು ಮಾಲಿಕರ ಸಂಘಗಳ ಮಾರ್ಗದರ್ಶನ ಪಡೆಯುತ್ತಿದೆ ಎಂದು ಆರೋಪಿಸಿದ ಅವರು, ಈ ಸಲದ ಬಜೆಟಿನ ಪರಿಣಾಮವಾಗಿ ಏಪ್ರಿಲ್ 1 ರಿಂದ ರೇಶನ್ ಅಕ್ಕಿಯ ಬೆಲೆ ರೂ. 11-78ಕ್ಕೆ ಮತ್ತು ರೇಶನ್ ಸಕ್ಕರೆಯ ಬೆಲೆ ರೂ. 14ಕ್ಕೆ ಏರಲಿದ್ದು ಯೂರಿಯಾದ ಮೇಲೆ ತೆರಿಗೆ ಹೆಚ್ಚಳ ಸಾಮಾನ್ಯ ಭವಿಷ್ಯ ನಿಧಿಯ ಬಡ್ಡಿಯಲ್ಲಿ ಶೇಕಡಾ 1 ಕಡಿತದಂತಹ ಜನವಿರೋಧಿ ಕ್ರಮಗಳನ್ನು ಕೈಗೊಂಡ ನಂತರವೂ ಬಿಜೆಪಿ ತಾವು ನಿರೀಕ್ಷಿಸಿದಷ್ಟು ಕಠಿಣವಾಗಿಲ್ಲವೆಂದು ಮಾಲಿಕರ ಸಂಘಗಳು ಅತೃಪ್ತಿ ವ್ಯಕ್ತಪಡಿಸಿರುವುದನ್ನು ಉದಾಹರಿಸಿದರು.

ಎಚ್.ಎಂ.ಎಸ್.ನ ರಾಜ್ಯಾಧ್ಯಕ್ಷ ಎಂ. ಲೋಕಯ್ಯ ಶೆಟ್ಟರು ಮಾತನಾಡುತ್ತಾ, ಸರಕಾರವು ಜನಸಾಮಾನ್ಯರ ಹಿತಾಸಕ್ತಿಗಳನ್ನು ರಕ್ಷಿಸುವುದರಲ್ಲಿ ವಿಫಲವಾಗಿರುವುದರಿಂದ ದುಡಿಯುವ ಜನರ ಐಕ್ಯ ಚಳುವಳಿಗಳನ್ನು ಬಲಪಡಿಸಬೇಕೆಂದು ಕರೆ ನೀಡಿದರು. ಎಐಟಿಯುಸಿಯ ಜಿಲ್ಲಾ ಕಾರ್ಯದರ್ಶಿ ಚಂದಪ್ಪ ಅಂಚನ್ ಮಾತನಾಡಿ, ಸರಕಾರದ ಅಪಾಯಕಾರಿ ನೀತಿಗಳ ವಿರುದ್ಧ ಜನಸಾಮಾನ್ಯರ ನಡುವೆ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಕರೆ ನೀಡಿದರು.

ಬ್ಯಾಂಕ್ ಎಂಪ್ಲಾಯಿಸ್ ಫೆಡರೇಶನ್ ಆಫ್ ಇಂಡಿಯಾದ ಮುಂದಾಳು ಬಿ.ಎಂ. ಮಾಧವನವರು ಮಾತನಾಡುತ್ತಾ, ರಾಷ್ಟ್ರೀಕೃತ ಬ್ಯಾಂಕುಗಳ 50 ಸಾವಿರ ಕೋಟಿ ರೂಪಾಯಿಗಳ ಸಾಲ ಹಿಂತಿರುಗಿಸದ ದೊಡ್ಡ ಉದ್ಯಮಿಗಳ ಒತ್ತಡಕ್ಕೆ ಮಣಿದು ಸರಕಾರವು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತನ್ನ ಪಾಲನ್ನು ಶೇಕಡಾ 33ಕ್ಕೆ ಇಳಿಸಲು ತೀರ್ಮಾನಿಸಿದೆ ಎಂದರು. ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ ಮುಂದಾಳು ವಸಂತರಾವ್ ಅವರು ಮಾತನಾಡುತ್ತಾ ನರಸಿಂಹಂ ಸಮಿತಿಯ ವರದಿಯನ್ನು ಜಾರಿ ಮಾಡುವ ಕೇಂದ್ರ ಸರಕಾರದ ನಿರ್ಧಾರದಿಂದಾಗಿ ಜನಸಾಮಾನ್ಯರ ಹಿತಕ್ಕೆ ಧಕ್ಕೆಯಾಗಲಿದೆ ಎಂದು ಹೇಳಿದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಮುಂದಾಳು ಎ.ಎಸ್. ಆಚಾರ್ಯರು ಮಾತನಾಡುತ್ತಾ ಬಹುರಾಷ್ಟ್ರೀಯ ಸಂಸ್ಥೆಗಳ ಪ್ರವೇಶದಿಂದಾಗಿ ನಮ್ಮ ದೇಶದ ಅನೇಕ ಕೈಗಾರಿಗಳು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿರುವುದನ್ನು ವಿವರಿಸಿದರು. ಸಾಮಾಜಿಕ ಸಮಸ್ಯೆಗಳನ್ನು ಎತ್ತಿತೋರಿಸುವ ಸಿನಿಮಾ ಮತ್ತು ಇತರ ಕಲಾವಿದರ ಮೇಲೆ ನಡೆಯುತ್ತಿರುವ ಆಕ್ರಮಣಗಳನ್ನು ಖಂಡಿಸಿದ ಅವರು ಇಂತಹ ಫ್ಯಾಸಿಸ್ಟ್ ಪ್ರವೃತ್ತಿಗಳನ್ನು ಎಲ್ಲಾ ಪ್ರಜಾಪ್ರಭುತ್ವವಾದಿಗಳೂ ವಿರೋಧಿಸಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಕೆ. ವಸಂತ ಆಚಾರಿಯವರು ಸ್ವಾಗತಿಸಿದರು. ಕೊನೆಯಲ್ಲಿ ನಾಗೇಶ್ ಕುಮಾರ್ ವಂದಿಸಿದರು.

ಯಶಸ್ವಿ ಪಾರ್ಲಿಮೆಂಟ್ ಚಲೋ

ಮೇ 11 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ

"ನಿಮ್ಮ ಹೊಟ್ಟೆಗೆ ಕಟ್ಟಿಕೊಂಡಿರುವ ಬೆಲ್ಟನ್ನು ಇನ್ನೂ ಬಿಗಿಗೊಳಿಸಿಕೊಳ್ಳಲು ಸಿದ್ಧರಾಗಿ" ಎಂದೇ ಜನಸಾಮಾನ್ಯರನ್ನು ಎಚ್ಚರಿಸಿಕೊಂಡು ಬಂದ ಕೇಂದ್ರ ಸರ್ಕಾರದ ಬಜೆಟ್‌ನ ಹೊರೆ, ಆರ್.ಎಸ್.ಎಸ್. ನಂತಹ ಕೋಮುವಾದಿ ಶಕ್ತಿಗೆ, ಸರ್ಕಾರವೇ ರಕ್ಷಣೆ ನೀಡಿ ಪೋಷಿಸುವ ಗುಜರಾತ್ ಬಿಜೆಪಿ ಸರ್ಕಾರ ಹಾಗೂ ಬೆಂಬಲಿಸುವ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಪಾರ್ಲಿಮೆಂಟ್‌ನಲ್ಲಿ ನಿಲ್ಲದ ಹೋರಾಟ. ಬಿಹಾರದಲ್ಲಿ ರಾಜ್ಯಪಾಲರನ್ನು ಬಳಸಿ, ನಿತೀಶ್‌ಕುಮಾರ್ ಸರ್ಕಾರ ರಚಿಸಲು ಅವಕಾಶ ನೀಡಿದ ಪ್ರಜಾಪ್ರಭುತ್ವದ ಕಗ್ಗೊಲೆ,



ಭಾರತದ ಜನತೆಯ ಹಾಗೂ ವಿಶ್ವದ ಜನತೆಯ ಮಹಾ ಶತ್ರುವಾಗಿರುವ ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್‌ಗೆ ಸಂಭ್ರಮದ ಸ್ವಾಗತ ನೀಡಲು 'ದೇಶಪ್ರೇಮಿ' ಸರ್ಕಾರದ ಸಿದ್ಧತೆಗಳು...... ಜನರನ್ನು ದಿಕ್ಕು ತಪ್ಪಿಸುವ ಹಲವಾರು ಕುತಂತ್ರಗಳು.... ದೇಶವನ್ನೇ ವಿದೇಶಿ ಕಂಪನಿಗಳಿಗೆ ಮಾರುವ ದೇಶದ್ರೋಹಿ ನೀತಿಗಳ ವಿರುದ್ಧ ಜಾಗ್ರತ ದುಡಿಯುವ ರೈತ-ಕಾರ್ಮಿಕರು, ಮಹಿಳೆ, ಯುವಜನ-ವಿದ್ಯಾರ್ಥಿ, ನೌಕರರು, ಬುದ್ಧಿಜೀವಿಗಳು ಲಕ್ಷ ಲಕ್ಷ ಜನತೆಯ ಮಹಾನ್ ರ್‍ಯಾಲಿ ಮಾರ್ಚ್ 9 ರಂದು ನವದೆಹಲಿಯಲ್ಲಿ ನಡೆಯಿತು. ದೇಶವನ್ನು ಉಳಿಸುವುದು ಕೇವಲ ಪಾರ್ಲಿಮೆಂಟ್ ಒಳಗಿನ ಹೋರಾಟದಿಂದ ಮಾತ್ರವೇ ಸಾಲದು ಭವಿಷ್ಯತ್ತು ನಿರ್ಧಾರ ಆಗುವುದು ಬೀದಿ ಬೀದಿಗಳ ಮೇಲೆ ನಡೆಯುವ ಹೋರಾಟದಿಂದ ಎಂದು ಮನಗಂಡು ಕರ್ನಾಟಕ, ಬಿಹಾರ, ಪಂಜಾಬ್, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಗುಜರಾತ್ ಮುಂತಾದ ಭಾರತದ ವಿವಿಧ ರಾಜ್ಯಗಳ ಹಳ್ಳಿ ಹಳ್ಳಿಗಳಿಂದ ಪಟ್ಟಣ ಪ್ರದೇಶಗಳಿಂದ ಸಾವಿರಾರು ತೊರೆಗಳಾಗಿ ಹರಿದು ಬಂದ ಲಕ್ಷೋಪಲಕ್ಷ ಜನತೆ ಪಾರ್ಲಿಮೆಂಟ್ ಚಲೋ ನಡೆಸಿ ಸರ್ಕಾರಕ್ಕೆ ಎಚ್ಚರಿಕೆಯ ಕಹಳೆ ಮೊಳಗಿಸಿದರು.

ದೇಶವಿರೋಧಿ, ಜನವಿರೋಧಿ ಆರ್ಥಿಕ ನೀತಿಗಳು ಮತ್ತು ಕೋಮುವಾದಿ ಶಕ್ತಿಗಳಿಗೆ ಪೋಷಣೆ ನೀಡುವ ಸರ್ಕಾರದ ನೀತಿಗಳ ವಿರುದ್ಧ ದೇಶಾದ್ಯಂತ 2000 ಇಸ್ವಿ ಮೇ 11 ರಂದು 'ಸಾರ್ವತ್ರಿಕ ಮುಷ್ಕರ' ನಡೆಸಲು ಒಕ್ಕೊರಲಿನಿಂದ ನಿರ್ಧರಿಸಲಾಯಿತು.

ಕೆಂಪು ಕೋಟೆಯ ತುಂಬಾ ಕೆಂಬಾವುಟ

ಈ ಮೊದಲು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಸಭೆ, ಸಮಾವೇಶ, ಪ್ರಚಾರಾಂದೋಲನ ನಡೆಸಿ ವ್ಯಾಪಕ ಸಿದ್ಧತೆ ನಡೆಸಿದ 'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ'(NPMO) ನೇತೃತ್ವದಲ್ಲಿ ನಡೆದ ಈ ರ್‍ಯಾಲಿ ಅತ್ಯಂತ ಯಶಸ್ವಿಯಾಗಿದೆ. ವೇದಿಕೆಯ ಕರೆಗೆ ಓಗೊಟ್ಟ 'ಕಾರ್ಮಿಕ ಸಂಘಟನೆಗಳೂ, ರೈತರೂ, ಕೃಷಿ-ಕೂಲಿಕಾರರು, ವಿದ್ಯಾರ್ಥಿ-ಯುವಜನ, ಮಹಿಳೆ, ಬ್ಯಾಂಕ್-ವಿಮಾ ನೌಕರರು ಮುಂತಾಗಿ ಒಳಗೊಂಡ ಬೃಹತ್ ಮೆರವಣಿಗೆಯು ದೆಹಲಿಯ ಕೆಂಪು ಕೋಟೆಯಿಂದ ಹೊರಟು ರಾಮಲೀಲಾ ಮೈದಾನವನ್ನು ತಲುಪಿತು. ವಿವಿಧ ರಾಜ್ಯಗಳ-ಭಾಷೆಗಳ ಬ್ಯಾನರ್, ಭಿತ್ತಿಪತ್ರ, ಆಯಾ ಸಂಘಟನೆಗಳ ಬಾವುಟ ಹಿಡಿದ ಜನತೆ ಮೆರವಣಿಗೆ ರಸ್ತೆಗಳಲ್ಲಿ ತುಂಬಿ ಹರಿಯಿತು. ನಾಡಿನ ಶ್ರಮಜೀವಿ, ದೇಶ ಪ್ರೇಮಿಗಳ ಮುಗಿಲು ಮುಟ್ಟುವ ಘೋಷಣೆಗಳನ್ನು ಕೇಳಿದ ದೆಹಲಿಯ ನಾಗರೀಕರು ರಸ್ತೆಗಳು ಇಕ್ಕೆಲಗಳಲ್ಲಿ ಸೇರಿ

ಪುಟ 8 ಕ್ಕೆ

ವಾಜಪೇಯಿ ಸರ್ಕಾರದ ನೀತಿ ವಿರುದ್ಧ ಸುರ್ಜಿತ್ ಆಕ್ರೋಶ

ರಸಗೊಬ್ಬರ ಹಾಗೂ ಪಡಿತರ ಆಹಾರ ಧಾನ್ಯದ ಬೆಲೆ ಹೆಚ್ಚಿಸಿದ್ದಲ್ಲದೆ ಬಹುದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಕ್ಕೆ ಅವಕಾಶ ಕೊಡುವ ಮೂಲಕ ಎನ್‌ಡಿಎ ಸಮ್ಮಿಶ್ರ ಸರಕಾರದ ನೀತಿಗಳು ದೇಶವನ್ನು ಆರ್ಥಿಕ ದುರಂತದತ್ತ ಕೊಂಡೊಯ್ಯಲಿವೆ ಎಂದು ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ತೀವ್ರವಾಗಿ ಕಿಡಿ ಕಾರಿದ್ದಾರೆ.

ಅವರು ಯಾರನ್ನೂ ಬಿಟ್ಟಿಲ್ಲ

"ಅವರು (ಬಿಜೆಪಿ ನೇತೃತ್ವದ ಸರಕಾರ) ಯಾರನ್ನೂ ಬಿಟ್ಟಿಲ್ಲ, 2000-2001 ನೇ ಸಾಲಿನ ಸಾಮಾನ್ಯ ಮುಂಗಡ ಪತ್ರದಲ್ಲಿ ರೈತರು, ಬಡಜನರು ಮತ್ತು ದುಡಿಯುವ ವರ್ಗದವರ ಮೇಲೆ ಹೊರೆ ಹೊರಿಸಿದ್ದಾರೆ. ವಿಶ್ವ ಬ್ಯಾಂಕ್ ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅವರ ಆದೇಶಕ್ಕೆ ತಲೆಬಾಗಿಸಿ, ಬಹುದೊಡ್ಡ ರೀತಿಯಲ್ಲಿ ಖಾಸಗಿಕರಣವನ್ನು ಒಪ್ಪಿಕೊಂಡಿದೆ" ಎಂದು ಸುರ್ಜಿತ್ ಅವರು ಆಕ್ಷೇಪಣೆ ವ್ಯಕ್ತಪಡಿಸಿದರು.

ರಾಜಧಾನಿಯ ರಾಮಲೀಲಾ ಮೈದಾನದಲ್ಲಿ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರನ್ನುದ್ದೇಶಿಸಿ ಗುರುವಾರ ಏರ್ಪಡಿಸಲಾಗಿದ್ದ ಭಾರೀ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದರು.

ದೇಶ ವಿರೋಧಿ ರೀತಿಯಲ್ಲಿ ಉದಾರೀಕರಣ ಪ್ರಕ್ರಿಯೆಯನ್ನು ಜಾರಿಗೆ ತರುತ್ತಿರುವುದನ್ನು ಖಂಡಿಸಿದ ಅವರು, ರೋಗಗ್ರಸ್ತ ಕೈಗಾರಿಕಾ ಘಟಕಗಳ ಜೊತೆಯಲ್ಲಿಯೇ ಅತ್ಯಂತ ಹೆಚ್ಚು ಲಾಭದಲ್ಲಿರುವ ಸಾರ್ವಜನಿಕ ರಂಗದ ಉದ್ದಿಮೆಗಳನ್ನು ಹಾಗೂ ಬ್ಯಾಂಕುಗಳನ್ನು ಮುಚ್ಚಲಾಗುತ್ತಿದೆ ಎಂದು ಸುರ್ಜಿತ್ ಆಪಾದಿಸಿದರು.

ಸಮೂಹ ಸಂಘಟನೆಗಳ ರಾಷ್ಟ್ರೀಯ ವೇದಿಕೆಯಡಿ ಸಂಘಟಿಸಲಾಗಿದ್ದ ದೇಶ ಮಟ್ಟದ ರ್‍ಯಾಲಿಯಲ್ಲಿ ಮಾತನಾಡುತ್ತಿದ್ದ ಸಿಪಿಐ(ಎಂ) ಮುಖಂಡ ಹರಿಕಿಶನ್ ಸಿಂಗ್ ಸುರ್ಜಿತ್ ಅವರು, ಇತರೆಲ್ಲ ಪಕ್ಷಗಳಿಗಿಂತ ಹೆಚ್ಚು ರಾಷ್ಟ್ರೀಯವಾದಿ ಎಂದು ಹೇಳಿಕೊಳ್ಳುವ ಬಿಜೆಪಿ ಜನವಿರೋಧಿ ಆರ್ಥಿಕ ನೀತಿಗಳನ್ನು ತೀವ್ರವಾಗಿ ಅನುಷ್ಠಾನಕ್ಕೆ ತರುತ್ತಿದೆ ಎಂದು ವ್ಯಂಗ್ಯವಾಡಿದರು.

ರೈತರಿಗೆ ಅನಾನುಕೂಲವಾಗುವಂತೆ ರಸಗೊಬ್ಬರದ ಸಹಾಯಧನವನ್ನು ರದ್ದುಪಡಿಸಲಾಗಿದೆ, ಜನಸಾಮಾನ್ಯರ ಹಿತಕ್ಕೆ ವಿರುದ್ಧವಾಗಿ ಪಡಿತರ ಚೀಟಿಯ ಆಧಾರದ ಮೇಲೆ ವಿತರಿಸುವ ಅಕ್ಕಿ, ಗೋದಿ ಹಾಗೂ ಸಕ್ಕರೆ ಬೆಲೆಯನ್ನು ಹೆಚ್ಚಿಸಲಾಗಿದೆ ಎಂದು ಅವರು ದೂರಿದರು.

10 ಕೆ.ಜಿ ಧಾನ್ಯವನ್ನೇ ಕೊಳ್ಳಲಾಗದೆ ಒದ್ದಾಡುವ ಬಡವ ಅದು ಹೇಗೆ ಹೆಚ್ಚಿಸಿದ ದಾರಣೆಗೆ 20 ಕೆಜಿಯನ್ನು ಖರೀದಿಸಬಲ್ಲ ಎಂದು ಸುರ್ಜಿತ್ ಪ್ರಶ್ನಿಸಿದರು.

ವಿವಿಧ ಕಾರ್ಮಿಕ ಸಂಘಟನೆಗಳಿಗೆ ಸೇರಿದ ನೂರಾರು ಕಾರ್ಯಕರ್ತರು ಕೆಂಪುಕೋಟೆಯಿಂದ ರಾಮಲೀಲಾ ಮೈದಾನದವರೆಗೆ, ಬ್ಯಾನರು ಮತ್ತು ಭಿತ್ತಿಪತ್ರಗಳನ್ನು ಹಿಡಿದು ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಬಂದರು.

ಎನ್‌ಡಿಎ ಸರಕಾರದ ವಿರುದ್ಧ ಎಲ್ಲ ಹಂತಗಳಲ್ಲೂ ಹೋರಾಟ ಮಾಡಬೇಕೆಂದು ಕರೆ ನೀಡಿದ ಅವರು, ಅವರ ಜನವಿರೋಧಿ ನೀತಿಗಳನ್ನು ಈಗಲೇ ತಡೆಯದೇ ಹೋದರೆ ಮುಂದೆ ಅವು ದೇಶಕ್ಕೆ ದೊಡ್ಡ ದುರಂತವನ್ನೇ ತರುತ್ತವೆ ಎಂದು ಎಚ್ಚರಿಕೆ ನೀಡಿದರು.

ಕಾರ್ಗಿಲ್ ಯುದ್ಧ ; ಬಿಜೆಪಿ ಸರ್ಕಾರವೆಂಬ ಮಹಾಪರಾಧಿ

ಕಾರ್ಗಿಲ್ ವಿಮರ್ಶಾ ಸಮಿತಿಯ ವರದಿಯ ಲೇಖನ

ಕಾರ್ಗಿಲ್ ಯುದ್ಧ ಭಾರತದ 400ಕ್ಕೂ ಹೆಚ್ಚು ಸೈನಿಕರನ್ನು ಆಹುತಿ ತೆಗೆದುಕೊಂಡಿತು. ಇಡೀ ದೇಶ ಕಂಬನಿಮಿಡಿಯಿತು. ಜನರು ದೇಶರಕ್ಷಣೆಗಾಗಿ ಒಂದಾಗಿ, ದೃಢವಾಗಿ ಪರಿಸ್ಥಿತಿಯನ್ನು ಎದುರಿಸಿದರು. 99ರ ಚುನಾವಣೆಗಳಲ್ಲಿ ಬಿಜೆಪಿ ರಾಜಕೀಯ ಲಾಭವನ್ನೂ ಪಡೆದರು. ಆದರೆ ಈ ಯುದ್ಧದ ಆದರಿಂದುಂಟಾದ ಸಂಕಟಗಳ ಹೊಣೆಯಾರದು? ಅದನ್ನು ಕಂಡು ಹಿಡಿಯಲೆಂದು ಬಿಜೆಪಿ ಸರ್ಕಾರವೇ ನೇಮಿಸಿದ್ದ ರಕ್ಷಣಾ ತಜ್ಞ ಕೆ. ಸುಬ್ರಮಣ್ಯಂರವರ ನೇತೃತ್ವದ ಕಾರ್ಗಿಲ್ ವಿಮರ್ಶಾ ಸಮಿತಿ ಏನು ಹೇಳಿದೆ? ಈ ಬಗ್ಗೆ ಸುರಜೀತ್‌ರವರಿಂದ ಲೇಖನ.

ವಾಜಪೇಯಿ ಸರಕಾರ ನಮ್ಮ ದೇಶದ ಉತ್ತರ ಭಾಗಗಳಲ್ಲಿ ಉಂಟಾಗುತ್ತಿದ್ದ ಬೆಳವಣಿಗೆಗಳತ್ತ ಗಮನ ಕೊಟ್ಟಿದ್ದರೆ ಕಾರ್ಗಿಲ್ ಯುದ್ಧವನ್ನು ತಪ್ಪಿಸಬಹುದಿತ್ತು. ನಮ್ಮ ಸೈನಿಕರ ಅಮೂಲ್ಯ ಪ್ರಾಣ ಹಾನಿ ಹಾಗೂ ಅಪಾರ ಸಂಪನ್ಮೂಲಗಳ ಹಾನಿಯನ್ನು ತಪ್ಪಿಸಬಹುದಿತ್ತು ಎಂಬುದು ನಾವು ಬಹಳ ದಿನಗಳಿಂದ ಹೇಳುತ್ತಾ ಬಂದ ಮಾತು. ಇತ್ತೀಚೆಗೆ ಸರ್ಕಾರಕ್ಕೆ ಕಾರ್ಗಿಲ್ ಪರಾಮರ್ಶೆ ಸಮಿತಿ ಸಲ್ಲಿಸಿದ ವರದಿ ಕೂಡಾ ಈಗ ಇದನ್ನೇ ಒತ್ತಿ ಹೇಳಿದೆ.

ಕೆ. ಸುಬ್ರಮಣ್ಯಂ ನೇತೃತ್ವದ ಈ ವರದಿಯ ಮಿತಿಗಳು, ನ್ಯೂನತೆಗಳು ಏನೇ ಇರಬಹುದು. ಕಾರ್ಗಿಲ್ ಘಟನೆಯ ಬಗ್ಗೆ ಮಾತ್ರ ಅದು ಒಂದು ನೇರ ಮಾತು ಹೇಳಿದೆ. "ಕಾರ್ಗಿಲ್ ಅತಿಕ್ರಮಣ ನಿಜವಾಗಿ ಅಂತರ್ರಾಷ್ಟ್ರೀಯ ರಾಡರ್ ಪರದೆಯ ಮೇಲೆ ಮರೆಯಾಗುತ್ತಿದ್ದ ಕಾಶ್ಮೀರ ಪ್ರಶ್ನೆಯನ್ನು ಅಂತರರಾಷ್ಟ್ರೀಯ ಪ್ರಶ್ನೆಯಾಗಿಸುವ ಒಂದು ಸೀಮಿತ ಪಾಕಿಸ್ತಾನೀ ಮಿಲಿಟರಿ ಕಸರತ್ತು ಆದರಿಂದಾಗಿ ಅದು ರಾಜಕೀಯವಾಗಿ, ರಾಜತಾಂತ್ರಿಕವಾಗಿ ಲಾಭ ಪಡೆದಿದೆ" ಹೀಗೆಂದಿದೆ. ಈ ವರದಿಯೇ ನೀಡಿರುವ ಸಾರಾಂಶ ಸಿಪಿಐ(ಎಂ) ಮತ್ತು ದೇಶದಲ್ಲಿನ ಇತರ ಹಲವರು ಇದನ್ನೇ ತಾನೇ ಹೇಳುತ್ತಿದ್ದುದು? ಬಿಜೆಪಿ ನೇತೃತ್ವದ ಸರಕಾರ ಮರೆಮಾಚಲು, ಉಪೇಕ್ಷಿಸಲು ಬಯಸಿದ್ದು ಕೂಡಾ ಇದನ್ನೇ. ಈ ಸಮಿತಿ ಉತ್ತರದ ಗಡಿಗಳಲ್ಲಿ ಮುನ್ನೆಚ್ಚರಿಕೆಯ ವ್ಯವಸ್ಥೆಯಲ್ಲಿನ ತೂತುಗಳು, ವಿಭಿನ್ನ ಬೇಹುಗಾರಿಕೆ ಸಂಸ್ಥೆಗಳ ವಿಫಲತೆ, ಅವುಗಳ ನಡುವೆ ಸಮನ್ವಯದ ಅಭಾವ, ನಮ್ಮ ಸೇವಾ ಘಟಕಗಳಿಗೆ ತಾಂತ್ರಿಕ ಉಪಕರಣಗಳನ್ನು ಒದಗಿಸುವಲ್ಲಿನ ನ್ಯೂನತೆಗಳು, ಅದರಲ್ಲೂ ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿ ದೇಶದ ಗಡಿಗಳನ್ನು ವೀರಾವೇಶದಿಂದ ರಕ್ಷಿಸುತ್ತಿರುವ ನಮ್ಮ ಸೈನಿಕರಿಗೆ ಸೂಕ್ತವಾದ ಚಳಿಯುಡುಗೆಗಳು ಕೂಡಾ ಸಿಗದಿರುವುದು ಇತ್ಯಾದಿಗಳತ್ತ ಬೊಟ್ಟು ಮಾಡಿ ತೋರಿಸಿದೆ. ಈ ಮಹತ್ವದ ಅಂಶಗಳಿಗೆ ಸರಕಾರದ ಮುಖಂಡರು ಸಾಕಷ್ಟು ಗಮನ ನೀಡುತ್ತಾರೆ. ಭವಿಷ್ಯದಲ್ಲಿ ಮತ್ತೊಮ್ಮೆ ಇಂತಹ ಪ್ರಮಾದ ಎಸಗುವುದಿಲ್ಲ ಎಂದು ನಾವು ಆಶಿಸಬೇಕಷ್ಟೆ.




ಆದರೆ ಈ ಸಮಿತಿ ತೋರಿಸಿಕೊಟ್ಟ ಒಂದು ಅಂಶ ಅತ್ಯಂತ ಮಹತ್ವದ್ದು. "ಕಾರ್ಗಿಲ್ ವಲಯದಲ್ಲಿ ಪಾಕಿಸ್ತಾನೀನುಸುಳಿಕೆ ಭಾರತ ಸರಕಾರಕ್ಕೆ, ಸೇನೆ ಮತ್ತು ಬೇಹುಗಾರಿಕೆ ಸಂಸ್ಥೆಗಳಿಗೆ ಹಾಗೂ ಜಮ್ಮು ಕಾಶ್ಮೀರ ರಾಜ್ಯ ಸರಕಾರಕ್ಕೆ ಕೂಡಾ ಸಂಪೂರ್ಣ ಅನಿರೀಕ್ಷಿತವಾಗಿತ್ತು ಎಂಬುದಕ್ಕೆ ಬಹಳಷ್ಟು ಪುರಾವೆಗಳಿವೆ" ಎಂದು ಅದು ಹೇಳಿದೆ. ಕೆಲವು ಕುರಿಕಾಯುವವರು ಸೈನ್ಯದವರಿಗೆ ತಿಳಿಸಿರದಿದ್ದರೆ ಬಹುಶಃ ಸರಕಾರ ಇನ್ನೂ ಸ್ವಲ್ಪ ಸಮಯದವರೆಗೆ ಅಲ್ಲಿ ನಡೆಯುತ್ತಿದ್ದ ನುಸುಳಿಕೆಯ ಬಗ್ಗೆ ದಿವ್ಯಅಜ್ಞಾನದಲ್ಲೇ ಇರುತ್ತಿತ್ತು!.

ಈ ವಿಷಯದಲ್ಲಿ ಸರಕಾರದ ಯೋಗ್ಯತೆಯ ಬಗ್ಗೆ ಸಂದೇಹಪಡಲು ಸಾಕಷ್ಟು ಕಾರಣಗಳಿವೆ. ಮೇ 28, 1999ರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿನ ಒಂದು ವರದಿಯ ಪ್ರಕಾರ ಬಿ.ಎಸ್.ಎಫ್. (ಗಡಿರಕ್ಷಣಾ ಪಡೆ)ನ ಬೇಹುಗಾರಿಕೆ ಘಟಕ ಕಾರ್ಗಿಲ್‌ನಲ್ಲಿ ಜನವರಿ 1999ರಿಂದಲೇ ಆರಂಭವಾದ ಪಾಕಿಸ್ತಾನ ಬೆಂಬಲಿತ ಅತಿಕ್ರಮ ಹೋರಾಟ ಹಾಗೂ ಸೈನಿಕರ ನುಸುಳಿಕೆಯ ಮಾಹಿತಿ ನೀಡುವ 'ಗುಪ್ತ' ವರದಿಯನ್ನು ಕೇಂದ್ರ ಗೃಹ ಸಚಿವಾಲಯಕ್ಕೆ ನೀಡಿತ್ತು. ಆದರೆ ಎಲ್.ಕೆ. ಅಡ್ವಾಣಿ ಮುಖ್ಯಸ್ಥರಾಗಿರುವ ಈ ಸಚಿವಾಲಯಕ್ಕೆ ಬಿ.ಎಸ್.ಎಫ್. ಹೇಳಿದ ನುಸುಳಿಕೆಯ ಬಗ್ಗೆ ಗೊತ್ತೇ ಇರಲಿಲ್ಲ. ಅಥವಾ ಗೊತ್ತಿದ್ದರೂ ಉಪೇಕ್ಷೆ ಮಾಡಿತು. ಏನೇ ಇರಲಿ, ಈ ಅನಾಹುತದ ಜವಾಬ್ದಾರಿಯಂತೂ ಗೃಹ ಇಲಾಖೆಯಾಗಲೀ, ಸರಕಾರವಾಗಲೀ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನಾವು ಮತ್ತು ಇತರ ಹಲವರು ಹೇಳುತ್ತಾ ಬಂದಂತೆ ಹಾಗೂ ಈಗ ಪರಾಮರ್ಶೆ ಸಮಿತಿಯೂ ಹೇಳಿರುವಂತೆ ಕಾರ್ಗಿಲ್ ಯುದ್ಧವನ್ನು ತಪ್ಪಿಸಬಹುದಿತ್ತು ಎಂಬುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಪುಟ 8 ಕ್ಕೆ

ಬಹುರಾಷ್ಟ್ರೀಯ ಕಂಪನಿಗಳ ಏಜೆಂ



ಭೋಪಾಲ್‌ಗಳು, ಎನ್ರೋನ್‌ಗಳು, ಮೊನ್ಸಾಂಟೋಗಳು ನಮಗೆ ಬೇಡ!

(ಕ್ಲಿಂಟನ್‌ರ ಭೇಟಿಗೂ ಬಹುರಾಷ್ಟ್ರೀಯ ಕಂಪನಿಗಳಿಗೂ ಏನು ಸಂಬಂಧ ಎಂದು ಮೂಗು ಮುರಿಯಬೇಡಿ! ಕ್ಲಿಂಟನ್ ಭಾರತಕ್ಕೆ ಭೇಟಿ ನೀಡುತ್ತಿರುವುದು 25 ಕೋಟಿ ಅಮೆರಿಕದ ಶ್ರೀಸಾಮಾನ್ಯರ ಪ್ರತಿನಿಧಿಯಾಗಿ ಅಲ್ಲ. ಅಮೆರಿಕದ ಒಟ್ಟು ವಾರ್ಷಿಕ ಉತ್ಪನ್ನದ ಅರ್ಧಕ್ಕೂ ಹೆಚ್ಚು ಭಾಗವನ್ನು ನಿಯಂತ್ರಿಸುವ ಐನೂರು ಅಮೆರಿಕನ್ ಮೂಲದ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಏಜೆಂಟನಾಗಿ. ಈಗಾಗಲೇ ಭಾರತ ಆರ್ಥಿಕವನ್ನು ಬಿಗಿ ಹಿಡಿತದಲ್ಲಿಟ್ಟಿರುವ ಬಹುರಾಷ್ಟ್ರೀಯ ಕಂಪನಿಗಳ ಕಂಬಂಧಬಾಹುಗಳನ್ನು ಇನ್ನಷ್ಟು ಬಿಗಿಗೊಳಿಸಲು ಆತ ಬರುತ್ತಿದ್ದಾನೆ. ಈ ಏಜೆಂಟನನ್ನು ಓಲೈಸಲು 'ನೆನಪಾದಾಗ ಸ್ವದೇಶಿ ಕೂಸು ಹಾಕುವ ಚಡ್ಡಿ-ಗ್ಯಾಂಗ್' ಸರ್ಕಾರ ರತ್ನಗಂಬಳಿ ಹಾಸಿದೆ. ವಿಶ್ವ ವಾಣಿಜ್ಯ ಸಂಸ್ಥೆಯ ಜತೆ ಒಪ್ಪಂದದ ಅಗತ್ಯಕ್ಕಿಂತ ಮೊದಲೇ ಸುಮಾರು 800 ಸರಕುಗಳ ಮೇಲೆ (ರೈತರ ಹೊಟ್ಟೆ ಮೇಲೆ ಹೊಡೆಯುವ ಕೃಷಿ ಸರಕು ಸೇರಿದಂತೆ) ಆಮದಿಗೆ ಇದ್ದ ನಿರ್ಬಂಧ ತೊಡೆದುಹಾಕುವ ಕ್ರಮ ಕ್ಲಿಂಟನ್‌ರ ಭೇಟಿ ಸಾಧ್ಯ ಮಾಡಲಿಕ್ಕಂತೆ.

ಭೋಪಾಲ್‌ನಲ್ಲಿ ಯೂನಿಯನ್ ಕಾರ್ಬೈಡ್ ಕಾರ್ಖಾನೆ ವಿಷ ಅನಿಲ ಉಗುಳಿ ಸಾವಿರಾರು ಜನರನ್ನು ಬಲಿಗೆ ತೆಗೆದುಕೊಂಡು ಲಕ್ಷಾಂತರ ಜನರನ್ನು ಜೀವಂತ ಶವಗೊಳಿಸಿ ಹತ್ತು ವರ್ಷಗಳ ನಂತರ ಇಂದೂ ನಮ್ಮ ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಅಪಾಯ ಏನು? ಈ ಕಂಪನಿಗಳು ನಮಗೆ ಅಗತ್ಯ ಬಂಡವಾಳ, ತಂತ್ರಜ್ಞಾನ, ಉದ್ಯೋಗ ಒದಗಿಸುವುದಿಲ್ಲವೇ? ಎನ್ನುವ ಮುಗ್ಧರಿದ್ದಾರೆ. ಅಂತರ್ರಾಷ್ಟ್ರೀಯವಾಗಿ, ಭಾರತದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ದಾಂಧಲೆಯ ದಾಖಲೆ, ಅವುಗಳ ಕಪಿಮುಷ್ಟಿಯ ಅಪಾಯಗಳ ಬಗ್ಗೆ ಹೇಳುವ ಲೇಖನ - ಕ್ಲಿಂಟನ್ ಭಾರತ ಭೇಟಿ ಸಂದರ್ಭದಲ್ಲಿ.)


ಅಮೆರಿಕದಲ್ಲಿ ಒಂದು ಮಾತಿದೆಯಂತೆ - ರಾಜಕೀಯ ವ್ಯಂಗ್ಯದ ಮಾತು. ಯಾವುದು ಜನರಲ್ ಮೋಟಾರ್ಸ್‌ಗೆ ಒಳ್ಳೆಯದೋ, ಅದು ಅಮೆರಿಕಕ್ಕೂ ಒಳ್ಳೆಯದು ಇರಬೇಕು ಅಂತ. ಇದು ಅಮೆರಿಕದಂತಹ ದೇಶದಲ್ಲಿ ದೈತ್ಯ ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವದ ಬಗ್ಗೆ ರಾಜಕೀಯ ವ್ಯಂಗ್ಯ. ಜನರಲ್ ಮೋಟಾರ್ಸ್ ಮತ್ತು ಇಂತಹುದೇ ದೈತ್ಯ ಕಂಪನಿಗಳ ಹಿತಾಸಕ್ತಿಯೇ ದೇಶದ ಹಿತಾಸಕ್ತಿ ಎಂದು ಇಡೀ ಜಗತ್ತಿಗೆ ಸಾರುವ ಅಮೆರಿಕದ ಅಧ್ಯಕ್ಷರುಗಳು ಮತ್ತು ಅವರ ಸರ್ಕಾರದ ಬಗ್ಗೆ ಕುಟುಕು. ಅಂದರೆ ಈ ದೈತ್ಯ ಕಂಪನಿಗಳ ಹಿತಾಸಕ್ತಿ ಜನರ ಹಿತಾಸಕ್ತಿಗೆ ತದ್ವಿರುದ್ಧವಾದುದು ಎಂದು ಅರ್ಥ ಬರುವಂತಹದು.

ಭಾರತ ಸ್ವತಂತ್ರವಾದ ಮೇಲೆ, ಇಂಡಿಯಾದ ಬಂಡವಾಳ ಆಧಾರಿತ ಸ್ವಾವಲಂಬೀ ಕೈಗಾರಿಕಾ ಬೆಳವಣಿಗೆಯ ಹಾದಿಹಿಡಿದರೂ, ವಿದೇಶಿ ದೈತ್ಯಕಂಪನಿಗಳ ಬಲ ಮುರಿಯಲಿಲ್ಲ. ಸ್ವತಂತ್ರ ಭಾರತದ ಪ್ರಥಮ ಸರ್ಕಾರ ಭಾರತದ ಲೂಟಿ ಹೊಡೆದಿದ್ದ ಬ್ರಿಟಿಷ್ ಕಂಪನಿಗಳನ್ನು ರಾಷ್ಟ್ರೀಕರಿಸಲಿಲ್ಲ. ಬದಲಾಗಿ ಎಲ್ಲಾ ಸವಲತ್ತುಗಳನ್ನು ಹಾಗೆ ಬಿಟ್ಟಿತ್ತು. 1966 ರ ಹೊತ್ತಿಗೆ ದೇಶದ 112 ಅತಿದೊಡ್ಡ ಕಂಪನಿಗಳಲ್ಲಿ 62 ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಾಗಿದ್ದವು. ಈ ಕಂಪನಿಗಳ ಆಸ್ತಿ ಈ 112 ಅತಿದೊಡ್ಡ ಕಂಪನಿಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಿನದಾಗಿತ್ತು. 1970 ರ ಹೊತ್ತಿಗೆ ಔಷಧಿ ಉತ್ಪಾದನೆ ಕ್ಷೇತ್ರದಲ್ಲಿ ಶೇಕಡಾ 80 ವಿದೇಶಿ ಕಂಪನಿಗಳ ಕೈಯಲ್ಲಿತ್ತು. ಈ ಅವಧಿಯಲ್ಲೂ ಈ ಕಂಪನಿಗಳು ಮುಖ್ಯವಾಗಿ 'ವರ್ಗಾವಣೆ ಬೆಲೆ'ಯ ತಂತ್ರ ಬಳಸಿ ಭಾರಿ ಲಾಭವನ್ನು ಮಾಡಿದರು. 'ವರ್ಗಾವಣೆ ಬೆಲೆ'ಯೆಂದರೆ - ವಿದೇಶಿ ಕಂಪನಿಯ ಮುಖ್ಯ ಕಂಪನಿ ಮತ್ತು ಇಂಡಿಯಾದ ಅಡಿಯಾಳು ಕಂಪನಿಗಳ ನಡುವಣ 'ವ್ಯಾಪಾರ'ದಲ್ಲಿ 'ಬೆಲೆ'ಗಳನ್ನು ಏರುಪೇರು ಮಾಡಿ ಕನಿಷ್ಟ ತೆರಿಗೆ, ವಿದೇಶಿ ವಿನಿಮಯ, ಲಾಭ ದೇಶದ ಹೊರಗೆ ಕಳಿಸುವ ಬಗ್ಗೆ ಸರ್ಕಾರಿ ನಿಯಂತ್ರಣವನ್ನು ಬುಡಮೇಲು ಮಾಡುತ್ತಿದ್ದವು.

ಕೋಕಾಕೋಲ ಮತ್ತು ಐಬಿಎಂ ಹೊರಕ್ಕೆ

'ವರ್ಗಾವಣೆ ಬೆಲೆ' ಯ ಮೂಲಕ ಸೂಪರ್ ಲಾಭ, ಸರ್ಕಾರಿ ನಿಯಂತ್ರಣ ಬುಡಮೇಲು ಮಾಡುವುದನ್ನು ತಡೆಗಟ್ಟಲು ಮತ್ತು ವಿದೇಶ ಕಂಪನಿಗಳ ಆರ್ಥಿಕ ಅಧಿಪತ್ಯ ಕಡಿಮೆ ಮಾಡಲು ಭಾರತ ಸರ್ಕಾರ 1973 ರಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾನೂನು (FERA-ಫೇರಾ)ನ್ನು ತಂದಿತು. ಈ ಕಾನೂನಿನ ಪ್ರಕಾರ ವಿದೇಶಿ ಕಂಪನಿಗಳ ಭಾರತೀಯ ಅಡಿಯಾಳು ಕಂಪನಿಯ ಒಡೆತನದ ಮೇಲೆ ಹಲವು ನಿರ್ಬಂಧಗಳನ್ನು ಹೇರಲಾಯಿತು. ಇದನ್ನು ಕೆಲವು ಕಂಪನಿಗಳು ವಿರೋಧಿಸಿ, ದೇಶ ಬಿಟ್ಟು ಹೋದವು. ಇದರಲ್ಲಿ ಕೋಕಾಕೋಲಾ ಮತ್ತು ಕಂಪ್ಯೂಟರ್ ದೈತ್ಯ ಐಬಿಎಂ ಮುಖ್ಯವಾದವು. ಆದರೆ ಇನ್ನೂ ಹಲವು ಕಂಪನಿಗಳು 'ಫೇರಾ'ವನ್ನು ಒಪ್ಪಿಕೊಂಡು, ಅದನ್ನು ಬಳಸಿ ಇನ್ನೂ ವಿಸ್ತರಿಸಿದವು. ಕಂಪನಿಯ ಹೊಸ ಶೇರುಗಳನ್ನು ಮಾರಾಟ ಮಾಡಿಯೂ ಕಂಪನಿಯು ವಿದೇಶಿ ಒಡೆತನ ಉಳಿಸಿಕೊಂಡು, ಹಿಂದೆ ವಿದೇಶಿ ಕಂಪನಿಗಳಿಗೆ ನಿಷೇಧಿತವಾಗಿದ್ದ ಹಲವು ಹೊಸ ಕ್ಷೇತ್ರಗಳಿಗೆ ವಿಸ್ತರಿಸುವ ಅವಕಾಶವನ್ನು ಈ ಕಂಪನಿಗಳು ಉಪಯೋಗಿಸಿ ಬೆಳೆದವು. ಆದರೂ 70 ರ ದಶಕದ ಕೊನೆವರೆಗೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಸಾಕಷ್ಟು ನಿರ್ಬಂಧಗಳಿದ್ದವು. ಯೋಜನಾಬದ್ಧ ಸಾರ್ವಜನಿಕ ಕ್ಷೇತ್ರದ ಉದ್ಯಮ ಆಧಾರಿತ ಬೆಳವಣಿಗೆ ನೀತಿಯನ್ನು ಸರ್ಕಾರ ಹೆಚ್ಚು ಕಡಿಮೆ ಅನುಸರಿಸುತ್ತಿತ್ತು.

ಆದರೆ 70 ರ ಕೊನೆಯ ಜಾಗತಿಕ ತೈಲ ಬಿಕ್ಕಟ್ಟಿನಿಂದ ಆದ ಬೆಲೆ ಹೆಚ್ಚಳದಿಂದ, ಭಾರತದ ವಿದೇಶಿ ವಿನಿಮಯದಲ್ಲಿ ಭಾರಿ ಏರುಪೇರಾದಾಗ, ಸರ್ಕಾರ ವಿಶ್ವಬ್ಯಾಂಕ್/ಐಎಂಎಫ್‌ಗೆ ಸಾಲಕ್ಕೆ ಮೊರೆ ಹೋಗಿ ಹಲವು ಶತಕೋಟಿ ಡಾಲರು ಸಾಲ ಪಡೆದಾಗಿಂದ ಚಿತ್ರ ಪೂರ್ತಿ ಬದಲಾಯಿತು. ಐಎಂಎಫ್ ಸಾಲ ಷರತ್ತಾಗಿ ಬಹುರಾಷ್ಟ್ರೀಯ ಕಂಪನಿಗಳು ಅನುಕೂಲಕರವಾದ ನೀತಿ ಅನುಸರಿಸಲು ಒತ್ತಡ ಹೇರಿದವು. 1981-85 ರ



ನಡುವೆ ಈ ಕಂಪನಿಗಳ ಮೇಲೆ ನಿರ್ಬಂಧದ ಸಡಲಿಕೆಬಳಸಿ ವಿದೇಶಿ ಬಂಡವಾಳ ಹೂಡಿಕೆ ಹನ್ನೊಂದು ಪಟ್ಟು ಹೆಚ್ಚಾಯಿತು. ಆದರೆ ಈ ವಿದೇಶಿ ಕಂಪನಿಗಳ ಆಮದು ಚಟುವಟಿಕೆಯು ವಿದೇಶಿ ವಿನಿಮಯ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು, ಭಾರತ ಸರ್ಕಾರ ಪುನಃ ವಿಶ್ವಬ್ಯಾಂಕ್ ಸಾಲ ಮೊರೆ ಹೋಗಬೇಕಾಯಿತು. ಅದರಷರತ್ತಾಗಿ ಭಾರತ ಸರ್ಕಾರ ವಿದೇಶಿ ಕಂಪನಿಗಳ ಮೇಲೆ ಇದ್ದ ಹೆಚ್ಚುಕಡಿಮೆ ಎಲ್ಲಾ ನಿರ್ಬಂಧಗಳನ್ನು ಕಳಚಿ ಹಾಕಿದವು.

ಐಬಿಎಂ, ಕೊಕೊಕೋಲಾ ವಾಪಸು

1991 ರಿಂದ ಸರ್ಕಾರ ಅನುಸರಿಸಲಾರಂಭಿಸಿದ ಉದಾರೀಕರಣ, ಖಾಸಗೀಕರಣ ನೀತಿ ಭಾರತದ ಬೆಳವಣಿಗೆಯ ಗತಿಯನ್ನೇ ಬದಲಾಯಿಸಿದೆ. ದೇಶದ ಬೆಳವಣಿಗೆ, ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ತಿಲಾಂಜಲಿ ಇತ್ತು, ವಿದೇಶಿ ಬಂಡವಾಳದ ಸೇವೆಗೆ ಸರ್ಕಾರ ನಿಂತಿದೆ. 90 ರ ದಶಕದ ತುಂಬಾ ಹಂತ ಹಂತವಾಗಿ (ಇನ್ನೂ ಸಹ ಮುಂದುವರಿಯುತ್ತಿದೆ) ಇಡೀ ದೇಶವನ್ನು ವಿದೇಶಿ ಬಂಡವಾಳಕ್ಕೆ ಒತ್ತೆ ಇಡಲಾಗಿದೆ. ಭಾರತದ ಆರ್ಥಿಕದಲ್ಲಿ

ಬಹುರಾಷ್ಟ್ರೀಯ ಕಂಪನಿಗಳ ಅಧಿಪತ್ಯ ವಿಪರೀತ ಹೆಚ್ಚಾಗಿದೆ. ಕೊಕೊ-ಕೋಲಾ, ಐಬಿಎಂ ನಂತಹ ಕಂಪನಿಗಳು ವಾಪಸಾಗಿವೆ. ಮಾತ್ರವಲ್ಲ ಎಲ್ಲಾ (ಹಿಂದೆ ಸಾರ್ವಜನಿಕ ಕ್ಷೇತ್ರದ ದೇಶಿ ಕಂಪನಿಗಳಿಗೆ ಮೀಸಲಾಗಿದ್ದ) ವಿದ್ಯುತ್ ಉಪಕರಣ, ವಿದ್ಯುತ್ ಉತ್ಪಾದನೆ, ಟೆಲಿ ಸಂಪರ್ಕ, ರೈಲ್ವೆ, ಕಲ್ಲಿದ್ದಲು, ತೈಲ ಮುಂತಾದ ಮೂಲಭೂತ ಕ್ಷೇತ್ರಗಳಲ್ಲಿ ಅವು ನುಸುಳಿವೆ. 90 ರ ದಶಕದಲ್ಲಿ ದೇಶದೊಳಗೆ ನುಸುಳಿದ ಕಂಪನಿಗಳಲ್ಲಿ ಸಿಂಹಪಾಲು ವಿದ್ಯುತ್ ಮತ್ತು ತೈಲ ಕ್ಷೇತ್ರದ್ದು. ವಿದ್ಯುತ್ ಕ್ಷೇತ್ರದ ಕಂಪನಿಗಳಿಗೆ ಶೇಕಡಾ 16 ಲಾಭ (ಡಾಲರುಗಳಲ್ಲಿ) ದ ಗ್ಯಾರಂಟಿ ಕೊಟ್ಟಿರುವಾಗ ಅವು ಸೂಪರ್ ಲಾಭ ಬಾಚಿಕೊಳ್ಳದೆ ಹಿಂದೆ ಬೀಳುತ್ತವೆಯೇ? ಅದೇ ರೀತಿ ವಿದೇಶಿ ತೈಲ ಕಂಪನಿಗಳು ದೇಶಿಕಂಪನಿ ONGC ಬೆಳೆಸಿದ ತೈಲ ಬಾವಿಗಳನ್ನು ಅಗ್ಗಕ್ಕೆ ತೆಗೆದುಕೊಂಡು ಉತ್ಪಾದನೆಯಾದ ತೈಲಕ್ಕೆ ಆಮದಾದ ತೈಲದ ದುಬಾರಿ ಬೆಲೆ ಹಾಕಿ ಸೂಪರ್ ಲಾಭ ಗಿಟ್ಟಿಸಿಕೊಳ್ಳುತ್ತಿವೆ.

ಭೋಪಾಲ್‌ಗಳು, ಎನ್ರೋನ್‌ಗಳು ಬೇಕೆ?

ವಿದೇಶಿ ಬಂಡವಾಳ ಆಕರ್ಷಿಸುವ ಹೆಸರಲ್ಲಿ ಪ್ರದೇಶ ಸಮತೋಲನ ಬೆಳವಣಿಗೆಗೆ ಬೇಕಾದ ಕೈಗಾರಿಕಾ ನಿರ್ದೇಶನಗಳ ಮೇಲಿನ ನಿರ್ಬಂಧ, ಪರಿಸರ ಮಾಲಿನ್ಯ-ವಿರೋಧಿ ನಿರ್ಬಂಧ, ಕಾರ್ಮಿಕರ ಹಕ್ಕುಗಳ ಬಗ್ಗೆ ಕಾನೂನುಗಳು, ಸಾರ್ವಜನಿಕ ಸುರಕ್ಷಿತತೆ ಬಗ್ಗೆ ಕಾನೂನುಗಳನ್ನೆಲ್ಲಾ ಸಡಿಲಗೊಳಿಸಲಾಗುತ್ತಿದೆ. ಭೂಪಾಲ್ ಅನಿಲ ದುರಂತಕ್ಕಿಂತ ಘೋರ ಉದಾಹರಣೆ ಇದಕ್ಕೆ ಬೇಕಾಗಿಲ್ಲ.

ಇದ್ದ ಕೈಗಾರಿಕೆಗಳನ್ನು ಏಕೀಕರಣಗೊಳಿಸುವ ತರಾತುರಿಯಲ್ಲಿರುವ ಈ ದೈತ್ಯ ಕಂಪನಿಗಳು ಹೊಸ ಉದ್ಯಮಗಳನ್ನು, ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತಿಲ್ಲ. ಬದಲಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ವಿಶ್ವಬ್ಯಾಂಕ್ ಒತ್ತಡದಿಂದ ಮುಚ್ಚಲಾಗುತ್ತಿರುವ ಕೈಗಾರಿಕೆಗಳಲ್ಲಿ ನಾಶವಾಗುತ್ತಿರುವ ಉದ್ಯೋಗಗಳ ಸೃಷ್ಟಿ ಸಹ ಆಗುತ್ತಿಲ್ಲ. ಕೃಷಿ, ಮೀನುಗಾರಿಕೆ, ಗ್ರಾಹಕ ಸಾಮಗ್ರಿಗಳ ಕ್ಷೇತ್ರದಲ್ಲಿ ಪ್ರವೇಶಿಸಿ ಭಾರತಿಯ ಜನತೆಯ, ಕಂಪನಿಗಳ ಆರ್ಥಿಕವನ್ನು ಪ್ರವೇಶಿಸಿ ಭಾರತೀಯ ಜನತೆಯ, ಕಂಪನಿಗಳ ಆರ್ಥಿಕವನ್ನು ಏರುಪೇರು ಮಾಡುತ್ತಿವೆ. ರಫ್ತು-ಆಧಾರಿತ ಆಳ-ಸಾಗರ ಮೀನುಗಾರಿಕೆ ಟ್ರಾಲರ್ಸ್‌ಗಳು ಏಳೂವರೆ ಲಕ್ಷ ಮೀನುಗಾರರ ಜೀವನೋಪಾಯ, 30 ಕೋಟಿ ಜನಕ್ಕೆ ಆಹಾರವಾಗಿ ಮೀನು ಸಿಗದಂತೆ ಮಾಡುವ ಅಪಾಯವಿದೆ.

ಈವರೆಗೆ ಬರುತ್ತಿದ್ದ ವಿದೇಶಿ ಬಂಡವಾಳ ಕನಿಷ್ಟ ಉತ್ಪಾದನೆಯಲ್ಲಿ ತೊಡಗಿದ್ದಾದರೆ, ಈಗ ಬರುತ್ತಿರುವ ವಿದೇಶಿ ಹಣದ ಶೇಕಡ 80 ಶೇರು ಮಾರುಕಟ್ಟೆಯಲ್ಲಿ ತೊಡಗಿಸಲಾಗುತ್ತಿರುವ ಬರಿಯ 'ಜೂಜಿನ ಹಣ' ಭಾರತದ ಹಿತಾಸಕ್ತಿಗೆ, ಜನತೆಗೆ ಯಾವುದೇ ರೀತಿಯಲ್ಲಿ ಉಪಯೋಗವಿಲ್ಲದಿರುವ, ಅತ್ಯಂತ ಹೆಚ್ಚಿನ ಲಾಭ ಅರಸುತ್ತಾ ವಿಶ್ವ ಪರ್ಯಟನೆ ಮಾಡುವ ಬಂದಷ್ಟೇ ವೇಗವಾಗಿ



ಮುಂಬೈನ ಬಂಡೆಯೊಂದರ ಮೇಲೆ ಕ್ಲಿಂಟನ್‌ನ ಭಾರತ ಭೇಟಿಯನ್ನು ವಿರೋಧಿ... ಬರಹ

ಕ್ಲಿಂಟನ್ ವಾಪಸು ಹೋಗು!

ಇದೆಂತಾ ಹೊಲಸು ಶರಣಾಗತಿ!

ಕಾಶ್ಮೀರದಲ್ಲಿ ಅಮೆರಿಕಾ ಏನು ಬಯಸುತ್ತಿದೆ ಎಂಬ ಬಗ್ಗೆ ಸಾಕಷ್ಟು ಸಂಕೇತಗಳು ದೊರೆತಿವೆ. ಇದಕ್ಕೆ ಸಂಬಂಧಪಟ್ಟಂತೆ ಅಮೆರಿಕಾದ ರಾಜತಾಂತ್ರಿಕ ಪ್ರಯತ್ನಗಳ ಇತಿಹಾಸಕ್ಕೆ ಹೋಗದೆ ಇತ್ತೀಚೆಗೆ ಪಾಕಿಸ್ತಾನೀ ಸೇನೆ ನವಾಜ್ ಶರೀಫ್‌ರನ್ನು ಪದಚ್ಯುತಗೊಳಿಸುವ ಸ್ವಲ್ಪವೇ ಮೊದಲು ಅವರು ಮತ್ತು ಕ್ಲಿಂಟನ್ ವಾಶಿಂಗ್ಟನ್‌ನಲ್ಲಿ ಬಿಡುಗಡೆ ಮಾಡಿದ ಜಂಟಿ ಹೇಳಿಕೆ ಕಾಶ್ಮೀರ ಪ್ರಶ್ನೆಯಲ್ಲಿ ಬಿಲ್ ಕ್ಲಿಂಟನ್ 'ವೈಯಕ್ತಿಕ ಆಸಕ್ತಿ' ತೋರುವುದಾಗಿ ಸಾರಿತು. ಈ ಕಥೆಯ ಅತ್ಯಂತ ಬೇಸರದ ಭಾಗವೆಂದರೆ ಈ ಹೇಳಿಕೆಯನ್ನು ಬಿಡುಗಡೆ ಮಾಡುವ ಮೊದಲು ಅದರ ಒಂದು ಪ್ರತಿಯನ್ನು ನಮ್ಮ ಪ್ರಧಾನ ಮಂತ್ರಿಗಳಿಗೆ ಕಳಿಸಲಾಗಿತ್ತು. ಅವರು ಕೆಲವೇ ಪದಗಳನ್ನು ಬದಲಿಸಿ ಸುಮಾರಾಗಿ ಅದು ಮೊದಲಿದ್ದಂತೆಯೇ ಅದಕ್ಕೆ ತಮ್ಮ ಒಪ್ಪಿಗೆ ನೀಡಿದ್ದರು ಎಂಬುದು. ಅಂದರೆ ಕ್ಲಿಂಟನ್‌ರ 'ವೈಯಕ್ತಿಕ ಆಸಕ್ತಿ'ಗೆ ಇವರ ಅನುಮೋದನೆಯೂ ಇತ್ತು. ಇದು ಕಾಶ್ಮೀರದ ಭಾರತದ ಅಭಿನ್ನ ಅಂಗ ಎಂಬ ಇದುವರೆಗೆ ನಿರಂತರವಾಗಿ ಭಾರತ ತಳೆದಿರುವ ನಿಲುವನ್ನು ಉಲ್ಲಂಘಿಸುವ ಕ್ರಮ ಇದು. 1972 ರ ಶಿಮ್ಲಾ ಒಪ್ಪಂದದ ಉಲ್ಲಂಘನೆ ಕೂಡಾ. ಏಕೆಂದರೆ ಆ ಒಪ್ಪಂದದಲ್ಲಿ ಭಾರತ ಮತ್ತು ಪಾಕಿಸ್ತಾನ ಕಾಶ್ಮೀರವೂ ಸೇರಿದಂತೆ ಎಲ್ಲಾ ಭಿನಾಭಿಪ್ರಾಯಗಳನ್ನು ದ್ವಿಪಕ್ಷೀಯ ಮಾತುಕತೆಗಳ ಮೂಲಕ ಯಾವುದೇ ಮೂರನೆಯವರನ್ನು ಒಳಗೊಳ್ಳದೆ ಪರಿಹರಿಸಿಕೊಳ್ಳುವದಾಗಿ ಹೇಳಲಾಗಿತ್ತು.

ಹೊಸ ಸಹಸ್ರಮಾನದ ಮುನ್ನಾದಿನದ ತನ್ನ 'ಸಂದೇಶ'ದಲ್ಲೂ ಕ್ಲಿಂಟನ್ ವಿಶ್ವದ ಕೆಲವು ನಿರ್ದಿಷ್ಟ ಭಾಗಗಳಲ್ಲಿ ಇರುವ ವಿವಾದವನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ 'ಭರವಸೆ' ನೀಡಿದರು. ಅಂತಹ ಪ್ರದೇಶಗಳಲ್ಲಿ ಚೆಚನ್ಯಾ, ಪಶ್ಚಿಮ ಏಶ್ಯಾ, ಪೂರ್ವ ತೈಮೋರ್ ಇತ್ಯಾದಿಗಳೊಂದಿಗೆ ಕಾಶ್ಮೀರದ ಹೆಸರೂ ಇದೆ. ಬಹುಶಃ ವಿಶ್ವದ ಕೆಲವು ಭಾಗಗಳಲ್ಲಿ ಹಲವು ವಿವಾದಗಳನ್ನು 'ಪರಿಹರಿಸಿದ' ಅಧ್ಯಕ್ಷ ಎಂದು ಅಮೆರಿಕಾದ ಕಾಶ್ಮೀರ ನೀತಿಯನ್ನು ಭಾರತ ಸರಕಾರದ ಗಂಟಲಲ್ಲಿ ತುರುಕಿಸುವಲ್ಲಿ ಯಶಸ್ವಿಯಾದ ಅಧ್ಯಕ್ಷ ಎಂದು ಅಮೆರಿಕಾದ ಇತಿಹಾಸದಲ್ಲಿ ತನ್ನ ಹೆಸರನ್ನು ಅಜರಾಮರಗೊಳಿಸಬೇಕು ಎಂಬುದು ಆತನ ಆಸೆಯಾಗಿರಬಹುದು. ಅದೇನೋ ಅರ್ಥವಾಗುವಂತದ್ದು. ಆದರೆ ತನ್ನ ಅಧ್ಯಕ್ಷ ಪದವಿಯಿಂದ ನಿವೃತ್ತನಾಗುವ ಹಂತದಲ್ಲಿರುವ ಈ ಬಿಲ್ ಕ್ಲಿಂಟನ್‌ನೆದುರು ಬಿಜೆಪಿ ಸರಕಾರ ಸಾಷ್ಟಾಂಗ ನಮಸ್ಕಾರ ಮಾಡಲು ಮುಗಿಬೀಳುತ್ತಿರುವುದು ನಿಜವಾಗಿಯೂ ಒಂದು ವಾಕರಿಕೆ ತರುವ ದೃಶ್ಯ.

ಈಗಂತೂ ಕ್ಲಿಂಟನ್ ಎರಡು ವಾರಗಳ ನಂತರ ದಕ್ಷಿಣ ಏಶ್ಯಾದ ಭೇಟಿಗೆ ಬಂದಾಗ ಆತ ಪಾಕಿಸ್ತಾನಕ್ಕೆ ಭೇಟಿ ನೀಡದಂತೆ ಆತನನ್ನು ಹೇಗಾದರೂ ಆಗ್ರಹಪಡಿಸುವುದೇ ಬಿಜೆಪಿ ಸರಕಾರದ ಏಕೈಕ ಆಕಾಂಕ್ಷೆಯಾಗಿರುವಂತೆ ಕಾಣುತ್ತಿದೆ. ಭಾರತವನ್ನು ತಮ್ಮ ತೆಕ್ಕೆಯೊಳಗೆ ಸೆಳೆದುಕೊಳ್ಳಲು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಎಷ್ಟೇ ಪ್ರಯತ್ನ ನಡೆಸಿದರೂ ಯಾವುದೇ ಕಾರಣಕ್ಕೆ ಅವರು ಪಾಕಿಸ್ತಾನದ ಕೈ ಬಿಡುವುದಿಲ್ಲ. ಈ ಸರಳ ಸತ್ಯವನ್ನು ಈ ಬಿಜೆಪಿ ಸರಕಾರ ಪಾಕಿಸ್ತಾನದ ಬಗ್ಗೆ ತನ್ನ ವಿಪರೀತ ದ್ವೇಷದಿಂದಾಗಿ ಮರೆತು ಬಿಟ್ಟಿರುವಂತೆ ಕಾಣುತ್ತದೆ.

ವಿಮಾನ ಅಪಹರಣದ ನಂತರ

ಕಾಶ್ಮೀರ ಸಮಸ್ಯೆ ಕುರಿತಂತೆ ಸರಕಾರದ ಕಳಾಹೀನ ನಿಲುವು ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣ ನಡೆದಾಗ ಮತ್ತೊಮ್ಮೆ ಎಲ್ಲರ ಗಮನ ಸೆಳೆಯಿತು. ಮೊದಲನೆಯದಾಗಿ ಕಠ್ಮಂಡುವಿನಲ್ಲಿ ವಿಮಾನ ಅಪಹರಣವಾಯಿತು ಎಂದು ಚೆನ್ನಾಗಿ ಗೊತ್ತಿದ್ದರೂ ಅದನ್ನು ಅಮೃತಸರದಲ್ಲಿ ತಡೆಯುವ ಸಾಧ್ಯತೆಗಳಿದ್ದರೂ ಹಾಗೆ ಮಾಡುವ ಪ್ರಯತ್ನವನ್ನೇ ಮಾಡಲಿಲ್ಲ. ವಿವಿಧ ಭದ್ರತಾ ಏಜೆನ್ಸಿಗಳಲ್ಲಿ ಸಮನ್ವಯ ಇಲ್ಲ ಎಂಬುದನ್ನು ಇದು ತೋರಿಸಿಕೊಟ್ಟಿತು. ನಂತರ ವಿಮಾನ ಅಫಘಾನಿಸ್ತಾನದ ಕಂದಹಾರ್‌ನಲ್ಲಿ ಇಳಿದಾಗ ಆ ಬಿಕ್ಕಟ್ಟನ್ನು ಜಾಣತನದಿಂದ ನಿಭಾಯಿಸುವ ಚಾಕಚಕ್ಯತೆಯನ್ನು ಭಾರತ ಸರಕಾರ ತೋರಲಿಲ್ಲ.

ಇಲ್ಲಿ ಒಂದು ಸಂಗತಿಯನ್ನು ನೆನಪಿಸಿಕೊಳ್ಳಬೇಕು. ಈ ಪ್ರಶ್ನೆಯ ಬಗ್ಗೆ ನಡೆದ ಸರ್ವಪಕ್ಷ ಸಭೆಯಲ್ಲಿ ಎರಡು ವಿಷಯಗಳ ಬಗ್ಗೆ ಒಮ್ಮತವಿತ್ತು - ಒಂದು, ಮುಗ್ಧ ಪ್ರಯಾಣಿಕರ ಜೀವರಕ್ಷಣೆಗೆ ಸಕಲ ಪ್ರಯತ್ನಮಾಡಬೇಕು, ಎರಡು ದೇಶದ ಹಿತಾಸಕ್ತಿಗಳಿಗೆ ಗಂಡಾಂತರ ಬರಬಾರದು. ನಿಜ, ಮೊದಲ ಗುರಿ ಈಡೇರಿತು. ಆದರೆ ಹಾಗೆ ಮಾಡುವಾಗ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಸರಕಾರ ಅಸಮರ್ಥ ಎಂದೂ ಸಾಬೀತಾಯಿತು. ಕಾಶ್ಮೀರದ ಪರಿಸ್ಥಿತಿ ಇನ್ನಷ್ಟು ಹದಗೆಡುವಂತೆ ತಡೆಯಲು ಅದರ ಕೈಲಾಗಲಿಲ್ಲ. ಅಂತರ್‍ರಾಷ್ಟ್ರೀಯ ಅಭಿಪ್ರಾಯವನ್ನು ಕ್ರೋಢೀಕರಿಸಲೂ ಅದಕ್ಕೆ ಆಗಲಿಲ್ಲ. ಅದು ಸಾಧ್ಯವಾಗಿದ್ದರೆ ವಿಮಾನ ಅಪಹರಣಕಾರರು ಮತ್ತು ಅಫಘಾನಿಸ್ತಾನ ಹಾಗೂ ಪಾಕಿಸ್ತಾನಗಳಲ್ಲಿನ ಅವರ ಬೆಂಬಲಿಗರ ಮೇಲೆ ಒತ್ತಡ ತಂದು ಎರಡೂ ಗುರಿಗಳನ್ನೂ ಈಡೇರಿಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ತಾಲಿಬಾನ್‌ಗಳನ್ನು ನಮ್ಮ ವಿದೇಶಾಂಗ ಮಂತ್ರಿಗಳು ಹಾಡಿಹೊಗಳಿದಾಗ ಈ ಸರಕಾರದ ಅಯೋಗ್ಯತೆ - ಇನ್ನಷ್ಟು ಸ್ಪಷ್ಟವಾಯಿತು. ಏಕೆಂದರೆ ತಾಲಿಬಾನ್‌ನ್ನು ಸೃಷ್ಟಿಸಿದ್ದು ಪಾಕಿಸ್ತಾನವೇ ಎಂದು ಇಡೀ ಜಗತ್ತಿಗೇ ಗೊತ್ತು. ವಿಮಾನ ಅಪಹರಣಕಾರರಿಗೆ ತಾಲಿಬಾನ್ ಬೆಂಬಲದ ಸಂಪೂರ್ಣ ಭರವಸೆಯಿತ್ತು. ಆದ್ದರಿಂದಲೇ ವಿಮಾನವನ್ನು ಅಫಘಾನ್ ಪ್ರದೇಶದಲ್ಲಿ ಇಳಿಸುವಂತೆ ಮಾಡಿದರು. ನಿಜ ಸಂಗತಿಯೆಂದರೆ ಭಾರತ ಸರ್ಕಾರಕ್ಕೆ ಬಿಕ್ಕಟ್ಟು ಪರಿಹರಿಸಲು ಒಂದು ಸಮಯಮಿತಿ ಹಾಕಿ ತಾಲಿಬಾನ್ ಭಾರತ ಸರ್ಕಾರ ಅಪಹರಣಕಾರರ ಬೇಡಿಕೆಗಳನ್ನು ಒಪ್ಪುವಂತೆ ಒತ್ತಡ ಹಾಕಿತು. ಕೊನೆಗೆ ಭಾರತ ಸರಕಾರ ಅಪರಹರಣಕಾರರ ಬೇಡಿಕೆಯಂತೆ ಮೂವರು ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿತು. ಅವರಲ್ಲಿಬ್ಬರು ಕಾಶ್ಮೀರದಲ್ಲಿ ಭಯಾನಕ ಭಯೋತ್ಪಾದಕರು, ಕಾಶ್ಮೀರದ ಮೂಲಭೂತವಾದಿ-ಪ್ರತ್ಯೇಕತಾವಾದಿ ಆಂದೋಲನದ ಮುಖಂಡರು ಚರಾರ್-ಎ-ಶರೀಫ್ ಎಂಬ ಸೂಫಿ ಸಂತರ ನೆನಪಿನ ಕ್ಷೇತ್ರಕ್ಕೆ ಬೆಂಕಿ ಹಚ್ಚುವುದರಲ್ಲಿ ಇದರ ಪಾತ್ರವಿತ್ತು.

ಅಷ್ಟೇ ಅಲ್ಲ, ಭಾರತ ಸರ್ಕಾರ ಇತರ ರಾಜಕೀಯ ಪಕ್ಷಗಳಿಗೆ ತನ್ನ ನಿಜ ಆಶಯವನ್ನು ತಿಳಿಸದೆಯೇ ಈ ಭಯೋತ್ಪಾದಕರನ್ನು ಬಿಡುಗಡೆ ಮಾಡುವ ಕ್ರಮ ಕೈಗೊಂಡಿತು. ಇತರ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ, ಅದರಿಂದ ಸರಕಾರಕ್ಕೆ ಬಲ ಬಂದು ಈ ಬಿಕ್ಕಟ್ಟನ್ನು ತೃಪ್ತಿಕರವಾಗಿ ಪರಶೀಲಿಸುವ ದಾರಿ ಕಂಡುಕೊಳ್ಳಲು ಸಹಾಯವಾಗುತ್ತಿತ್ತು.

ದೊಡ್ಡ ಅಪಚಾರ

ಆ ನಂತರ ಕಾಶ್ಮೀರದ ಪರಿಸ್ಥಿತಿ ಇನ್ನಷ್ಟು ಗಂಭೀರ ರೀತಿಯಲ್ಲಿ ಹದಗೆಟ್ಟಿತು. ಉಗ್ರಗಾಮಿಗಳು ಭದ್ರತಾ ಪಡೆಗಳ ಮೇಲೆ, ಅವರ ನೆಲೆಗಳ ಮೇಲೆ, ಮತ್ತೊಮ್ಮೆ ಕಾಶ್ಮೀರಿ ಪಂಡಿತರ ಮೇಲೆ ಗುರಿಯಿಡುತ್ತಿದ್ದಾರೆ, ಬಿಡುಗಡೆ ಹೊಂದಿದ ಭಯೋತ್ಪಾದಕರಲ್ಲಿ ಒಬ್ಬನಾದ ಮೌಲಾನಾ ಮಸೂದ್ ಅಝುರ್ ಭಾರತದ ವಿರುದ್ಧ 'ವಿಮೋಚನಾ ಸಮರ' ಸಂಘಟಿಸುವುದಾಗಿ ಪ್ರತಿದಿನ ಬೆದರಿಸುತ್ತಿದ್ದಾನೆ.

ಭಾರತ ಸರ್ಕಾರ ಈ ಬಿಕ್ಕಟ್ಟನ್ನು ನಿರ್ವಹಿಸಿದ ರೀತಿ ಅತ್ಯಂತ ಅವಿವೇಕದ್ದು ಎಂಬುದು ಎಷ್ಟು ಸ್ಪಷ್ಟವಾಗಿದೆಯೆಂದರೆ ಆರ್.ಎಸ್.ಎಸ್. ಮುಖ್ಯಸ್ಥರು ಕೂಡಾ ತನ್ನ ಸಂಘಟನೆಯ ಹತೋಟಿಯಲ್ಲೇ ಇರುವ ಬಿಜೆಪಿಯ ನೇತೃತ್ವದ ಸರಕಾರವನ್ನು ಟೀಕಿಸಲೇಬೇಕಾಗಿ ಬಂತು. ನಿಜ, ಆತ ಇದಕ್ಕೆ ಒಂದು ಕೋಮುವಾದಿ ಆಯಾಮ ನೀಡಲು ಮರೆಯಲಿಲ್ಲ.

ಈಗ ನಮ್ಮೆದುರು ಇರುವ ಕಟು ಸತ್ಯ ಎಂದರೆ ಪೋಖ್ರಾನ್-IIರ ನಂತರ ಅಡ್ವಾಣಿ, ಖುರಾನಗಳ ಕುರುಡು ದೇಶಪ್ರೇಮದ ಅಬ್ಬರ ಮತ್ತು ಕಾರ್ಗಿಲ್ ನುಸುಳಿಕೆ ಮತ್ತು ವಿಮಾನ ಅಪಹರಣದ ಸಂದರ್ಭಗಳಲ್ಲಿ ಭಾರತ ಸರಕಾರ ಪ್ರದರ್ಶಿಸಿದ ಹೊಲಬುಗೇಡಿತನದಿಂದಾಗಿ ಭಾರತದ ಹಿತಾಸಕ್ತಿಗಳಿಗೆ ಎಂತಹ ಕೇಡು ಬಂದಿದೆಯೆಂದರೆ ಪಾಕಿಸ್ತಾನಿ ಆಳರಸರು ಮತ್ತು ಅಮೆರಿಕಾ ಸದಾ ಬಯಸುತ್ತಿದ್ದ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಅಂದರೆ ಕಾಶ್ಮೀರದ ಪ್ರಶ್ನೆ ನಮ್ಮೆರಡು ದೇಶಗಳ ನಡುವಿನ ಪ್ರಶ್ನೆಯಾಗುಳಿಯದೆ ಅಂತರ್‍ರಾಷ್ಟ್ರೀಯ ಪ್ರಶ್ನೆಯಾಗಿ ಬಿಟ್ಟದೆ; ಎಲ್ಲಾ ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲಿ ಈ ಪ್ರಶ್ನೆ ಚರ್ಚೆಗೆ ಬರುವ ಸಂಭವ ಉಂಟಾಗಿದೆ. ಹಿಂದಿನ ಯಾವ ಸರಕಾರವೂ ಇದಕ್ಕೆ ಅವಕಾಶ ನೀಡಿರಲಿಲ್ಲ. ಇದು ಬಿಜೆಪಿ ನೇತೃತ್ವದ ಸರಕಾರ ದೇಶಕ್ಕೆ ಮಾಡಿರುವ ಅತ್ಯಂತ ದೊಡ್ಡ ಅಪಚಾರ.

ಆದರೆ ಈ ನೀಚ ಕಥೆ ಇಲ್ಲಿಗೇ ಮುಗಿದಿಲ್ಲ. ನಾವು ಸ್ವಾತಂತ್ರ್ಯ ಪಡೆದಂದಿನಿಂದಲೂ ಪಾಕಿಸ್ತಾನ ಮತ್ತು ಅಮೆರಿಕಾ ಇವೆರಡೂ ಕಾಶ್ಮೀರ ಭಾರತದಿಂದ ಪ್ರತ್ಯೇಕಗೊಳ್ಳಬೇಕೆಂದು ಪ್ರಯತ್ನಿಸುತ್ತಾ ಬಂದಿವೆ. ನಿಜ, ಇದರ ಹಿಂದೆ ಅವರ ಗುರಿಗಳು ಭಿನ್ನ-ಭಿನ್ನವಾಗಿವೆ. ಪಾಕಿಸ್ತಾನ ಇಸ್ಲಾಮಿನ ಹೆಸರಲ್ಲಿ ಕಾಶ್ಮೀರವನ್ನು ವಶಪಡಿಸಿಕೊಳ್ಳಬಯಸುತ್ತದೆ. ಇದಕ್ಕಾಗಿ ಅದು ಕಾಶ್ಮೀರದ ವಿಶಿಷ್ಟವಾದ, ಧರ್ಮನಿರಪೇಕ್ಷವಾದ ಸಂಸ್ಕೃತಿಯನ್ನು ಧ್ವಂಸಗೊಳಿಸಲು ಕೂಡಾ ಪ್ರಯತ್ನಿಸುತ್ತಿದೆ. ವಾಸ್ತವವಾಗಿ ತಮ್ಮ ಈ ಧರ್ಮನಿರಪೇಕ್ಷ ಸಂಸ್ಕೃತಿಯಿಂದಾಗಿಯೇ ಕಾಶ್ಮೀರಿ ಜನತೆ, ಭಾರತದೊಡನೆ ವಿಲೀನವಾಗಬೇಕೆಂದು ನಿರ್ಧರಿಸಿ ನಂತರ ಕೈಯಲ್ಲಿ ಶಸ್ತ್ರ ಹಿಡಿದು ಪಾಕಿಸ್ತಾನ ಕಳಿಸಿದ ಧಾಳಿಕೋರರನ್ನು ಎದುರಿಸಿ ಹೋರಾಡಿದರು. ಇದಕ್ಕೆ ಬದಲಾಗಿ ಅಮೆರಿಕಾ ಕಾಶ್ಮೀರ ಒಂದು ಸ್ವತಂತ್ರ ದೇಶವಾಗಿ ಇರಬೇಕು ಎಂದು ಬಯಸುತ್ತದೆ. ಏಕೆಂದರೆ ಆಗ ಅಲ್ಲಿ ಕಾಲೂರಲು ಅವಕಾಶ ಸಿಕ್ಕು ಅಲ್ಲೊಂದು ಕೈಗೊಂಬೆ ಸರ್ಕಾರವನ್ನು ಪ್ರತಿಷ್ಠಾಪಿಸಲು ಅವಕಾಶವಾಗುತ್ತದೆ. ಇದು ಅಮೆರಿಕನ್ ಸಾಮ್ರಾಜ್ಯಶಾಹಿಯ ಭೌಗೋಳಿಕ ರಾಜಕೀಯ ತಂತ್ರಕ್ಕೆ ಅನುಗುಣವಾದ ಪರಿಸ್ಥಿತಿ. ಕಾಶ್ಮೀರದ ಭೌಗೋಳಿಕ ಸನ್ನಿವೇಶದಿಂದಾಗಿ ಅದಕ್ಕಿರುವ ಸಾಮರಿಕ ಮಹತ್ವ ಹಾಗೂ ಇದರಲ್ಲಿ ಅಮೆರಿಕಾದ ಹಿತಾಸಕ್ತಿ ಇವುಗಳನ್ನು ಭಾರತ ಜನತೆ ಚೆನ್ನಾಗಿ ಅರಿತಿದ್ದಾರೆ. ಬಿಜೆಪಿಯ ಯಜಮಾನರು ಮಾತ್ರವೇ ಈ ವಾಸ್ತವತೆಯನ್ನು ಗುರುತಿಸಬಯಸುತ್ತಿಲ್ಲ. ಈ ಮೂಲಕ ಅವರು ಅಮೇರಿಕನ್ ಸಾಮ್ರಾಜ್ಯಶಾಹಿಗಳು ವಿಶ್ವದ ಈ ಕೇಂದ್ರ ಭಾಗದಲ್ಲಿ ತಮ್ಮ ಗುರಿಗಳನ್ನು ಈಡೇರಿಸಿಕೊಳ್ಳಲು ನೇರವಾಗಿ ಮತ್ತು ಪರೋಕ್ಷವಾಗಿ ಸಹಾಯ ಮಾಡುತ್ತಿದ್ದಾರೆ.

ಹಲ್ಲು ಗಿಂಜುತ್ತಿರುವ ವಾಜಪೇಯಿ ಸರಕಾರ

ಇರಾಕಿ ಮತ್ತು ಯುಗೋಸ್ಲಾವ್ ಜನತೆಯನ್ನು ಕೊಚ್ಚಿಹಾಕಿದ ಈ ಕಟುಕನನ್ನು ಓಲೈಸಲು ಹಲ್ಲು ಗಿಂಜುತ್ತಿರುವ ವಾಜಪೇಯಿ ಸರಕಾರ ಎಂತಹ ನೀಚ ಮಟ್ಟಕ್ಕೆ ಇಳಿಯುತ್ತಿದೆ ಎನ್ನುವುದಕ್ಕೆ ಇತ್ತೀಚೆಗೆ ಫೆಬ್ರವರಿ 18 ರಂದು 'ಸ್ಟೇಟ್ಸ್ ಮನ್' ಪತ್ರಿಕೆ ಪ್ರಕಟಿಸಿದ ಒಂದು ಸುದ್ದಿಯೇ ಸಾಕು - ಈ ಘಟನೆ ಅಷ್ಟೊಂದು ಗಮನ ಸೆಳೆದಂತೆ ಕಾಣುತ್ತಿಲ್ಲ. ಆ ಪತ್ರಿಕೆಯ ವರದಿಯ ಪ್ರಕಾರ ದಿಲ್ಲಿಯ ಪೋಲೀಸ್ ಕಮಿಷನರ್ ಫೆಬ್ರವರಿ 16 ರಂದು ನಮ್ಮ ವಿಮಾನ ಪಡೆಯ ನಿವೃತ್ತ ಅಧಿಕಾರಿ ಸತ್‌ನಾಮ್‌ಶಾಹಿಗೆ ಸಿಐಎ ಯೊಂದಿಗೆ ಸಂಪರ್ಕವಿದೆ ಎಂದು ಸಾರ್ವಜನಿಕವಾಗಿ ಹೇಳಿದಕ್ಕೆ ಕೇಂದ್ರ ಗೃಹ ಇಲಾಖೆ ಪೋಲೀಸ್ ಕಮಿಷನರನ್ನೇ ದಬಾಯಿಸಿದೆಯಂತೆ. ಅಮೆರಿಕಾದ ಅಧ್ಯಕ್ಷರು ಭಾರತ ಭೇಟಿಗೆ ಬರುತ್ತಿರುವ ಸನ್ನಿವೇಶದಲ್ಲಿ ಇದನ್ನು ಸಾರ್ವಜನಿಕವಾಗಿ ಏಕೆ ಹೇಳಬೇಕಿತ್ತು ಎಂದು! ಈ ಮಾಜಿ ವಿಮಾನಪಡೆ ಅಧಿಕಾರಿ ಸಿ.ಐ.ಎ. ಯಿಂದ ಹಣ ಪಡೆದವರ ಪಟ್ಟಿಯಲ್ಲಿದ್ದ ಎಂಬ ಅಂಶವನ್ನು ಮರೆಮಾಚಬೇಕು ಎಂದು ದಿಲ್ಲಿ ಪೋಲೀಸರಿಗೆ ತಾಕೀತು ಮಾಡಿರುವುದಾಗಿ ಆ ವರದಿ ಹೇಳಿದೆ. ಒಟ್ಟು ವಿಚಾರವೆಂದರೆ ಯಾವುದೇ ರೀತಿಯಲ್ಲಿ ಕ್ಲಿಂಟನ್‌ಗೆ ಬೇಸರವಾಗದಂತೆ ನೋಡಿಕೊಳ್ಳಬೇಕು!

ಕ್ಲಿಂಟನ್ ಕಾಶ್ಮೀರ ಪ್ರಶ್ನೆಯಲ್ಲಿ ಮಧ್ಯಸ್ಥಿಕೆ ವಹಿಸಬಯಸುತ್ತಾರೆ ಎಂದು ಆತನ ಹೆಂಡತಿ ಹಾಗೂ ಸದ್ಯದಲ್ಲೇ ಸಕ್ರಿಯ ರಾಜಕೀಯಕ್ಕೆ ಇಳಿಯಲಿರುವ ಹಿಲರಿ ಕ್ಲಿಂಟನ್‌ಳೇ ಸ್ವತಃ ಹೇಳಿದ ಮೇಲೂ ಈ ಹೊಲಸು ಹಲ್ಲುಗಿಂಜುವ ಚಾಳಿಯ ಪ್ರದರ್ಶನ ನಡೆದಿದೆ. ಭಾರತವೂ ಸೇರಿದಂತೆ ಹಿಂದೂ ಮಹಾಸಾಗರ ತಟದ ಎಲ್ಲಾ ದೇಶಗಳಿಗೆ ಬೆದರಿಕೆ ಒಡ್ಡಿರುವ ಡಿಗೋ ಗಾರ್ಸಿಯ ಪರಮಾಣು ನೆಲೆಯನ್ನು ಅಮೆರಿಕಾ ಕಳಚಿಹಾಕಬೇಕು ಎಂದು ಒತ್ತಾಯಿಸಲೂ ಸಾಧ್ಯವಿಲ್ಲದಂತಹ ಗುಲಾಮಿಕೆಯ ಪಾತಾಳಕ್ಕೆ ಭಾರತ ಸರಕಾರ ಇಳಿದಿದೆ.

ಸ್ವಾತಂತ್ರ್ಯ ಪಡೆಯಲು ಭಾರೀ ಬೆಲೆ ತೆತ್ತಿರುವ ಭಾರತದ ಜನತೆಯ ಮುಂದೆ ಇದೊಂದು ನಿಜವಾದ ಬೆದರಿಕೆ. ವಾಜಪೇಯಿ ಸರಕಾರದ ಸಾಮ್ರಾಜ್ಯಶಾಹಿ-ಪರ ಧೋರಣೆ ಇಂದು ನಮ್ಮ ಈ ಅಮೂಲ್ಯ ಸ್ವಾತಂತ್ರ್ಯವನ್ನು ಗಂಡಾಂತರಕ್ಕೆ ಈಡು ಮಾಡಿದೆ. ನಮ್ಮನ್ನು ನವಸಾಹತುಶಾಹಿಗೆ ಬಲಿಗೊಡುತ್ತಿದೆ. ಆದ್ದರಿಂದ ಭಾರತ ಸರಕಾರ ತನ್ನ ವಿದೇಶಾಂಗ ಧೋರಣೆಯನ್ನು ಬದಲಿಸಿ ಮತ್ತೆ ಈ ಹಿಂದಿನ ಶಾಂತಿ, ನಿಶ್ಶಸ್ತ್ರೀಕರಣ, ಸ್ವಾತಂತ್ರ್ಯ ಮತ್ತು ಸಾಮ್ರಾಜ್ಯಶಾಹಿ-ವಿರೋಧ ಆಧಾರಸ್ತಂಭಗಳಾಗಿರುವ ವಿದೇಶಾಂಗ ಧೋರಣೆಯನ್ನು ಅಂಗೀಕರಿಸಬೇಕಾದ ಸಮಯ ಬಂದಿದೆ. ಏಕೆಂದರೆ ಸಮಯದ ಒರೆಗಲ್ಲಲ್ಲಿ ಪುಟಗೊಂಡ ಧೋರಣೆಯಿದು. ಆದರೆ ಇದಕ್ಕಿಂತಲೂ ಮುಖ್ಯವಾದ ಸಂಗತಿಯೆಂದರೆ ನಮ್ಮ ಜನತೆ ಕೂಡಾ ತಮ್ಮ ಸ್ವಾತಂತ್ರ್ಯ, ರಾಷ್ಟ್ರೀಯ ಐಕ್ಯತೆ ಮತ್ತು ಪ್ರಾದೇಶಿಕ ಸಮಗ್ರತೆಗಾಗಿ ಒಗ್ಗಟ್ಟಿನಿಂದ ಎದ್ದು ನಿಲ್ಲಲೇಬೇಕಾದ ಸಮಯವಿದು.



ಕೃಪೆ: ದೇಶಾಭಿಮಾನಿ

ಭೋಪಾಲ್‌ಗಳು, ಎನ್ರೋನ್‌ಗಳು, ಮೊನ್ಸಾಂಟೋಗಳು ನಮಗೆ ಬೇಡ!

ಪುಟ 6 ರಿಂದ

'ಮಾಯ'ವಾಗಬಲ್ಲ ಹಣ. ಇಂತಹ ಮೂರುವರೆ ಶತಕೋಟಿ ಡಾಲರುಗಳ ಹಣಕಾಸು ಬಂಡವಾಳ ಭಾರತದ ಆರ್ಥಿಕವನ್ನು, ರೂಪಾಯಿಯ ಬೆಲೆಯನ್ನು ಅಲ್ಲೋಲ-ಕಲ್ಲೋಲ ಮಾಡಬಲ್ಲದು.



ದಕ್ಷಿಣ-ಪೂರ್ವ ಏಶ್ಯಾದ 'ಹುಲಿ'ಗಳಾಗಿದ್ದ ಇಂಡೋನೇಶ್ಯಾ, ಮಲೇಶ್ಯಾ, ಸಿಂಗಾಪುರಗಳನ್ನು 'ಇಲಿ' ಮಾಡಿದ ಈ ಹಣ ಭಾರತವನ್ನು ನುಂಗಲು ಕಾದಿದೆ. ಬಹುರಾಷ್ಟ್ರೀಯ ಹಣಕಾಸು ಕಂಪನಿಗಳು, ಬ್ಯಾಂಕುಗಳು ಭಾರತದ ಶೇರು ಮಾರುಕಟ್ಟೆಯನ್ನು ಹೆಚ್ಚು ಕಡಿಮೆ ಪೂರ್ಣವಾಗಿ ಈಗ ನಿಯಂತ್ರಿಸುತ್ತವೆ.

ದೇಶದ ಬೆಳವಣಿಗೆ, ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ವಿದೇಶಿ ಕಂಪನಿಗಳು ಯಾವುದೇ ರೀತಿಯಲ್ಲಿ ಸಹಕಾರಿಯಾಗುವುದಿಲ್ಲ ಎಂಬುದು ಈಗ ನಿರ್ವಿವಾದಿತ. ಅವುಗಳ ಲಾಭವನ್ನು ಅತ್ಯಧಿಕಗೊಳಿಸುವ ವಿಧಾನ ಅನುಸರಿಸುತ್ತಿರುವೆ ಅಷ್ಟೆ. ಇದು ಮಾತ್ರವಲ್ಲ ಅವುಗಳ ದಾಂಧಲೆ ತಾರಕಕ್ಕೇರಿದಾಗ ಜನ ಅದರ ವಿರುದ್ಧ ದಂಗೆಯೆದ್ದಾಗ ಅದರ ವಿರುದ್ಧ ರಾಜಕೀಯವಾಗಿಯೂ ಮಧ್ಯ ಪ್ರವೇಶ ಮಾಡಲು ಆರಂಭಿಸುತ್ತವೆ. ವಾಜಪೇಯಿ ಸರ್ಕಾರ ಸ್ಥಾಪಿಸುವುದರಲ್ಲಿ ವಿದೇಶಿ ಕಂಪನಿಗಳು ದೊಡ್ಡ ಪಾತ್ರ ವಹಿಸಿದ್ದವು ಎಂಬುದು ಈಗ ಸಾರ್ವಜನಿಕ ಗುಟ್ಟು. ಭೋಪಾಲ್ ಯೂನಿಯನ್ ಕಾರ್ಬೈಡ್ ದುರಂತ, ಕಾರ್ಗಿಲ್‌ನ ಉಪ್ಪು/ಬೀಜಗಳ ಚಟುವಟಿಕೆ, ಮಾನ್ಸಂಟೋ, ಎನ್ರೋನ್, ಕೊಜೆಂಟ್ರಿಕ್ಸ್‌ಗಳ ವಿರುದ್ಧ ಇಂತಹ ಪ್ರತಿರೋಧ ಭುಗಿಲೆದ್ದಿದೆ. ಇವನ್ನು ಹತ್ತಿಕ್ಕಲು ಕಂಪನಿಗಳು ಯಾವ ಮಟ್ಟಕ್ಕೂ ಹೋಗುವುದಕ್ಕೆ ಹೇಸುವುದಿಲ್ಲ ಎಂಬುದು ಅಂತರ್‍ರಾಷ್ಟ್ರೀಯ ಅನುಭವ.

ಅಣ್ವಸ್ತ್ರ ತಯಾರಿಯ ಹಿನ್ನೆಲೆಯಲ್ಲಿ ಆರ್ಥಿಕ ದಿಗ್ಬಂಧನ, ಈಗಲೂ ಸಿಟಿಬಿಟಿ, ಕಾಶ್ಮೀರದ ಬಗ್ಗೆ ನೀತಿ ಬದಲಾಯಿಸಲು ಹಾಕಲಾಗುತ್ತಿರುವ ಆರ್ಥಿಕ ಒತ್ತಡ ಬಹುರಾಷ್ಟ್ರೀಯ ಕಂಪನಿಗಳಿಗೆ ದೇಶದ ಆರ್ಥಿಕ ಒತ್ತೆ ಇಡುವ ನೀತಿಯ ನೇರ ಫಲ. ಬಹುರಾಷ್ಟ್ರೀಯ ಕಂಪನಿಗಳ ಬಗೆಗಿರುವ ಭ್ರಮೆ ಜನ ಸಾಮಾನ್ಯರಲ್ಲಿ ಹೋಗಲಾಡಿಸದೆ ಆರ್ಥಿಕ-ರಾಜಕೀಯ ಸಾರ್ವಭೌಮತೆಗೆ ಒದಗಿರುವ ಅಪಾಯವನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಇದಕ್ಕೆ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಪ್ರಚಾರ-ಪ್ರಕ್ಷೋಭೆ ಪ್ರಥಮ ಆದ್ಯತೆ.

ಕಂಪನಿ ಹಿತಾಸಕ್ತಿಗೆ ಧಕ್ಕೆ ಬಂದರೆ ಮಿಲಿಟರಿ ಮಧ್ಯಪ್ರವೇಶ

ಇಂತಹ ಹಲವಾರು ಕುಖ್ಯಾತ ಕೇಸ್‌ಗಳಲ್ಲಿ ಪ್ರಮುಖವಾದವು ಎರಡು

. 1954 ರಲ್ಲಿ ದಕ್ಷಿಣ ಅಮೆರಿಕಾದ ಗ್ವಾಟೆಮಾಲಾದಲ್ಲಿ ಯುನೈಟೆಡ್ ಫ್ರುಟ್ ಕಂಪನಿ ಎಂಬ ಅಮೆರಿಕನ್ ಕಂಪನಿಯ ಬಳಕೆ ಮಾಡುವ ಭೂಮಿಯನ್ನು ಸರ್ಕಾರ ವಹಿಸಿಕೊಂಡು(ಪರಿಹಾರ ಕೊಟ್ಟು) ಬಡ ರೈತರಿಗೆ ಹಂಚಲು ಹೊರಟಾಗ ಅಮೆರಿಕನ್ ಸೈನ್ಯ ಗ್ವಾಟೆಮಾಲದ ಮೇಲೆ ಆಕ್ರಮಣ ಮಾಡಿತು.

. ಸಾಲ್ವಡೋರ್ ಅಲೆಂಡೆ ಚಿಲಿಯ ಅಧ್ಯಕ್ಷ ಪದವಿಗೆ(1970 ರಲ್ಲಿ) ಸ್ಪರ್ಧಿಸಿದಾಗ ಅವರನ್ನು ಸೋಲಿಸಲು ಐಟಿ ಅಂಡ್ ಟಿ ಎಂಬ ಬಹುರಾಷ್ಟ್ರೀಯ ಕಂಪನಿ ಸಿಐಎಗೆ ಹತ್ತು ಲಕ್ಷ ಡಾಲರನ್ನು ಕೊಟ್ಟಿತು. ಅಲೆಂದೆ ಚುನಾಯಿತರಾದ ಮೇಲೂ ಐಟಿ ಅಂಡ್ ಟಿ(ITT) ಮತ್ತು ರಾಷ್ಟ್ರೀಕರಣಕ್ಕೆ ಒಳಗಾದಕೆನ್ನೆಕೊಟ್ ಮತ್ತು ಅನಕೊಂಡಾ ತಾಮ್ರದ ಕಂಪನಿಗಳು ಸೇರಿ ಸಿಐಎ, ಸರ್ಕಾರದ ಜತೆಗೂಡಿ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿ, ಅಲೆಂದೆ ಕೊಲೆ ಮಾಡಿ ಅತ್ಯಂತ ಬರ್ಬರ ಮಿಲಿಟರಿ ಸರ್ವಾಧಿಕಾರಿ ಪಿನೋಶೆ ಸರ್ಕಾರ ಸ್ಥಾಪಿಸಿದವು. ಈಗಲೂ ಆತನ ದುಷ್ಕೃತ್ಯಗಳ ಬಗ್ಗೆ ಭಾರಿ ವಿವಾದ ನಡೆದಿದೆ.

ಬಹುರಾಷ್ಟ್ರೀಯ ಕಂಪನಿಗಳ ಕಬಂಧ ಬಾಹುಗಳು

. ಜಗತ್ತಿನ ಮೂರನೇ ಎರಡು ಭಾಗದಷ್ಟು ಅಂತರ್‍ರಾಷ್ಟ್ರೀಯ ವ್ಯಾಪಾರ ಬಹುರಾಷ್ಟ್ರೀಯ ಕಂಪನಿಗಳ ನಿಯಂತ್ರಣದಲ್ಲಿದೆ ಅದರಲ್ಲಿ ಅರ್ಧದಷ್ಟು ಬಹುರಾಷ್ಟ್ರೀಯ ಕಂಪನಿಗಳ ನಡುವಣ ವ್ಯಾಪಾರವೇ.

. ಜನರಲ್ ಮೋಟಾರ್ಸ್ ಎಂಬ ಅಮೆರಿಕನ್ ಕಂಪನಿಯ ವಾರ್ಷಿಕ ಮಾರಾಟದ ಮೊತ್ತ ಇಂಡೋನೇಶ್ಯಾದ ಒಟ್ಟು ವಾರ್ಷಿಕ ಉತ್ಪನ್ನಕ್ಕಿಂತ ಹೆಚ್ಚು. ಫೋರ್ಡ್ ಎಂಬ ಇನ್ನೊಂದು ದೊಡ್ಡ ಅಮೆರಿಕನ್ ಕಾರು ಕಂಪನಿಯ ವಾರ್ಷಿಕ ಮಾರಾಟ, ಇರಾನ್‌ನ ಒಟ್ಟು ವಾರ್ಷಿಕ ಉತ್ಪನ್ನಕ್ಕಿಂತ ಹೆಚ್ಚು.

. ಜಪಾನಿನ ಆರು ದೊಡ್ಡ ಕಂಪನಿಗಳ ಒಟ್ಟು ವಾರ್ಷಿಕ ಮಾರಾಟ ಇಡೀ ದಕ್ಷಿಣ ಅಮೆರಿಕಾದ ಎಲ್ಲಾ ದೇಶಗಳ ಒಟ್ಟು ವಾರ್ಷಿಕ ಉತ್ಪನ್ನಕ್ಕಿಂತ ಹೆಚ್ಚು.

. 51 ಬಾರಿ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳ ವಹಿವಾಟು(ಪ್ರತ್ಯೇಕವಾಗಿ) ಸುಮಾರು 100 ದೇಶಗಳ ಆರ್ಥಿಕ ವಹಿವಾಟಿಗಿಂತ (ಪ್ರತ್ಯೇಕವಾಗಿ) ಹೆಚ್ಚು.

. ಜಗತ್ತಿನ ತಂತ್ರಜ್ಞಾನ ಮತ್ತು ಪೇಟೆಂಟ್‌ಗಳ ಶೇಕಡಾ 90 ಭಾಗ ಈ ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲಿದೆ.

. ಈ ದೈತ್ಯ ಕಂಪನಿಗಳಲ್ಲಿ ಶೇಕಡಾ 90 ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ನೆಲೆ ಇರುವಂತಹವು. ಅರ್ಧಕ್ಕೂ ಹೆಚ್ಚು ಐದು ದೇಶಗಳಲ್ಲಿ ಇರುವಂತಹವು-ಅಮೆರಿಕ, ಜಪಾನ್, ಫ್ರಾನ್ಸ್, ಜರ್ಮನಿ, ನೆದರ್‌ಲ್ಯಾಂಡ್.

. ಜಗತ್ತಿನ ಮುನ್ನೂರು ಅತಿದೊಡ್ಡ ಕಂಪನಿಗಳು ಜಗತ್ತಿನ ಕಾಲು ಭಾಗ ಉತ್ಪಾದಕ ಆಸ್ತಿಯನ್ನು ಹೊಂದಿವೆ.

. ಜಗತ್ತಿನ ಇಲೆಕ್ಟ್ರಾನಿಕ್ಸ್ ಕ್ಷೇತ್ರದ ಮಾರಾಟದ ಶೇಕಡಾ 80 ಭಾಗ ಕೇವಲ 23 ದೈತ್ಯ ಕಂಪನಿಗಳದ್ದು.

. ಜಗತ್ತಿನ ಕೀಟನಾಶಕಗಳ ಮಾರಾಟದಲ್ಲಿ ಶೇಕಡಾ 90 ಭಾಗ ಕೇವಲ ಇಪ್ಪತ್ತು ರಾಸಾಯನಿಕ ಬಹುರಾಷ್ಟ್ರೀಯ ದೈತ್ಯ ಕಂಪನಿಗಳ ಕೈಯಲ್ಲಿದೆ.

. ಕೃಷಿ ರಫ್ತಿಗೆ(ಉದಾ: ಬಾಳೆಹಣ್ಣು, ಹೊಗೆಸೊಪ್ಪು, ಹತ್ತಿ) ವಿಶ್ವದಾದ್ಯಂತ ಮೀಸಲಾದ ಜಮೀನಿನ ಶೇಕಡಾ 90 ಭಾಗದ ಒಡೆತನವನ್ನು ಬಹುರಾಷ್ಟ್ರೀಯ ಕಂಪನಿಗಳು ಹೊಂದಿವೆ.

. ಅಲ್ಯುಮಿನಿಯಂನಲ್ಲಿ ಮೂರನೇ ಎರಡು ಭಾಗ ಆರು ದೈತ್ಯ ಕಂಪನಿಗಳ ಕೈಯಲ್ಲಿದೆ. ತೈಲ ಶುದ್ಧೀಕರಣ ದಲ್ಲಿ ಮೂರನೇ ಎರಡು ಭಾಗ, ಕಬ್ಬಿಣ/ಉಕ್ಕು ತಯಾರಿಕೆಯಲ್ಲಿ ಅರ್ಧಭಾಗ, ಟಿನ್ ಕೈಗಾರಿಕೆಯಲ್ಲಿ ಅರ್ಧಭಾಗ, ದೈತ್ಯ ಕಂಪನಿಗಳ ಕೈಯಲ್ಲಿವೆ. ○

ಬಹುರಾಷ್ಟ್ರೀಯ ಕಂಪನಿಗಳು ಏಕೆ ಅಪಾಯಕಾರಿ?

- ಅವು ತಮ್ಮೊಳಗೆ ತಮ್ಮ ಶಾಖೆಗಳೊಳಗೆ 'ವರ್ಗಾವಣೆ ಬೆಲೆ'ಯ ಆಧಾರದ ಮೇಲೆ ಭಾರಿ ಲಾಭಗಳಿಸುತ್ತವೆ. ಆ ಮೂಲಕ ದೇಶದ ತೆರಿಗೆ, ನಿಯಮ, ಇತರ ಸಾಮಾಜಿಕ ಕಲ್ಯಾಣದ ಅಗತ್ಯ ನಿರ್ಬಂಧಗಳನ್ನು ಬುಡಮೇಲು ಮಾಡುತ್ತವೆ.
- ದೇಶದ ಆಂತರಿಕ ರಾಜಕೀಯ ಆಗುಹೋಗುಗಳಲ್ಲಿ ತಮ್ಮ ಹಣಬಲ, ಆರ್ಥಿಕದಲ್ಲಿ ಆದ್ಯ ಪಾತ್ರದಿಂದ ಮೂಗು ತೂರಿಸಿ, ಜನರ ರಾಜಕೀಯ ಇಚ್ಛೆ ಜಾರಿಯಾಗದಂತೆ ಬುಡಮೇಲು ಮಾಡುತ್ತವೆ. ಸ್ವತಂತ್ರ ಸ್ವಾವಲಂಬಿ ಬೆಳವಣಿಗೆಯ ಹಾದಿ ಹಿಡಿದಾಗೆಲ್ಲ ಅಂತಹ ದೇಶವನ್ನು ಬುಡಮೇಲು ಮಾಡುತ್ತವೆ.
- ಅಂತರ್‍ರಾಷ್ಟ್ರೀಯ ರಾಜಕೀಯದಲ್ಲೂ ತಮ್ಮ ಹಣಬಲ, ಆರ್ಥಿಕದಲ್ಲಿ ಆದ್ಯ ಪಾತ್ರ ಬಳಸಿ, ಈ ದೈತ್ಯ ಕಂಪನಿಗಳಿಗೆ ಪೂರಕ ನೀತಿಗಳನ್ನು 'ಅಂತರ್‍ರಾಷ್ಟ್ರೀಯ' ಸಂಘಟನೆಗಳ ಮೂಲಕ ಹೊರಲು ಯತ್ನಿಸುತ್ತವೆ. 80 ರ ದಶಕದಿಂದ ಗ್ಯಾಟ್, ಗ್ಯಾಟ್ಸ್, ಯುರೋಪಿಯನ್ ಒಕ್ಕೂಟ, ನಾಫ್ತಾ, ಅಪೆಕ್ ಈಗ ಡಬ್ಲ್ಯು.ಟಿ.ಓ. - ಇವೆಲ್ಲ ಈ ದೈತ್ಯ ಕಂಪನಿಗಳ ಸೃಷ್ಟಿಗಳೇ, ಅವುಗಳ ಅಸ್ತ್ರಗಳೇ.
- ಅವುಗಳ ಹಿತಾಸಕ್ತಿಗೆ ಬೇಕಾದ ಮಿಲಿಟರಿ ಬಲ ಬಳಸಲು ಹೇಸುವುದಿಲ್ಲ. ನಾಟೋ ಈ ದೈತ್ಯ ಕಂಪನಿಗಳ ಅಂತರ್‍ರಾಷ್ಟ್ರೀಯ ಸೈನ್ಯ ಇದ್ದ ಹಾಗೆ. ಐ.ಎಂ.ಎಫ್.ವಿಶ್ವಬ್ಯಾಂಕ್ ಸಹ ಇವುಗಳ ಅಸ್ತ್ರಗಳೇ.
- ವಿಶ್ವದ ಪರಿಸರ ನಾಶದಲ್ಲಿ ಈ ಕಂಪನಿಗಳ ಪಾತ್ರ ದೊಡ್ಡದು. ಪರಿಸರ, ಸಾರ್ವಜನಿಕರಿಗೆ ಅಪಾಯಕಾರಿಯಾದ ಹಲವಾರು ರಸಾಯನಿಕಗಳ ಉತ್ಪಾದನೆ ಬಳಕೆ, ಅದಕ್ಕೆ ಬದಲಿ ಹುಡುಕುವಲ್ಲಿ/ಜಾರಿ ಮಾಡುವಲ್ಲಿ ಪ್ರತಿರೋಧ ಒಡ್ಡುತ್ತಿರುವುದು ಈ ಕಂಪನಿಗಳೇ. ಇಂದು ವಿಶ್ವದ ಓಝೋನ್ ಪದರದಲ್ಲಿ ರಂಧ್ರದ ಭಾರಿ ಸಮಸ್ಯೆಗೆ ಮೂಲ ಕಾರಣವಾದ OFC ಎಂಬ ರಾಸಾಯನಿಕವನ್ನು ಉತ್ಪಾದಿಸುವುದು ಕೆಲವೇ ದೈತ್ಯ ರಾಸಾಯನಿಕ ಬಹುರಾಷ್ಟ್ರೀಯ ಕಂಪನಿಗಳು.
- ಹಲವು ನಿಷೇಧಿತ ರಾಸಾಯನಿಕ, ಔಷಧಿಗಳನ್ನು ಇನ್ನೂ ಉತ್ಪಾದಿಸಿ ಹರಡುತ್ತಿರುವುದು ಈ ಕಂಪನಿಗಳೇ.
- ಅಭಿವೃದ್ಧ ದೇಶಗಳಲ್ಲಿ ನಿಷೇಧಿತ. ಸಾರ್ವಜನಿಕರಿಗೆ, ಕಾರ್ಮಿಕರಿಗೆ ಅಪಾಯಕಾರಿ ರಾಸಾಯನಿಕ ಉತ್ಪಾದನೆಯನ್ನು ಮೂರನೇ ಜಗತ್ತಿನ ದೇಶಗಳಿಗೆ ವರ್ಗಾಯಿಸುತ್ತವೆ. ಭೂಪಾಲ್ ಅನಿಲ ದುರಂತದಂತಹ ಭಾರಿ ಅಘಘಾತ ವಾದಾಗಲೂ ಪರಿಹಾರ ಕೊಡದೆ ನುಣುಚಿಕೊಳ್ಳುತ್ತವೆ. ಯಾವುದೇ ಸರ್ಕಾರ ಗಂಭೀರಕ್ರಮ ಕೈಗೊಂಡರೆ, ಅಲ್ಲಿಂದ ಹೆಚ್ಚು ಒತ್ತಡಕ್ಕೆ ಒಳಗೊಳ್ಳಬಲ್ಲ ದೇಶಕ್ಕೆ ಕೈಗಾರಿಕೆ ವರ್ಗಾಯಿಸುತ್ತದೆ. ಕಾರ್ಖಾನೆಯೊಳಗಿನ ಅಪಾಯಕಾರಿ ಉತ್ಪಾದಕ, ಉತ್ಪಾದನೆ ಬಗ್ಗೆ ಸರ್ಕಾರಗಳಿಗೆ ಯಾವುದೇ ಮಾಹಿತಿ ಕೊಡುವುದಿಲ್ಲ.
- ಈ ದೈತ್ಯ ಕಂಪನಿಗಳ ಉದ್ಯೋಗಸೃಷ್ಟಿ ರೆಕಾರ್ಡ್ ಬಹಳ ಕೆಟ್ಟಿದೆ. 1982-93 ರ ನಡುವೆ ಅಮೆರಿಕದ ದೈತ್ಯ ಕಂಪನಿಗಳು ಏಳುವರೆ ಲಕ್ಷ ಉದ್ಯೋಗಗಳನ್ನು ಕಡಿತ ಮಾಡಿದವು. ಅದರ ಅರ್ಧದಷ್ಟು ಉದ್ಯೋಗಗಳನ್ನು ಮಾತ್ರ ಮೂರನೇ ಜಗತ್ತಿನ ದೇಶಗಳಿಗೇ ಒಯ್ದವು. ಅಂದರೆ ಒಟ್ಟು ಮೂರು ಮುಕ್ಕಾಲು ಲಕ್ಷದಷ್ಟು ಉದ್ಯೋಗಕಡಿತ ಮಾಡಿದವು.
- 1975-92 ರ ನಡುವೆ ವಿದೇಶಗಳಲ್ಲಿ ಈ ದೈತ್ಯ ಕಂಪನಿಗಳ ಶೇರು ಬಂಡವಾಳ ಏಳು ಪಟ್ಟಾಯಿತು. ಆದರೆ ಉದ್ಯೋಗ ಸೃಷ್ಟಿ ಕೇವಲ ಎರಡು ಪಟ್ಟು.

ಕಾರ್ಗಿಲ್ ವಿಮರ್ಶಾ ಸಮಿತಿಯ ವರದಿಯ ಲೇಖನ

ಪುಟ 5 ರಿಂದ

ಪರಾಮರ್ಶೆ ಸಮಿತಿಯಂತೂ ಇನ್ನೂ ಮುಂದೆ ಹೋಗಿ ಹೀಗೆಂದಿದೆ-''ಯಥಾಸ್ಥಿತಿ ಉಳಿಸಿಕೊಳ್ಳುವಲ್ಲಿ ರಾಜಕೀಯ, ಅಧಿಕಾರಶಾಹಿ, ಮಿಲಿಟರಿ ಮತ್ತು ಬೇಹುಗಾರಿಕೆ ವಿಭಾಗಗಳಲ್ಲಿನ ಅಧಿಕಾರಸ್ಥರು ಒಂದು ಪಟ್ಟಭದ್ರ ಹಿತಾಸಕ್ತಿ ಬೆಳೆಸಿಕೊಂಡಂತೆ ಕಾಣುತ್ತದೆ. ಶಾಂತಿ ಕಾಲದಲ್ಲಿ ರಾಷ್ಟ್ರೀಯ ಭದ್ರತೆಯ ನಿರ್ವಹಣೆ ಹಿನ್ನೆಲೆಗೆ ಸರಿಯುತ್ತದೆ. ಯುದ್ಧ ಅಥವಾ ಪರೋಕ್ಷ ಯುದ್ಧದಲ್ಲಿ ಅದು ಯಾರೂ ಮುಟ್ಟಬಾರದಂತಹ ಸೂಕ್ಷ್ಮ ಎಂದು ಪರಿಗಣಿಸಲಾಗುತ್ತದೆ.

ಬಸ್ ರಾಜತಂತ್ರದಲ್ಲಿ ಮೈಮರೆತರು

ಭಾರತೀಯ ಪ್ರಧಾನ ಮಂತ್ರಿಗಳು ಲಾಹೋರ್ ಬಸ್ ಪ್ರಯಾಣಕ್ಕೆ ಸಿದ್ದರಾಗುತ್ತಿದ್ದಾಗಲೇ ಪಾಕಿಸ್ತಾನಿ ಮಿಲಿಟರಿ ಮತ್ತು ಅದರ ಬೇಹುಗಾರಿಕೆ ಸಂಸ್ಥೆಯಾದ ಐ.ಎಸ್.ಐ.ನ ಆಗಿನ ಪ್ರಧಾನಿ ಮಂತ್ರಿ ನವಾಜ್ ಶರೀಫ್‌ರ ಸಮ್ಮತಿಯೊಂದಿಗೆ ಒಂದು ಕಾರ್ಗಿಲ್ ಮಾದರಿ ಕಾರ್ಯಾಚರಣೆಯ ಯೋಜನೆ ನಡೆಸಿತ್ತು ಎಂದು ಕೂಡಾ ಸುಬ್ರಹ್ಮಣ್ಯ ಸಮಿತಿ ಹೇಳಿದೆ. ಆದರೆ ನಮ್ಮ ಮಹಾನ್ ರಕ್ಷಣಾ ಮಂತ್ರಿಗಳು ಆಗ ನವಾಜ್ ಶರೀಫ್ ಅಮಾಯಕ, ಅವರಿಗೆ ಈ ಕಾರ್ಯಾಚರಣೆಯ ಬಗ್ಗೆ ತಿಳಿದೇ ಇರಲಿಲ್ಲ ಎಂದು ಸರ್ಟಿಫಿಕೇಟ್ ಕೊಡುತ್ತಾ ತಿರುಗುತ್ತಿದ್ದರಲ್ಲವೇ?

ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಭಾರತದ ಜನತೆಗೂ, ಪಾಕಿಸ್ತಾನದ ಜನತೆಗೂ ಈ ಪ್ರದೇಶದಲ್ಲಿ ಶಾಂತಿ ಬೇಕು, ಈ ಎರಡು ದೇಶಗಳ ಅಭಿವೃದ್ಧಿಗಳ ಮತ್ತು ನಮ್ಮ ಜನಗಳ ಕಲ್ಯಾಣಕ್ಕೆ ಉತ್ತಮ ನೆರೆಹೊರೆ ಸಂಬಂಧ ಅತ್ಯಗತ್ಯ ಎಂಬ ಬಗ್ಗೆ ಏನೇನೋ ಸಂದೇಹವಿಲ್ಲ. ಆದ್ದರಿಂದ ನಮ್ಮೆರಡು ದೇಶಗಳ ನಡುವೆ ಸಂಬಂಧಗಳ ಸುಧಾರಣೆಯ ಯಾವುದೇ ಪ್ರಯತ್ನವೂ ಸ್ವಾಗತಾರ್ಹವಾದ ಪ್ರಯತ್ನ. ಆದರೆ ಭಾರತದ ಪ್ರಧಾನ ಮಂತ್ರಿ ಲಾಹೋರ್ ಬಸ್ ಪ್ರಯಾಣ ಮಾಡಿದಾಗ ಇದ್ದದ್ದು ಈ ಭಾವನೆಯಲ್ಲ. ಶಾಂತಿ ಕುರಿತಂತೆ ಜನಗಳ ನೈಜ ಭಾವನೆಯ ದುರುಪಯೋಗ ಪಡೆಯುವುದಷ್ಟೆ ಅದರ ಒಂದು ಬಯಕೆಯಾಗಿದ್ದರೆ, ಇನ್ನೊಂದು ಉದ್ದೇಶ ತಾವು ಯಾರನ್ನು 'ಹುಸಿ ಜಾತ್ಯಾತೀತ' ರು ಎಂದು ಛೇಡಿಸುತ್ತಿದ್ದರೋ ಅವರಿಗಿಂತ ತಾವು ಹೆಚ್ಚು ಜಾತ್ಯಾತೀತರು ಎಂದುತೋರಿಸಿಕೊಳ್ಳುವುದು. ಒಟ್ಟಿನಲ್ಲಿ ಅವರ ಬಸ್ ರಾಜತಾಂತ್ರಿಕ ಪ್ರಮುಖ ಬಲಿಯೆಂದರೆ ಗಡಿಯಲ್ಲಿನ ಮುನ್ನೆಚ್ಚರಿಕೆ. 'ಲಾಹೋರ್ ಪ್ರಕ್ರಿಯೆಯಲ್ಲಿ ಕೆಲವರು ಗಂಭೀರ ಲೋಪಗಳನ್ನು ಕಂಡರೂ ಕೆಲವು ರಾಜಕೀಯ ವಲಯಗಳಲ್ಲಿ ಹಾಗೂ ಅಧಿಕಾರದಲ್ಲಿರುವ, ಅಧಿಕಾರದ ಹೊರಗಿರುವ ಮುಖಂಡರಲ್ಲಿ ಒಂದು ಭಾವೋನ್ಮಾದ ವ್ಯಾಪಿಸಿತ್ತು" ಎಂದು ಸುಬ್ರಹ್ಮಣ್ಯ ಸಮಿತಿಯೂ ಗಮನಿಸಿದೆ.

ಭಾರತದ ರಾಜಕೀಯ ಮುಖಂಡರ ಜಾಗರೂಕತೆ ಸಡಿಲಗೊಂಡ ಈ ಹಿನ್ನೆಲೆಯಲ್ಲಿ ಕಾರ್ಗಿಲ್ ಮತ್ತು ಇತರ ವಲಯಗಳಲ್ಲಿ ಪಾಕಿಸ್ತಾನೀ ನುಸುಳಿಕೆ ನಡೆಯಿತು, ಅದರ ಪರಿಣಾಮವಾಗಿ ಯುದ್ಧ ಸಂಭವಿಸಿತು.

ಆದರೆ ಒಂದು ಮಹತ್ವದ ಅಂಶ ಈ.ಪರಾಮರ್ಶೆ ಸಮಿತಿಯ ಕಣ್ತಪ್ಪಿ ಹೋಗಿದೆ. ಕಾಶ್ಮೀರ ಪ್ರಶ್ನೆಯನ್ನು ಅಂತರ್‍ರಾಷ್ಟ್ರೀಯಗೊಳಿಸುವುದು ಪಾಕಿಸ್ತಾನೀ ನುಸುಳಿಕೆಯ ಉದೇಶ ಎಂದು ಸರಿಯಾಗಿಯೇ ಹೇಳಿದರೂ ಈ ಸಮಿತಿ, ಆ ನುಸುಳಿಕೆಯ ವೇಳೆಗೇ ಪಾಕಿಸ್ತಾನದಲ್ಲಿ ತರಬೇತಿ ಮತ್ತು ಶಸ್ತ್ರಾಸ್ತ್ರ ಪಡೆದ 2000 ಕ್ಕಿಂತಲೂ ಹೆಚ್ಚು ಉಗ್ರಗಾಮಿಗಳು ಕಾಶ್ಮೀರದಲ್ಲಿ ಭಾರತದ ವಿರುದ್ಧ ಬಂಡಾಯ ಸಂಘಟಿಸಲು ಕಾಶ್ಮೀರ ಕಣಿವೆಯೊಳಗೆ ನುಗ್ಗಿದ್ದರು ಎಂಬ ಸಂಗತಿಯ ಪ್ರಸ್ತಾಪವನ್ನು ಕೂಡಾ ಮಾಡಿಲ್ಲ.

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಗಳು

ನಮ್ಮ ರಾಜ್ಯದಲ್ಲಿ ಒಂದು ಅಂದಾಜಿನ ಪ್ರಕಾರ 1200 ಕ್ಕೂ ಹೆಚ್ಚು ಗಾರ್ಮೆಂಟ್ಸ್ ಕಾರ್ಖಾನೆಗಳಿದ್ದು ಅವುಗಳಲ್ಲಿ 20 ಲಕ್ಷಕ್ಕೂ ಹೆಚ್ಚು ಮಹಿಳಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಈ ಕಾರ್ಖಾನೆಗಳನ್ನು ಪ್ರಾರಂಭಿಸಲು ತುಂಬಾ ಪ್ರೋತ್ಸಾಹ ನೀಡುತ್ತಿದ್ದು ಈ ಕಾರ್ಖಾನೆಗಳಿಗೆ ಸಾವಿರಾರು ಕೋಟಿ ರೂ.ಗಳ ಸಾಲವನ್ನು ಸಹ ನೀಡಲಾಗುತ್ತಿದೆ. ಇದರ ಜೊತೆಯಲ್ಲಿ ವಿದೇಶಕ್ಕೆ ಈ ಬಟ್ಟೆಗಳನ್ನು ರಫ್ತು ಮಾಡಲು ವಿನಾಯ್ತಿಯನ್ನು ನೀಡುತ್ತಿದೆ.

ಬೆಲೆ ಏರಿಕೆ ನಿರುದ್ಯೋಗ ಈ ಸಮಸ್ಯೆಗಳಿಂದ ಜನ ಆರ್ಥಿಕವಾಗಿ(ಅದರಲ್ಲೂ ಹೆಚ್ಚಾಗಿ ಮಹಿಳೆಯರೆ) ದಿನೇ ದಿನೇ ದುರ್ಬಲವಾಗುತ್ತಿದ್ದು ಏನಾದರೂ ಒಂದು ಕೆಲಸ ಸಿಕ್ಕರೆ ಸಾಕು ಮಾಡುತ್ತೇವೆ ಎನ್ನುವವರಿಗೆ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಸುಲಭವಾಗಿ ಕೆಲಸ ಸಿಗುತ್ತಿದೆ. ಈ ಪರಿಸ್ಥಿತಿಯ ದುರ್ಲಾಭವನ್ನು ಪಡೆದು ಕಾನೂನಿಗೆ ಮೀರಿದಂತಹ ಷರತ್ತುಗಳನ್ನು ವಿಧಿಸಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ರಾತ್ರಿ 9 ಗಂಟೆಯುವರೆಗೂ ಓವರ್‌ಟೈಂ ಮಾಡಬೇಕು, ಗರ್ಭಿಣಿ ಹೆಣ್ಣು ಮಕ್ಕಳು ಸಹ ನಿಂತೇ ಕೆಲಸ ಮಾಡಬೇಕು. ಓವರ್‌ಟೈಂ ಮಾಡಿದ್ದಕ್ಕೆ ಹೆಚ್ಚುವರಿ ಸೌಲಭ್ಯವನ್ನು ಕೂಡದಿರುವುದು, 10-12 ಗಂಟೆಗಳ ಕಾಲ ದುಡಿಸಿಕೊಳ್ಳುವುದು. ಈ ರೀತಿಯ ಅನೇಕ ಈ ಮಹಿಳೆಯರಿಗೆ ಯಾವುದೇ ರೀತಿಯ ಕೆಲಸದ ಭದ್ರತೆ ಇಲ್ಲದಂತಹ ವಾತಾವರಣವನ್ನು ನಿರ್ಮಾಣ ಮಾಡಿ ಸಾಮಾಜಿಕ ಒತ್ತಡಕ್ಕೆ ಈಡು ಮಾಡುವುದು ಇಲ್ಲಿನ ಸೂಪರ್ ವೈಸರ್‌ಗಳ ಹಾಗೂ ಪ್ರೊಡಕ್ಷನ್ ಮ್ಯಾನೇಜರ್(P.M) ಗಳ ಮುಖ್ಯ ಕೆಲಸವಾಗಿರುತ್ತದೆ. ಈ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳ ಪರಿಸ್ಥಿತಿ ನಿಜವಾಗಿಯೂ ಶೋಚನೀಯವಾಗಿರುತ್ತದೆ.

ಹೆಣ್ಣು ಮಕ್ಕಳನ್ನು ಸದಾ ಲೈಂಗಿಕ ದೃಷ್ಟಿಯಲ್ಲಿ ನೋಡುವ ಸೂಪರ್‌ವೈಸರ್‌ಗಳ ತಾಳಕ್ಕೆ ಸರಿಯಾಗಿ ಈ ಹೆಣ್ಣು ಮಕ್ಕಳು ತಾಳ ಹಾಕದಿದ್ದರೆ ಅವರ ಕೆಲಸದಲ್ಲಿ ಸದಾ ತಪ್ಪು ಹುಡುಕುವುದು, ಅವರನ್ನು ಮೇಲಧಿಕಾರಿಗಳಿಂದ ಬೈಸುವುದು, ಇಲ್ಲದಿದ್ದರೆ ಕೆಲಸಕ್ಕೆ ಬರಬೇಡವೆನ್ನುವುದು, ಇನ್‌ಕ್ರಿಮೆಂಟ್ ಕೊಡದಿರುವುದು ಇವೆಲ್ಲವುಗಳನ್ನು ಮಾಡುತ್ತಾರೆ. ಈ ಕಿರಾತಕ ಸೂಪರ್‌ವೈಸರ್‌ಗಳು, ಮದುವೆಯಾಗಿರುವ ಹೆಣ್ಣು ಮಕ್ಕಳು ರಜೆ ಕೇಳಿದರಂತು ಇವರ ಮಾತುಗಳು ಹೀಗಿರುತ್ತವೆ- "ಮಕ್ಕಳನ್ನು ಹೆತ್ತುಕೊಂಡು ಮನೆಯಲ್ಲೆ ಇರು, ಕೆಲಸಕ್ಕೆ ಯಾಕೆ ಬರುತ್ತೀಯ?, ಗಂಡ ಮಕ್ಕಳ ಜೊತೆಯಲ್ಲಿ ಮನೆಯಲ್ಲಿ ಆರಾಮವಾಗಿರು'' ಎನ್ನುವ ಅಣಿಮುತ್ತುಗಳು ಇವರ ಬಾಯಿಂದ ಹೊರಬೀಳುತ್ತವೆ. ಇವರ ಬಾಯಲ್ಲಿ ಬಹುವಚನದ ಉಚ್ಛಾರವೇ ಬರುವುದಿಲ್ಲ. ಇಲ್ಲಿಯ ಕೆಲಸದ ಪರಿಸ್ಥಿತಿಯಂತೂ ಹೇಳಲಿಕ್ಕೇ ಅಸಾಧ್ಯ.

ಯಾವುದೇ ಕಂಪನಿಯಲ್ಲಿ 30 ಜನ ಹೆಣ್ಣು ಮಕ್ಕಳಿಗಿಂತ ಹೆಚ್ಚು ಜನರು ಕೆಲಸ ಮಾಡುತ್ತಿದ್ದರೆ ಅಲ್ಲಿ ಕಡ್ಡಾಯವಾಗಿ ಶಿಶುಪಾಲನಾ ಕೇಂದ್ರವಿರಬೇಕೆನ್ನುತ್ತದೆ ಕಾನೂನು. ಆದರೆ ಎಷ್ಟು ಕಾರ್ಖಾನೆಗಳಲ್ಲಿದೆ ಈ ಸೌಲಭ್ಯ. ಕಾರ್ಖಾನೆಗಳ ಕಾನೂನು ಪ್ರಕಾರ ವಾರಕ್ಕೆ ಒಂದು ದಿನ ಕಡ್ಡಾಯವಾಗಿ ರಜೆ ಇರಬೇಕು. 200 ಜನ ಕಾರ್ಮಿಕರಿಗಿಂತ ಹೆಚ್ಚು ಜನ ಕೆಲಸ ಮಾಡುತ್ತಿದ್ದರೆ ಕ್ಯಾಂಟೀನ್ ಇರಬೇಕೆಂದು ಕಾನೂನಿದೆ. ಆದರೆ ಎಷ್ಟು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿದೆ ಈ ಸೌಲಭ್ಯ? ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಸರ್ಕಾರ ನಿಗದಿ ಮಾಡಿರುವ ಕನಿಷ್ಟ ಕೂಲಿ ಎಷ್ಟು ಮಂದಿ ಕಾರ್ಮಿಕರಿಗೆ ಸಿಗುತ್ತಿದೆ, ಪೇಮೆಂಟ್ ಆಫ್ ವೇಜ್ ಆಕ್ಟ್ ಪ್ರಕಾರ ಪ್ರತಿ ತಿಂಗಳು 7 ನೇ ತಾರೀಖಿನಂದು ಸಂಬಳ ನೀಡಬೇಕು ಎನ್ನುತ್ತದೆ ಕಾನೂನು. ಆದರೆ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಎಲ್ಲ ಕಾನೂನುಗಳನ್ನು ಗಾಳಿಗೆ ತೂರಿರುತ್ತಾರೆ ಆ ಮಾಲೀಕರು. ಕೈಗಾರಿಕಾ ವಿವಾದ ಕಾನೂನು ಪ್ರಕಾರ 100 ಜನರಿಗಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರೆ ಅಂತಹ ಕಾರ್ಖಾನೆಗಳನ್ನು ಮುಚ್ಚಲು ಸರಕಾರದ ಅನುಮತಿ ಪಡೆಯಬೇಕು, 100 ಜನರಿಗಿಂತ ಹೆಚ್ಚು ಜನರಿದ್ದರೆ ಲೇ-ಆಫ್ ಘೋಷಿಸಬಾರದು. ಆದರೆ ಎಷ್ಟು ಜನ ಗಾರ್ಮೆಂಟ್ಸ್ ಮಾಲಿಕರು ಸರಕಾರದ ಅನುಮತಿ ಪಡೆಯುತ್ತಾರೆ? ಪ್ರತಿವರ್ಷ ಒಂದಲ್ಲ ಒಂದು ರೀತಿಯಲ್ಲಿ ಲೇ-ಆಫ್ ಕೊಡುವುದು, ಕಂಪನಿ ಮುಚ್ಚುವುದು ಇವರ ವಾಡಿಕೆಯಾಗಿರುತ್ತದೆ.


ಇವೆಲ್ಲವುಗಳನ್ನು ಪ್ರಶ್ನೆ ಮಾಡಬೇಕಾದರೆ ಕಾರ್ಮಿಕರು ಸಂಘಟಿತರಾಗಬೇಕಾಗುತ್ತದೆ. ಆದರೆ ಎಷ್ಟು ಜನ ಕಾರ್ಮಿಕರು ಸಂಘಟಿತರಾಗಲು ಸಾಧ್ಯವಾಗುತ್ತದೆ? ಹಾಗೇನಾದರೂ ವಿಚಾರ ಮಾಡಿ ಕಾರ್ಮಿಕರು ಸಂಘಟಿತರಾದರೆ ಆ ಸಂಘಟನೆಗಳನ್ನು ಮುರಿಯಲು ಮಾಲೀಕರು ಮಾಡುವ ಕುತಂತ್ರಗಳು ಒಂದೇ ಎರಡೇ?

ನ್ಯಾಯಕ್ಕಾಗಿ ಹೋರಾಟ ಮಾಡಲು ಸಂಘಟಿತರಾದರೆ ಶುರುವಾಗುತ್ತದೆ ಮಾಲೀಕರ ಕಿರುಕುಳ ಮತ್ತು ಈ ಮಾಲೀಕರ ಪರ ವಹಿಸುವ ಪೋಲೀಸರಿಂದಲೂ ಶುರುವಾಗುತ್ತದೆ ದಾಳಿ, ದಬ್ಬಾಳಿಕೆ, ದೌರ್ಜನ್ಯ. ನಿಯೋಜಿತ ಗೂಂಡಾಗಳಿಂದ ಹಲ್ಲೆ ನಡೆಸುವುದಲ್ಲದೆ ಅತ್ಯಾಚಾರದ ಬೆದರಿಕೆಯನ್ನು ಎದುರಿಸಬೇಕಾಗುತ್ತದೆ ಈ ಮಹಿಳೆಯರು. ವಿನಾಕಾರಣ ಸುಳ್ಳು ಮೊಕದ್ದಮೆಗಳನ್ನು ಹೂಡಿ ವರ್ಷಗಟ್ಟಲೆ ಕೋರ್ಟಿಗೆ ಅಲೆದಾಡಿಸುತ್ತಾ ಮಹಿಳೆಯರ ಮನೋಸ್ಥೈರ್ಯವನ್ನು ಕುಂದಿಸುವ ನೀಚತನವನ್ನು ಮಾಡುತ್ತಾರೆ ಈ ಮಾಲೀಕರು.

ಹೊಟ್ಟೆ ತುಂಬಿಸಿಕೊಳ್ಳುವುದಕ್ಕೋಸರ ನೀನು ಕೆಲಸ ಮಾಡಲು ಬರುವುದು, ನೀನು ತುಂಬಾ ಬಡತನದಲ್ಲಿದ್ದೀಯಾ ಹೋಗಲಿ ಪಾಪ ಎಂದು ಕೆಲಸಕೊಟ್ಟರೆ ಸಂಘ ಎಂದು ಹೋರಾಟ ಮಾಡುತ್ತೀಯಾ, ಇಲ್ಲಿಂದ ನೀನು ಹೊರಗೆ ಹೋದರೂ ಸಹ ಎಲ್ಲಿಯೂ ನಿನಗೆ ಕೆಲಸ ಸಿಕ್ಕದಂತೆ ಮಾಡುತ್ತೇನೆ, ಆಮೇಲೆ ಉಪವಾಸ ಸಾಯಬೇಕಾಗುತ್ತದೆ" ಎಂದು ಸಹ ಹೆದರಿಸುವ ನೀಚ ಮಾಲೀಕರಿದ್ದಾರೆ.

ಈ ರೀತಿಯ ತೀವ್ರವಾದಂಥ ಕಿರುಕುಳ ಹಾಗೂ ಶೋಷಣೆಗೆ ಒಳಪಟ್ಟಂತ ಮಹಿಳಾ ಕಾರ್ಮಿಕರು ಸಂಘಟಿತರಾಗಲು ಪ್ರಯತ್ನ ಮಾಡುತ್ತಿರುವುದು ನಿಜವಾಗಿಯೂ ಒಂದು ಆಶಾದಾಯಕವಾದ ಸಂಗತಿ. ಆದರೆ ಹೊಸ ಆರ್ಥಿಕ ನೀತಿ ಕೈಗಾರಿಕಾ ನೀತಿಗಳ ಪರಿಣಾಮವಾಗಿ ಹಾಲಿ ಇರುವ ಕಾನೂನುಗಳು ನಿಷ್ಕ್ರಿಯಗೊಳ್ಳುತ್ತಿರುವುದನ್ನು ನಾವು ಗುರುತಿಸಿ ಈ ಕಾನೂನು ಸೌಲಭ್ಯಗಳನ್ನು ಜಾರಿ ಮಾಡಿಸಲು ಸರ್ಕಾರದಿಂದ ಯಾವ ರೀತಿಯ ಭರವಸೆಯನ್ನು ಅಪೇಕ್ಷೆ ಮಾಡಬೇಕು ಈ ಕಾರ್ಮಿಕರು.

ಬೆಂಗಳೂರಿನಲ್ಲಿ ಈವರೆಗೆ ಅನೇಕ ಪ್ರಮುಖ ಹೋರಾಟಗಳು ನಡೆದಿವೆ. ಅವುಗಳಲ್ಲಿ ಮೊದಲಿಗೆ ಸಾಮ್ರಾಟ್ ಅಶೋಕ ಎಕ್ಸ್‌ಪೋರ್ಟ್, ಹೆಚ್.ಜಿ.ಎಸ್. ಅಪರೆಲ್ಸ್, ವರ್ಲ್ಡ್ ಅಪರೆಲ್ಸ್, ಟೆಕ್ಸಾಸ್ ಇಂಡಸ್ಟ್ರೀಸ್, ಸಾಮ್ರಾಟ್ ಅಶೋಕ ಎಕ್ಸ್‌ಪೋರ್ಟ್ ಕಂಪನಿಯ ಹೋರಾಟ ಇಡೀ ಬೆಂಗಳೂರಿನಲ್ಲಿ ಪ್ರಚಾರ ಪಡೆದಿದೆ. ಅಲ್ಲಿಯ ಮಾಲೀಕ ಕಾರ್ಮಿಕರ ಮನೆಗಳಿಗೆ ಗೂಂಡಾಗಳನ್ನು ಕಳುಹಿಸಿ ಅವರ ಗಂಡ, ಅತ್ತೆ ಮಾವನವರಿಗೆಲ್ಲಾ ಹೆದರಿಸಿದ್ದೂ ಉಂಟು, ಮತ್ತೆ ರಸ್ತೆಗಳಲ್ಲಿ ಓಡಾಡುವಾಗ ಆಸಿಡ್ ಹಾಕುವ ಬೆದರಿಕೆ ಇವೆಲ್ಲವುಗಳನ್ನು ಮಾಡಿಸಿದ ಈ ನೀಚ ಮಾಲೀಕ ಇದು ಸಾಲದೆಂಬಂತೆ ಸುಂಕದ ಕಟ್ಟೆಯಲ್ಲಿ ಕೆಲಸ ಮಾಡುವ ಹೆಣ್ಣು ಮಕ್ಕಳನ್ನು ಹೊಡೆಯಲು ಒಂದು ಬಸ್ಸಿನ ತುಂಬ ಗೂಂಡಾಗಳನ್ನು ಕಳುಹಿಸಿದಾಗ ಆ ಕಾರ್ಖಾನೆಯ ಹೆಣ್ಣು ಮಕ್ಕಳು ವೀರಾವೇಶದಿಂದ ಆ ಗೂಂಡಾಗಳಿಗೆ ಕಲ್ಲು ತೆಗೆದುಕೊಂಡು ಹೊಡೆದು ಒಂದು ಮೈಲಿ ದೂರದವರೆಗೂ ಅಟ್ಟಿಸಿಕೊಂಡು ಹೋಗಿ ಕಳಿಸಿದ್ದಾರೆ. ಇದೂ ಸಾಲದೆಂಬಂತೆ ಮೈಸೂರು ರಸ್ತೆಯಲ್ಲಿನ ಕಾರ್ಖಾನೆಯ ಮುಂದೆ ಕಾರ್ಮಿಕರು ನ್ಯಾಯ ಕೇಳಲು ಹೋದಾಗ ಲಾಠಿ ಚಾರ್ಜ್ ಮಾಡಿಸಿ ಹೆಣ್ಣುಮಕ್ಕಳ ಕೈಕಾಲುಗಳನ್ನು ಮುರಿಸಿದರು. ಹೆಚ್.ಜಿ.ಎಸ್. ಕಾರ್ಖಾನೆಯ ಕಾರ್ಮಿಕರು ಸಂಘಟಿತರಾದಾಗಲೂ ಸಹ ಇದೇ ರೀತಿಯ ಹೋರಾಟ ಮಾಡಿದಾಗ ಅಲ್ಲಿಯ ಮಾಲಿಕ ಬಿಜೆಪಿ ಗೂಂಡಾಗಳಿಂದ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರನ್ನು ಕೊಲೆ ಮಾಡಲು ಬಂದಾಗ ಕಾರ್ಮಿಕರು ಕೆಚ್ಚೆದೆಯಿಂದ ಹೋರಾಡಿ ಆ ಗೂಂಡಾಗಳನ್ನು ಸದೆಬಡಿದರು. ವರ್ಲ್ಡ್ ಅಪರೆಲ್ಸ್ ಮಹಿಳಾ ಕಾರ್ಮಿಕರು ಮಡಿವಾಳದ ಪೋಲೀಸ್ ಸ್ಟೇಷನ್‌ನಲ್ಲಿಯು ಮಾಲಿಕರ ಪರವಹಿಸಿದ ಪೋಲೀಸ್ ಅಧಿಕಾರಿಗಳನ್ನು ಹೊಡೆಯುವ ಧೈರ್ಯಮಾಡಿ ಇಡೀ ರಾತ್ರಿಯೆಲ್ಲಾ ಪೋಲೀಸ್ ಸ್ಟೇಷನ್‌ನಲ್ಲಿ ಧರಣಿ ಹೂಡಿದ ಮಹಿಳಾ ಕಾರ್ಮಿಕರಿದ್ದಾರೆ. ಇದೇ ರೀತಿಯ ಹಲವಾರು ಹೋರಾಟಗಳು ನಡೆದಿವೆ. ಹೇಳುತ್ತಾ ಹೋದರೆ ಇದಕ್ಕೆ ಅಂತ್ಯವೇ ಇಲ್ಲವೆನಿಸುತ್ತದೆ. ○



ಕೊಪ್ಪಳದಲ್ಲಿ ಕಾರ್ಮಿಕರ ಬೃಹತ್ ಮೆರವಣಿಗೆ

ಮಾರ್ಚ್ 7. 2000 ದಂದು ಕೊಪ್ಪಳ ನಗರದಲ್ಲಿ ಕಾರ್ಮಿಕರು ತಮ್ಮ ಮೂಲ ಭೂತ ಸಮಸ್ಯೆಗಳ ಇತ್ಯರ್ಥಕ್ಕಾಗಿ ಹಾಗೂ ಕಾರ್ಮಿಕ ಕಾಯ್ದೆಗಳನ್ನು ಜಾರಿಗಾಗಿ ಒತ್ತಾಯಿಸಿ ಜಿಲ್ಲಾ ಮಟ್ಟದ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕ್ರೊಳ್ಳಲಾಗಿತ್ತು. ಈ ಹೋರಾಟಕ್ಕೆ ಪೂರ್ವ ತಯಾರಿಗಾಗಿ ಎಲ್ಲಾ ಕಾರ್ಮಿಕ ಸಂಘಗಳ ಸಭೆಗಳನ್ನು ನಡೆಸಿ ಈ ಹೋರಾಟದ ಮಹತ್ವದ ಬಗ್ಗೆ ತಿಳಿಹೇಳಲಾಗಿತ್ತು. ಕೊಪ್ಪಳದಲ್ಲಿ ತಾಲೂಕು ಪಂಚಾಯತ್ ಕಾರ್ಯಾಲಯದಿಂದ ಪ್ರತಿಭಟನೆ ಮೆರವಣಿಗೆ ಪ್ರಾರಂಭವಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಸುಮಾರು 7 ಕಿ.ಮಿ. ದೂರದ ಮೆರವಣಿಗೆಯನ್ನು ಮಾಡಲಾಯಿತು. ದಾರಿಯುದ್ದಕ್ಕೂ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಘೋಷಣೆ ಹಾಗೂ ಮಾಲಿಕರ ದೌರ್ಜನ್ಯ, ಅಧಿಕಾರಿಗಳ ಭ್ರಷ್ಟತೆಯ ವಿರುದ್ಧ ಘೋಷಣೆಗಳನ್ನು ಹಾಕಲಾಯಿತು. ದಾರಿಯುದ್ದಕ್ಕೂ ಹತ್ತು ಸಾವಿರ ಕರಪತ್ರಗಳನ್ನು ಹಂಚಲಾಯಿತು. ಕೆಂಪು ಸಮವಸ್ತ್ರದ ಉಡುಪು ಕೊಪ್ಪಳ ನಗರದಲ್ಲಿ ಎದ್ದು ಕಾಣುತ್ತಿತ್ತು. ನಾಲ್ಕು ತಾಲೂಕಿನಿಂದ ಗ್ರಾಮ ... ನೌಕರರು 500 ಜನ ಭಾಗವಹಿಸಿದು

ಗಂಗಾವತಿ ತಾಲೂಕಿನಿಂದ ರೈಸ್ ಮಿಲ್ ಬಜಾರ ಹಮಾಲರು, ಎಫ್.ಸಿ.ಐ ಹಮಾಲರು, ವೇರ ಹೌಸ್, ಖಾಲಿಚೀಲ ರಿಪೇರಿ ಮಾಡುವ ಕಾರ್ಮಿಕರು, ಟ್ರಾನ್ಸ್‌ಪೋರ್ಟ್ ಹಮಾಲರು, ವಿ.ಆರ್.ಎಲ್. ಹಮಾಲರು, ನಗರಸಭೆ ದಿನಗೂಲಿ ನೌಕರರು ಮುಂತಾದ ಸುಮಾರು 1,000ಕ್ಕಿಂತ ಅಧಿಕ ಜನ ಪಾಲ್ಗೊಂಡಿದ್ದರು. ಅದರಂತೆ ಕೊಪ್ಪಳದಿಂದ ಕಟ್ಟಿಗೆ ಹಮಾಲರು, ಮಂಡಾಳ ಬಟ್ಟಿ ಕಾರ್ಮಿಕರು, ಪೆಟ್ಲಿಂಗ್ ಕಾರ್ಮಿಕರು, ಸಾಮಿಲ್ ಕಾರ್ಮಿಕರು ಭಾಗವಹಿಸಿದ್ದರು. ಈ ಹೋರಾಟದಲ್ಲಿ 2000 ಕ್ಕಿಂತ ಅಧಿಕ ಜನ ಭಾಗವಹಿಸಿದ್ದು ಕಾರ್ಯಕ್ರಮದ ಯಶಸ್ವಿಗೆ ಕಾರಣರಾಗಿದ್ದಾರೆ.

ಈ ಕಾರ್ಯಕ್ರಮವನ್ನು ಉದ್ದೇಶಿಸಿ, ಸಿ.ಐ.ಟಿಯುನ ರಾಜ್ಯ ಸಮಿತಿ ಸದಸ್ಯರಾದ ಕಾಂ। ವೆಂಕಟರಮಣ ಅವರು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಕಾರ್ಯಾಲಯದ ಮುಂದೆ ಮಾತನಾಡಿದರು. ಅವರು ಎಲ್ಲಾ ಕಾರ್ಮಿಕರು ಒಗ್ಗಟ್ಟಿನಿಂದ ಹೆಚ್ಚು ಹೋರಾಟ ಮಾಡಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮಾತ್ರ ಸಾಧ್ಯ ಎಂದರು. ಈ ದಿಶೆಯಲ್ಲಿ ಕಾರ್ಮಿಕರು ಕಾರ್ಯಪ್ರವೃತ್ತರಾಗಬೇಕೆಂದು ಕರೆನೀಡಿದರು.

ಜಿಲ್ಲಾ ಅಧಿಕಾರಿಗಳ ಕಾರ್ಯಾಲಯದ ಎದುರು ಕಾಂ। ಎಸ್. ಪ್ರಸನ್ನಕುಮಾರ ಸಿ.ಐ.ಟಿಯು ರಾಜ್ಯ ಕಾರ್ಯದರ್ಶಿ ಇವರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಮಿಕರಿಗೆ ಹಲವಾರು ಕಾನೂನುಗಳಿದ್ದು ಅವುಗಳ ಜಾರಿಗಾಗಿ ಅಧಿಕಾರಿಗಳು ಕೂಡಾ ಇರುವರು. ಆದರೆ ಅಧಿಕಾರಿಗಳು ಬೋನಸ್, ವೇತನ, ಚೀಟಿ ಹಾಜರಿ ಪುಸ್ತಕ, ಭವಿಷ್ಯ ನಿಧಿ, ಮುಂತಾದ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸಿಲ್ಲ. ಮತ್ತು ಅವುಗಳ ಜಾರಿಗಾಗಿ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡದಿರುವದನ್ನು ಖಂಡಿಸಿದರು. ಇದೇ ಪ್ರವೃತ್ತಿಯನ್ನು ಮುಂದುವರೆಸಿದರೆ ಇಂತಹ ಅಧಿಕಾರಿಗಳ ವಿರುದ್ಧ ಹೋರಾಟ ಮಾಡಲು ಕಾರ್ಮಿಕರಿಗೆ ಮನವಿ ಮಾಡಿದರು. ನಮ್ಮ ಬೇಡಿಕೆಗಳ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆದಾಗ ಅವರು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ, ಹಾಗೂ ಸಂಘದ ಮುಖಂಡರ ಸಭೆಯನ್ನು ದಿನಾಂಕ 29-3-2000 ರಂದು ಕರೆಯಲು ಒಪ್ಪಿಕೊಂಡರು. ಆನಂತರ ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ಮೆರವಣಿಗೆಯಲ್ಲಿ ಹೋಗಲಾಯಿತು. ಅಲ್ಲಿ ವಿಶೇಷವಾಗಿ ಗ್ರಾ.ಪಂ. ನೌಕರರ ಸಮಸ್ಯೆಗಳ ಬಗ್ಗೆ ಅವರಿಗೆ 29-6-99 ರಂದು ಕನಿಷ್ಠ ವೇತನ ಜಾರಿಗಾಗಿ ಆದೇಶ ವಿದ್ದರೂ ಅದನ್ನು ಇಲ್ಲಿಯವರೆಗೂ ಜಾರಿ ಮಾಡದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯವನ್ನು ಎಂ.ಬಿ. ನಾಡಗೌಡ ಮಾಡಿದರೂ, ಗ್ರಾಮ ಪಂಚಾಯತ್ ನೌಕರರಿಗೆ ಕನಿಷ್ಠ ಸೌಲಭ್ಯವನ್ನು ಒದಗಿಸಿಕೊಡದಿದ್ದರೆ ಉಗ್ರಹೋರಾಟವನ್ನು ಹಮ್ಮಿಕ್ರೊಳ್ಳಲಾಗುವದು ಎಂದು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಲಾಯಿತು. ನಂತರ ಮನವಿಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಯವರಿಗೆ ನೀಡಿದರು. ಮುಖ್ಯಕಾರ್ಯದರ್ಶಿಯವರು ಒಂದು ತಿಂಗಳ ಒಳಗೆಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದರು. 15.3.2000 ರಂದು ಎಲ್ಲಾ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ಸಂಘದ ಪದಾಧಿಕಾರಿಗಳ ಸಭೆಯನ್ನು ಕರೆಯಲು ಒಪ್ಪಿಕೊಂಡ ನಂತರ ಸಭೆ ಮುಕ್ತಾಯ ಮಾಡಲಾಯಿತು.

ಈ ಮೆರವಣಿಗೆಯ ನೇತೃತ್ವವನ್ನು ಸಿಐಟಿಯು ಜಿಲ್ಲಾ ಸಹ ಸಂಚಾಲಕರಾದ ಎಂ.ಬಿ.ನಾಡಗೌಡ, ಖಾಸಿಂಸಾಬ ಸರ್ದಾರ, ಸಿಐಟಿಯು ನ ಜಿಲ್ಲಾ ಸಮಿತಿ ಸದಸ್ಯರು, ರಾಮಣ್ಣ, ಎಸ್.ಎಸ್.ಹುಲಗಪ್ಪ, ಮಾಮುಸಾಬ, ಚಂದುಸಾಬ, ಈಶಪ್ಪ, ರವೀಂದ್ರ, ಗಿರೀಶ ಮುಂತಾದವರು ವಹಿಸಿಕೊಂಡಿದ್ದರು.

ವರದಿ: ಎಂ.ಬಿ.ನಾಡಗೌಡ

ಕಥೆ

ಹತ್ಯೆ

ಫಕೀರ್ ಮಹಮದ್ ಕಟ್ಪಾಡಿ

ನೆರೆಹೊರೆಯ ಹಿಂದುಗಳ ಮನೆಯ ಸುತ್ತ ಬೆಳಕಿನ ಸಾಲನ್ನು ಇಡುವ ಹಬ್ಬ ಬಂದಿದೆ. ಮಕ್ಕಳೆಲ್ಲ ಪಟಾಕಿಗಳನ್ನು ಡಂ..... ಡಂ... ಢ್ರಂ ಢ್ರಂ ಅಂತ ಬಿಟ್ಟು ನಲಿಯುತ್ತಾರೆ. ಬಣ್ಣ ಬಣ್ಣದ ದುರುಸು ಬಾಣಗಳನ್ನು ಬಿಟ್ಟು ಕೇಕೆ ಹಾಕುತ್ತಾರೆ. ನಮ್ಮ ಪೆರ್ನಾಲೂ ಇವತ್ತೇ ಆಗುತ್ತಿದ್ದರೆ ಎಷ್ಟು ಚೆನ್ನಾಗಿತ್ತು. "ಉಮ್ಮ ನಂಗೆ ಒಂದು ಸುರುಸುರು ಕಡ್ಡಿ ಬೇಕು" ಎಂದು ಪಾತುಮ್ಮ ಅಮ್ಮನಿಗೆ ದುಂಬಾಲು ಬಿದ್ದಳು. ಅಮ್ಮ ಏನೋ ಪರಿಮಳದ ತಿಂಡಿ ಮಾಡುತ್ತಿದ್ದಾಳೆ. ಆಹಾ... ಏನು ಪರಿಮಳ; "ಈಗ ನಾನೆಲ್ಲಿಂದ ತರ್ಲಿ ನಿಂಗೆ...? ನಿಮ್ಮ ಬಾಪನಿಗೆ ಹೇಳು ತಂದು ಕೊಡ್ಲಿಕ್ಕೆ. ಜ್ವರ ಬಿಟ್ಟರೆ ನಾಳೆ ಪೇಟೆಯಿಂದ ಬರುವಾಗ ತಂದಾರು" ಎಂದಳು. ಬಾಪ ಜ್ವರ ಬಂದದ್ದರಿಂದ ಒಳಗೆ ಮಲಗಿ ನಿದ್ದೆ ಮಾಡುತ್ತಿದ್ದರು. ಪಾತುಮ್ಮನ ಗಮನ ಈಗ ಪೂರ್ತಿ ಅಮ್ಮ ಮಾಡುವ ತಿಂಡಿಯ ಮೇಲೆ. ಅದೇ ಜಾನಕಿಯ ಮನೆಯಲ್ಲಿ ಇಂದು ಮಾಡುವ ಅರಸಿನದೆಲೆಯ ಸಿಹಿಸಿಹಿ ಕಡುಬು. ಹಿಂದೊಮ್ಮೆ ಜಾನಕಿ ತನ್ನನ್ನು ಕರೆದುಕೊಟ್ಟ ಕಡುಬಿನ ಸಿಹಿ ನೆನಪಾಯಿತು. ಕಡುಬಿನೊಳಗೆ ಬೆಲ್ಲದಲ್ಲಿ ನೆನೆದ ಎಳ್ಳು ಕಾಯಿತುರಿ; "ಉಮ್ಮ ನಂಗೆ ಬಿಸಿ ಬಿಸಿ ಕಡುಬು ಕೊಡು..." ಎಂದು ಪಾತುಮ್ಮ ಕುಣಿದಾಡಿದಳು. ಪಾತುಮ್ಮನ ಕೂಗು ಕೇಳಿ ಗೆರಟೆಯಲ್ಲಿ ಅನ್ನ ತಪ್ಪಲೆ ಆಟ ಆಡುತ್ತಿದ್ದ ಕರೀಮು ಓಡಿ ಬಂದ. ಉಮ್ಮ ಸಿಹಿ ಕಡುಬು ಪಾತುಮ್ಮನಿಗೆ ಕೊಡುತ್ತಾಳೋ ಇಲ್ಲವೋ ಎಂದು ನೋಡುತ್ತ ನಿಂತ. ಕೊಟ್ಟರೆ ತನಗೂ ಕೊಡುತ್ತಾಳೆನ್ನುವುದು ಖಾತ್ರಿ.

"ನಿಲ್ಲು ಸ್ವಲ್ಪ 'ಸಬುರ್' ಮಾಡ್ಕೊ... ಕಡುಬು ಬೇಯಲಿ. ಹಾಗೆಲ್ಲ ತಿನ್ಲಿಕ್ಕೆ ನಿಂಗೆ ಅಂತ ಮಾಡಿದ್ದಲ್ಲ. ಇಂದು ದನಗಳ ಹಬ್ಬ. ಈ ಮೂಲಕ ಜಾತಿಯ ಪ್ರಾಣಿಗಳ ಹಬ್ಬಕ್ಕೆ ಅವುಗಳಿಗೊಂದೆರಡು ಕಡುಬಾದ್ರೂ ಮಾಡಿ ತಿನ್ಸೋಣಾಂತ ಮಾಡಿದ್ದೇನೆ...." ಎಂದಳು ಅಮ್ಮ. "ನಮ್ಮ ದನಕ್ಕೆ ಹಾಕ್ಲಿಕ್ಕಾ ಈ ಕಡುಬು? ನಮ್ಗಿಲ್ವಾ?" ಎಂದ ಕರೀಮು ನಿರಾಸೆಯಿಂದ "ನಿಲ್ಲು ಮೋನೆ... ಬೇಯಲಿ. ನಿಮಗೂ ಕೊಡುತ್ತೇನೆ. ಈಗ ನೀವೆಲ್ಲ ಕೈ ತೊಳ್ದು ಬನ್ನಿ. ನಾನು ನಮಾಜು ಮಾಡಿ ಬರ್ತೇನೆ" ಎಂದು ಉಮ್ಮ ಹೇಳಿದಾಗಲೇ ಪಾತುಮ್ಮನಿಗೂ ಕರೀಮನಿಗೂ ಸಮಾಧಾನ ಬಂದದ್ದು. ಉಮ್ಮ ಒಲೆಯ ಮೇಲೆ ಕಡುಬು ಬೇಯಲಿಕ್ಕಿಟ್ಟು ನಮಾಜಿಗೆಂದು ಕೈ ಕಾಲು ತೊಳೆದು ಬರಲು ಹೋದಳು.

ಪಾತುಮ್ಮನೊಂದಿಗೆ ಕರೀಮ ಹೇಳಿದ "ಇಂದು ದನಗಳ ಹಬ್ಬವಾ...?" ಪಾತುಮ್ಮ ಕರೀಮನಿಗಿಂತ ದೊಡ್ಡವಳು. ಕಳೆದ ವರ್ಷ ಜಾನಕಿಯ ಮನೆಯಲ್ಲಿ ಗೋಪೂಜೆ ಮಾಡುವುದನ್ನು ಕಂಡವಳು. "ದನವನ್ನು ಚೆನ್ನಾಗಿ ಮೀಯಿಸಿ ಅದಕ್ಕೆ ಉರುಟುರುಟು ಬಣ್ಣದ ಗುರುತು ಹಾಕ್ತಾರೆ. ಅದರ ಕುತ್ತಿಗೆಗೆ ಹೂಮಾಲೆ ಹಾಕುತ್ತಾರೆ. ನಮಸ್ಕಾರ ಮಾಡುತ್ತಾರೆ. ಮತ್ತೆ ಮೇಯಲಿಕ್ಕೆ ಬಿಡುತ್ತಾರೆ" ಎಂದಳು. "ನಾವು ಕೂಡ ಹಾಗೆಯೇ ಮಾಡುವನಾ?" ಎಂದ ಕರೀಮು. "ನಾಳೆ ಹಾಗೆಯೇ ಮಾಡುವ, ಬಾಪನೊಂದಿಗೆ ಹೇಳುವ" ಎಂದು ಪಾತುಮ್ಮ ಅಪ್ಪ ಮಲಗಿರುವ ಕೋಣೆಗೆ ಹೋದಳು. ಅಲ್ಲಿ ಅಪ್ಪ ನಿದ್ರಿಸುತ್ತಿದ್ದ. ಜ್ವರದಿಂದ ಆಗಾಗ ನರಳುತ್ತಿದ್ದ. 'ಬಾಪಾ' ಅಂತ ಕರೆಯಲು ಬಾಯಿ ತೆರೆದ ಪಾತುಮ್ಮ ಸುಮ್ಮನಾದ್ಲು. ಕರೀಮನನ್ನು ಕರೆದಕೊಂಡು.

'ನಮ್ಮ ದನವನ್ನು ಮೀಯಿಸಿ ಅದಕ್ಕೆ ಹೂಮಾಲೆ ಹಾಕಿ ಚಂದ ಮಾಡುವ ಬಾ" ಎಂದಳು ಪಾತುಮ್ಮ. "ಮೊದ್ಲು ಅದಕ್ಕೆ ಹೂಮಾಲೆ ಮಾಡೋಣ" ಎಂದ ಕರೀಮ. ಅದು ಸರಿ ಎಂದುಕೊಂಡ ಪಾತುಮ್ಮ ಮೇಸ್ಟ್ರ ಮನೆಗೆ ದುಡು ದುಡು ಓಡಿದ್ಲು. ಕರೀಮ ತನ್ನ ಪುಟ್ಟ ಪಾದಗಳಿಂದ ಅವಳಷ್ಟು ವೇಗವಾಗಿ ಓಡಲಾರ. "ನಿಲ್ಲು ಪಾತ್ಮ ನಾನೂ ಬರ್ತೇನೆ" ಎಂದು ಕೂಗುತ್ತಾ ಅವಳ ಬೆನ್ನು ಹಿಡಿದ.

ಮೇಸ್ಟರ ಹೆಂಡತಿ ದೇವರ ಪೂಜೆಗೆ ಅಂಗಳದ ಗಿಡಗಳಿಂದ ಹೂಗಳನ್ನು ಕೊಯ್ಯುತ್ತಿದ್ದರು. "ಏನು ಮಕ್ಳೇ...?" ಅಂತ ಕೇಳಿದರು. "ನಾನು ಸ್ವಲ್ಪ ಹೂ ಕೊಯ್ಕಲಾ...?" ಅಂತ ಪಾತುಮ್ಮ ಕೇಳಿದ್ದಕ್ಕೆ ಮೇಸ್ಟರ ಹೆಂಡತಿ, "ಯಾಕೆ.... ಮುಸ್ಲಿಮರು ಕೂಡ ದೇವರ ಪೂಜೆಗೆ ಹೂ ಹಾಕ್ತಾರಾ" ಅಂತ ನಕ್ಕರು. ಪಾತುಮ್ಮ "ಅಲ್ಲ ನಮ್ಮ ದನಕ್ಕೆ" ಅಂದಳು. "ಅರೆ.... ನೀವು? ದನದ ಪೂಜೆ....?" ಎಂದು ಮತ್ತೆ ಜೋರಾಗಿ ನಕ್ಕರು. ಪಾತುಮ್ಮನಿಗೆ ಕಸಿವಿಸಿಯಾಯಿತು. 'ಪೂಜೆಗಲ್ಲ, ದನಕ್ಕೆ ಹೂಮಾಲೆ ಹಾಕ್ಲಿಕ್ಕೆ...." ಎಂದು ಅವರು ಹೂ ಕೊಯ್ಯಲಿಕ್ಕೆ ಅನುಮತಿ ನೀಡುವುದನ್ನು ಕಾಯುತ್ತ ನಿಂತಳು. ಮೇಸ್ಟರು ಹೊರಬಂದೊಡನೆ ಅವರ ಹೆಂಡತಿಯೇನೋ ಹೇಳಿದರು. ಇಬ್ಬರೂ ನಗತೊಡಗಿದರು. ಅವರ ಮಗಳು ಜಾನಕಿ, "ಯಾಕೆ ಪಾತುಮ್ಮ ಹೂ?" ಎನ್ನುತ್ತಾ ಬಂದವಳೊಂದಿಗೆ ಪಾತುಮ್ಮ ಹೇಳಿದಳು. 'ನಮ್ಮ ದನಕ್ಕೆ ಹಾಕ್ಲಿಕ್ಕೆ. ಹೂಮಾಲೆ ಮಾಡ್ಲಿಕ್ಕೆ" ಜಾನಕಿ ಅವರನ್ನು ಕರೆದು ದಾಸವಾಳ, ಕರವೀರ ಹೂಗಳನ್ನು ಕೊಯ್ದು ಕೊಟ್ಟಳು. ಒಂದಷ್ಟು ಹೂಗಳನ್ನು ಕರೀಮನೂ ಕೊಯ್ದುಕೊಂಡ.

ಅಲ್ಲೇ ಮರದಡಿ ಕೂತು ಬಾಳೆ ದಿಂಡಿನ ನಾರಿನಿಂದ ಹೂ ನೇಯ್ದು ಮಾಲೆ ಮಾಡತೊಡಗಿದರು. "ನಮ್ಮ ಮನೆಯಲ್ಲಿ ದನ ಇಲ್ಲ" ಎಂದು ಜಾನಕಿ, ಬೇಸರದಿಂದ ನುಡಿದಾಗ ಪಾತುಮ್ಮ ಹೇಳಿದಳು, "ನೀನು ನಮ್ಮನೆಗೆ ಬಾ, ದನವನ್ನು ಚಂದ ಮಾಡೋಣ."

ಹೂವಿನ ಮಾಲೆ ಹಿಡಿದುಕೊಂಡು ಪಾತುಮ್ಮ ಮತ್ತು ಕರೀಮ ಠೀವಿಯಿಂದ ಮನೆ ಕಡೆ ಹೊರಟರು. ಕರೀಮನಿಗೆ ಅದಾವುದೋ ಪದ ನೆನಪಾಗಿ ಹಾಡಿದ. ಕರೀಮ ತಪ್ಪಿದ ಸಾಲನ್ನು ಪಾತುಮ್ಮ ತಿದ್ದಿ ಜತೆಗೂಡಿ ಹಾಡುತ್ತ ಸಾಗಿದರು.

ಒಂದು ಒಂದು ಎರಡು
ತಂಬಿಗೆ ಹಿಡಿದು ಹೊರಡು
ಎರಡು ಎರಡು ನಾಲ್ಕು
ದನವ ಕಟ್ಟಿ ಹಾಕು
ನಾಲ್ಕು ಎರಡು ಆರು
ಹಾಲು ಕರೆಯಲು ಕೂರು
ಆರು ಎರಡು ಎಂಟು
ತಂಬಿಗೆ ತುಂಬಿದ್ದುಂಟು
ಎಂಟು ಎರಡು ಹತ್ತು
ಹಾಲು ಸಿಹಿ ಸಹಿ ಇತ್ತು.

"ಹಾಲು ಸಿಹಿ.... ಸಿಹಿ ಅಲ್ವಾ?" ಎಂದು ಕರೀಮ ಪಾತುಮ್ಮನನ್ನು ಕೇಳಿದ. "ಹೌದು. ಈ ನಮ್ಮದನ ಹಿದೊಮ್ಮೆ ಕರು ಹಾಕಿದಾಗ ಹಾಲು ಕೊಟ್ಟಿತ್ತು. ಅಮ್ಮ ಹಾಲನ್ನು ಮೇಸ್ಟರ ಮನೆಗೆ, ಬಬ್ಬಾರ್ ಕಾಕಾನ ಮನೆಗೆ, ಹೋಟ್ಲಿನವ್ರಿಗೆ ಕೊಡುತ್ತಿದ್ಲು. ಆಗ ನಂಗೂ ಒಮ್ಮೊಮ್ಮೆ ಉಳಿದ ಹಾಲು ಕುಡೀಲಿಕ್ಕೆ ಕೊಡ್ತಿದ್ಲು. ಸಿಹಿ ಸಿಹಿ ಹಾಲು.." ಎಂದಳು ಪಾತುಮ್ಮ "ಉಮ್ಮ ನಂಗೆ ಕೊಟ್ಟೇ ಇಲ್ಲ...." ಎಂದು ಕರೀಮ ಬೇಸರದ ದನಿಯಲ್ಲಿ ಅಂದಾಗ ಪಾತುಮ್ಮ ಸಮಾಧಾನ ಪಡಿಸಿದಳು. "ಈ ಸಲ ದನ ಕರು ಹಾಕಿದ ಕೂಡ್ಲೇ ನಿಂಗೆ ಹಾಲು ಕೊಡುತ್ತಾಳೆ ಉಮ್ಮ..."

ಉಮ್ಮ ಆಗ್ಲೇ ಎರಡು ಕೊಡ ನೀರು ಬಾವಿಯಿಂದ ಸೇದಿ ತಂದಿಟ್ಟು ತೆಂಗಿನ ಮರಕ್ಕೆ ದನವನ್ನು ಕಟ್ಟಿಹಾಕುತ್ತಿದ್ದಳು. ಪಾತುಮ್ಮ ತನ್ನ ಕೈಯಲ್ಲಿನ ಹೂವಿನ ಮಾಲೆಯನ್ನು ಕರೀಮನ ಕೈಗೆ ಕೊಟ್ಟು "ಉಮ್ಮ... ನಾನು ದನವನ್ನು ಮೀಯಿಸ್ಲಾ?" ಎಂದಳು. "ಸರಿ ನಿನ್ನ ಲಂಗವನ್ನು ಎತ್ತಿ ಕಟ್ಕೋ" ಎಂದು ಉಮ್ಮ ತಂಬಿಗೆಯನ್ನು ಕೊಟ್ಟಳು. ಪಾತುಮ್ಮ ನೀರನ್ನು ತಂಬಿಗೆಯಲ್ಲಿ ಎತ್ತಿ ಕೊಡುವುದು, ಉಮ್ಮ ನೀರನ್ನು ಬೆನ್ನ ಮೇಲೆ ಸುರಿದು ಬಾಳೆ ಎಲೆಯನ್ನು ಮುದ್ದೆ ಮಾಡಿ ಹಿಡಿದು ದನದ ಮೈ ಉಜ್ಜುವುದು. ಮಾಡುತ್ತಿದ್ದರು. ಕರೀಮ ದೂರ ನಿಂತು ನೋಡುತ್ತಿದ್ದ. ತಾನು ಅವರ ಜೊತೆ ಸೇರಬೇಕೆನ್ನೋ ಆಸೆ, ಹತ್ತಿರ ಹೋಗಲು ಭಯ. ದನ ಕಾಲಿನಿಂದ ತುಳಿದರೆ...! ಚೂಪಾದ ಕೊಂಬಿನಿಂದ ಇರಿದರೆ!

ಬಾಪಾ ಕೆಮ್ಮುತ್ತಾ ಹೊರಗೆ ಬಂದರು. ಕರೀಮ ಹೂವಿನ ಮಾಲೆಯನ್ನು ಬಾಪಾನಿಗೆ ಉತ್ಸಾಹದಿಂದ ತೋರಿಸಿದ. ದನವನ್ನು ಸಿಂಗರಿಸುವುದರ ಬಗ್ಗೆ ಉತ್ಸಾಹದಿಂದ ವಿವರಿಸಿದ. ಬಾಪಾ ನಕ್ಕು "ಬಹಳ ಚಂದವಿದೆ..." ಎಂದವರು "ನೋಡೇ... ಗಬ್ಬದ ಹಸು, ಮೈ ತಿಕ್ಕುವಾಗ ಸ್ವಲ್ಪ ಜಾಗ್ರತೆ..." ಉಮ್ಮನತ್ತ ನೋಡುತ್ತಾ ಹೇಳಿದರು. ಉಮ್ಮನಕ್ಕು "ಗಂಡಸರಿಗಿಂತ ಹೆಂಗಸರಿಗೆ ಆ ಬಗ್ಗೆ ಗೊತ್ತು. ಅದ್ನೆಲ್ಲಾ ನಂಗೆ ಹೇಳ್ಬೇಡಿ..." ಎಂದಳು. "ಜ್ವರ ಬಿಟ್ಟಿದೇಂತ ನೀರಿಗೆ ಕೈ ಹಾಕಬೇಡಿ" ಅಂತ ಎಚ್ಚರಿಸಿದಳು. ಬಾಪಾ ಕರೀಮನೊಂದಿಗೆ "ದನಕ್ಕೆ ಬಣ್ಣದ ಚುಕ್ಕೆ ಹಾಕುವುದು ಬೇಡವಾ?" ಎಂದು ಕೇಳಿದರು. "ಹಾಂ...ಹೌದು ಹಾಕ್ಬೇಕು" ಎಂದು ಕರೀಮ ಉತ್ಸಾಹದಿಂದ ಹೇಳಿದ.

ಬಾಪಾ ಮನೆಯ ಹಿಂದೆ ಇದ್ದ ಹಳದಿಬಣ್ಣದ ಜೇಡಿಮಣ್ಣಿನ ತುಂಡೊಂದನ್ನು ತಂದು ನೀರಿನಲ್ಲಿ ಕಲೆಸತೊಡಗಿದರು. ಕರೀಮ ಬಾಪಾ ಮಾಡುತ್ತಿರುವುದನ್ನು ಆಸ್ಥೆಯಿಂದ ನೋಡತೊಡಗಿದ.

ಎಲ್ಲಿಂದಲೋ ಓಡುತ್ತಾ ಜಾನಕಿ ಪಾತುಮ್ಮನ ಬಳಿ ಬಂದಳು. ಲಲಿತನ ಮನೆಯಲ್ಲೂ ಮತ್ತು ಜಯಶ್ರೀ ಮನೆಯಲ್ಲೂ ಗೋಪೂಜೆ ಮಾಡಿದ್ದಾರೆ. ನಂಗಲ್ಲಿ ಒಳ್ಳೆದಾಗ್ಲಿಲ್ಲ. ನಿಮ್ಮಲ್ಲಿಗೆ ಬಂದೆ" ಎಂದಳು ಏದುಸಿರು ಬಿಡುತ್ತಾ. ದನವನ್ನು ಮೀಯಿಸಿ ಆಯಿತು.

ಉಮ್ಮ ದನವನ್ನು ಇನ್ನೊಂದು ಮರಕ್ಕೆ ಕಟ್ಟಿ ಒಳಗೆ ಹೋದಳು. ಬಾಪಾ ಮತ್ತು ಕರೀಮ, ಜೇಡಿಮಣ್ಣನ್ನು ನೀರಲ್ಲಿ ಕರಗಿಸಿ ಅಗಲ ಬಾಯಿಯ ಪಾತ್ರೆಗೆ ಹಾಕಿದ್ದರು. ಅಪ್ಪ ಉರುಟು ಬಾಯಿಯ ಗರಟೆಯನ್ನು ಹುಡುಕಿ ತಂದ.

ಪಾತುಮ್ಮ ಮತ್ತು ಕರೀಮ ದನದ ಕುತ್ತಿಗೆಗೆ ಹೂಮಾಲೆ ಹಾಕುವುದನ್ನು ನೋಡುತ್ತಾ ಜಾನಕಿ ಹೇಳಿದ್ಲು: "ನೀವು ಯಾಕೆ ಗೋಪೂಜೆ ಮಾಡುವುದು, ನೀವು ಮುಸಲ್ಮಾನರಲ್ವಾ? ಪಾತುಮ್ಮ ಕ್ಷಣ ಕಸಿವಿಸಿಗೊಂಡು ಗೆಳತಿಗೆ ಹೇಳಿದಳು "ಅಮ್ಮ ಹೇಳಿದ್ಲು. ದನಗಳ ಹಬ್ಬಕ್ಕೆ ಅವುಗಳಿಗೆ ಕಡುಬು ತಿನ್ನಿಸುವಾ ಅಂತ. ಅದರ ಹಬ್ಬ ಅಲ್ವಾ ಅಂತ ಚಂದ ಮಾಡುವಾಂತ... ಅಷ್ಟೇ. ಪೂಜೆಗೀಜೆ ಯೇನಿಲ್ಲಾಪ್ಪ" ಅಂದ್ಲು ದೊಡ್ಡ ಹೆಂಗಸಿನಂತೆ ರಾಗವಾಗಿ.

ಜಾನಕಿ ಏನೋ ಯೋಚಿಸುತ್ತಾ ಹೇಳಿದಳು. "ನಮ್ಮಪ್ಪ ಹೇಳಿದ್ರು ನೀವು ದನ ತಿನ್ನುವವ್ರು... ಎಂಥಾ ಗೋಪೂಜೆ ಮಾಡೂದು ಅಂತ. ಅದಕ್ಕೆ ನೀವು ಪೂಜೆ ಮಾಡೂದಿಲ್ಲಾಂತ ಕಾಣ್ತದೆ ಅಲ್ವಾ?" ಜಾನಕಿಯ ಮುಗ್ಧ ಪ್ರಶ್ನೆಗೆ ಪಾತುಮ್ಮನಿಗೆ ಏನೂ ಉತ್ತರಿಸಲಾಗಲಿಲ್ಲ. ದನದ ಮಾಂಸದ ಅಡುಗೆ ಮನೆಯಲ್ಲಿ ಮಾಡಿದ್ದುಂಟು. ಎಲ್ಲರೂ ತಿಂದದ್ದುಂಟು. ಹಾಗಂದ ಕೂಡಲೇ ನಾವು ಸಾಕಿದ ದನವನ್ನು ಯಾಕೆ ಚಂದ ಮಾಡಬಾರದು? ಪುಟ್ಟ ಪಾತುಮ್ಮಳಿಗೆ ಕಸಿವಿಸಿಯಾಯಿತು. ಕರೀಮನಿಗೆ ಇದೊಂದು ಮಾತು ಮುಖ್ಯ ಅನಿಸಲಿಲ್ಲ. ಅವನು ತನ್ನ ಕೈಯಲ್ಲಿ ಕೊಟ್ಟ ಹೂಮಾಲೆಯನ್ನು ಅಕ್ಕನ ಕೈಗೆ ಕೊಟ್ಟು "ದನಕ್ಕೆ ಹಾಕು..." ಎಂದು ಒತ್ತಾಯಿಸಿದ. ಪಾತುಮ್ಮ ಎಚ್ಚರಾದಳು.

ದನದ ಕುತ್ತಿಗೆಗೆ ದಾಸವಾಳದ ಹೂವಿನ ಮಾಲೆ ಹಾಕಹೋಗುವಾಗ ದನ ತನ್ನ ಕತ್ತು ಚಾಚಿ ತಿನ್ನಲು ಬಾಯಿ ಹಾಕಿತು. "ಅಯ್ಯಮ್ಮಾ... ಇದು ನಿನ್ನ ಚಂಧ ಮಾಡ್ಲಿಕ್ಕೆ. ನಿನ್ನ ಹಬ್ಬ ಅಲ್ವಾ ಇವತ್ತು? ನಿಂಗೆ ತಿನ್ಲಿಕ್ಕೆ ಉಮ್ಮ ಕಡುಬು ಮಾಡಿದ್ದಾಳೆ. ಅದನ್ನು ತಿನ್ನುವಿಯಂತೆ" ಎಂದು ರಮಿಸುತ್ತಾ ಪಾತುಮ್ಮ ದನದ ಕುತ್ತಿಗೆಗೆ ಹೂಹಾರ ಹಾಕಿದ್ಲು ಕರೀಮ ಸಂತೋಷದಿಂದ ತಕತಕನೆ ಕುಣಿದಾಡಿದ.

(ಮುಂದುವರಿಯುವುದು)

ತೂಕಡಿಕೆಯನು ಕಳೆಯದೇಕೆ ಕುಳಿತಿಹೆ ಗೆಳೆಯ

ತೂಕಡಿಕೆಯನು ಕಳೆಯದೇಕೆ ಕುಳಿತಿಹೆ ಗೆಳೆಯ?
ಸಾಕು, ಸುತ್ತಲು ನೋಡು ಕಣ್ದೆರೆದು ನಿಂದು;
ಲೋಕದಲಿ ವಂದೆ ಮಾತರಮೆಂಬುದೊಂದೆ ಮಾ
ತೇ ಕಿವಿಯನೊಡೆಯುತಿರೆ ಉಚ್ಚಳಿಸಿ ಬಂದು.
ಮತ ಜಾಲದಲ್ಲಿ ಸಿಲುಕಿ, ಅತಿ ಜಾತಿಯಲಿ ಕುಲುಕಿ,
ಗತಿಗೆಟ್ಟು ಸರ್ವರಲಿ ನೀನಾದೆ ಹಿಂದು;
ಪತಿತರಿಗೆ ಕೈ ಕೊಟ್ಟು ಭಾರತ ಧ್ವಜ ನೆಟ್ಟು
ಪಥದೋರಿ ಬಂಗಾಲಿ ಹಾಯುತಿರೆ ಮುಂದು.

ನುಗ್ಗು ನುಗ್ಗುತ ಪರರು ನುಗ್ಗುತ್ತೆ ಬರುತಿಹರು;
ಬಗ್ಗಿರದೆ ಬಾಗುವುದೆ ನಿನಗಾದುದಿಂದು?
ಹಗ್ಗವಿಲ್ಲದ ಕಟ್ಟು, ಬೆತ್ತವಿಲ್ಲದ ಪೆಟ್ಟು,
ಒಗ್ಗಿತೇ ಈ ಗತಿಯು ಸವಿವಿಷವ ತಿಂದು?
ಕಿತ್ತು ಬಿಡು ಸಂದೇಹ, ಇತ್ತು ಬಿಡು ಧನದೇಹ,
ಮಾತೃಭೂಮಿಯ ಪದಾರ್ಚನೆಗೆ ಬಲವಂದು.
ಹೊತ್ತ ಕಳೆಯಲು ಬೇಡ, ಭ್ರಾಂತಿಗೊಳದಿರು ಮೂಢ!
ಸತ್ತಿರುವೆ ಏತಕೀ ಜೀವನದೊಳಿಂದು?
ಚಿತ್ತ ವ್ಯಸನಾಕುಲೆಯು ಕುತ್ತಿಗೆಯ ಸಂಕಲೆಯ
ಕತ್ತರಿಸಿ ತನ್ನ ಸೆರೆ ಬಿಡಿಸಬೇಕೆಂದು,

ನೆತ್ತಿಯಲಿ ಬೊಟ್ಟಿಡದೆ, ಬಿರುದು ಬಾವಲಿ ತೊಡದೆ
ಅತ್ತತ್ತು ಹಲಬುತಿರೆ ಭೂಮಾತೆ ನೊಂದು
ಸತ್ತಿತೇ ಸಾಹಸವು? ಬತ್ತಿತೇ ಧೃತಿರಸವು
ಮತ್ತೆ ಮಡಿದಾ ಕರ್ಣನಾ ಬೆನ್ನ ಹಿಂದು
ಎತ್ತ ಪೋದುದು ಪರಶುರಾಮನಾ ತೋಳ್ಬಿರುಸು?
ನೆತ್ತರೊಳಗಿಲ್ಲವೇ ವಿಕ್ರಮದ ಬಿಂದು?
ಕಳವಾದ ಮೇಲ್ನೀನು ಕಳವಳಿಸಿ ಫಲವೇನು?
ಕಳೆದಪುದು ನಿನ್ನ ಸ್ವಾತಂತ್ರ್ಯ ಮಣಿಯೊಂದು.
ಕೆಳಕೋಟೆ ಕೈ ಸೋಕೆ ಕಹಳೆ ಕೂಗುವುದೇಕೆ?
ಕಳಚಿಬಿಡು ಅಧ್ಯಾತ್ಮನಿದ್ರೆ ಮಮ ಬಂಧು.
ಎದ್ದೇಳು, ಎದ್ದೇಳು ನಿದ್ದೆಗಣ್ಣನು ಕೀಳು;
ಹೊದ್ದಿರ್ದ ವೇದಗಂಬಳಿ ಮೂಲೆಗೊಡ್ಡಿದ್ದು
ಎದ್ದು ಬರುತಿಹ ಭಾನು, ಎದ್ದಿತ್ತೆ ಜಪಾನು?
ಬಿದ್ದು ಕೊಂಡಿರುವೇಕೆ ಕತ್ತಲೆಯೊಳಿಂದು?
ತಳರು ಭರತ ಕುಮಾರ, ಕೊಳುಗುಳದಲತಿವೀರ
ಸೆಳೆ ಮಿಂಚಿನಸಿಯ ತೆಗೆ, ರಣಕೆ ಬಳಸಂದು!
ಮಳೆ ರಕುತದಲಿ ಬೀಳೆ, ಬೆಳೆ ಕಲಿಗಳಿಂದೇಳೆ
ಭಳಿರೇ ಭಾರತ ವರ್ಷ ಸೌಭಾಗ್ಯಮಂದು.

ಪಂಜೆ ಮಂಗೇಶರಾಯರು ಕನ್ನಡ ಸಾಹಿತ್ಯದ ನವೋದಯದ ಮುಂಗೋಳಿ 20ನೇ ಶತಮಾನದ ಆರಂಭಕಾಲದ ಕವಿ. ದಕ್ಷಿಣ ಕನ್ನಡ ಜಿಲ್ಲೆಯವರಾದ ಇವರು ಶಾಲಾ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಾ ಸಾಹಿತ್ಯ ಸೃಷ್ಟಿಮಾಡಿದವರು ಭಾರತದ ಸ್ವಾತಂತ್ರ್ಯಕ್ಕಾಗಿ ಮಿಡಿದವರು ಜಾತಿ ಪದ್ಧತಿ, ಅಸ್ಪೃಶ್ಯತೆ ತೊಲಗಬೇಕೆಂದು ಬಯಸಿದವರು. ಇಂದಿಗೂ ನೆನಪಿನಲ್ಲುಳಿದ ಮಕ್ಕಳ ಹಾಡುಗಳನ್ನು ಬರೆದವರು.

ಈ ಕವನ

"ಹಗ್ಗವಿಲ್ಲದ ಕಟ್ಟು ಬೆತ್ತವಿಲ್ಲದ ಪೆಟ್ಟು ಒಗ್ಗಿತೇ ಈ ಗತಿಯು ಸವಿವಿಷವತಿಂದು" ಎಂಬ ಮಾತುಗಳು ಇಂದು ಇನ್ನೂ ಹೆಚ್ಚು ಅರ್ಥಪೂರ್ಣವಾಗಿವೆ.

ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮ ಇನ್ನೂ ಆಗತಾನೇ ಮೊಳೆಯುತ್ತಿದ್ದಕಾಲದಲ್ಲಿ ಬರೆದ ಕವನ ಇದು.

ಭಾರತದ ಬದುಕೆಲ್ಲಾ ಮತ್ತೆ ಸಾಮ್ರಾಜ್ಯಶಾಹಿಗಳ ಆಕ್ರಮಣಕ್ಕೆ ತುತ್ತಾಗುತ್ತಿರುವ ಈ ದಿನಗಳಲ್ಲಿ "ನುಗ್ಗು ನುಗ್ಗುತ ಪರರು ನುಗ್ಗುತ ಬರುತಿಹರು ಬಗ್ಗಿರದೆ ಬಾಗುವುದೆ ನಿನಗಾದುದಿಂದು?" "ಕಳವಾದ ಮೇಲ್ನೀನು ಕಳವಳಿಸಿ ಫಲವೇನು? ಕಳೆದಪುದು ನಿನ್ನ ಸ್ವಾತಂತ್ರ್ಯ ಮಣಿಯೊಂದು" ಈ ಸಾಲುಗಳು ಹೊಸದೊಂದು ಜೀವ ಪಡೆಯುತ್ತವೆ.

ಮಾನವೀಯ ಮಿಡಿತದ 'ಹೇರಾಮ್'

ಪುಟ 12 ರಿಂದ

ರಕ್ಷಿಸುತ್ತಾನೆ. ಸಾಕೇತರಾಮ ಅಮ್ಜದನ ಕುಟುಂಬವನ್ನು ರಕ್ಷಿಸಲು ತನ್ನ ಪ್ರಾಣ ಪಣಕ್ಕಿಟ್ಟು ಆರೆಸ್ಸೆಸ್ ಪರಿವಾರದವರೊಂದಿಗೆ ತೀವ್ರವಾದ ಹೋರಾಟಕ್ಕಿಳಿಯುತ್ತಾನೆ. ಅಮ್ಜದನೂ ಸೇರಿದಂತೆ ಅವರ ಹಲವು ಬಂಧುಗಳು ಬಲಿಯಾಗುವ ಈ ಹತ್ಯಾಕಾಂಡಕ್ಕೆ ಗಾಂಧೀಜಿಯನ್ನು ಕೊಲೆಮಾಡಲೆಂದು ತಂದಿರುವ ಸಾಕೇತರಾಮನ ಪಿಸ್ತೂಲೇ ಕಾರಣವಾದರೂ ಮೃತ್ಯುಶಯ್ಯೆಯಲ್ಲಿಯೂ ಸಾಕೇತರಾಮನನ್ನು ಪೋಲೀಸರಿಂದ ಪಾರು ಮಾಡುತ್ತಾನೆ. ಮಾತ್ರವಲ್ಲ ಅಂತಹ ಕೋಮುದ್ವೇಷದ ವಾತಾವರಣದಲ್ಲಿಯೂ ತನ್ನ ಮನೆಯವರ ಯೋಗಕ್ಷೇಮವನ್ನು ತನ್ನ ಧರ್ಮಿಯರಿಗೆ ವಹಿಸಿದೆ, ಮುಸ್ಲಿಂ ದ್ವೇಷಿಯಾಗಿಬಿಟ್ಟಿರುವನೆಂದು ಗೊತ್ತಾಗಿರುವ ಸಾಕೇತರಾಮನ ಮೇಲೆಯೇ ನೆಚ್ಚಿಗೆಯಿಂದ ವಹಿಸಿಹೋಗುತ್ತಾನೆ. ಅಮ್ಜದನ ಈ ಅಪರಿಮಿತ ಮೈತ್ರಿ ಭಾವ, ಅಲ್ಲಿಯ ಕೋಮುದಂಗೆ, ಜೊತೆಗೆ ಗಾಂಧೀಜಿಯವರೊಡನೆ ನೇರ ಸಂಪರ್ಕ, ಅವರ ಮಾತುಗಳು ಎಲ್ಲವೂ ಒಟ್ಟಾರೆಯಾಗಿ ಸಾಕೇತರಾಮನ ಕೋಮುವಾದಿ ರಾಕ್ಷಸತ್ವದಿಂದ ಬಿಡುಗಡೆ ಮಾಡಿ ಮರಳಿ ಮಾನವನನ್ನಾಗಿಸುತ್ತವೆ. ಗಾಂಧೀಜಿಯವರ ಕೊಲೆಗಾಗಿ ತನ್ನ ಪ್ರೀತಿಯ ಪತ್ನಿಯನ್ನೇ ತ್ಯಜಿಸಿ ಸನ್ಯಾಸ ಸ್ವೀಕರಿಸಿ ಪ್ರತಿಜ್ಞಾಬದ್ಧನಾಗಿದ್ದ ಸಾಕೇತರಾಮ ಗಾಂಧೀಜಿಯವರಲ್ಲಿ ತನ್ನ ನಿಜ ಉದ್ದೇಶವನ್ನು ತಿಳಿಸಿ ತಪ್ಪು ಒಪ್ಪಿಕೊಳ್ಳಲು ತಯಾರಾಗುತ್ತಾನೆ. ಮತ್ತೊಬ್ಬ ಕೊಲೆಗಾರನಿಂದ ಗಾಂಧೀಜಿಯ ಕೊಲೆ ಸಾಕೇತರಾಮನ ಕಣ್ಣ ಮುಂದೇಯೇ ಆಗಿಬಿಡುತ್ತದೆ. ಹೀಗೆ ಬದಲಾದ ಸಾಕೇತರಾಮ ಅಮ್ಜದ್ ಅಲಿಖಾನ್‌ನ ಕುಟುಂಬಕ್ಕೆ ಆಶ್ರಯದಾತನಾಗಿ ತನ್ನ ಊರಿಗೆ ಒಯ್ದು ಸಲಹುತ್ತಾನೆ. ಬಹಳ ವರ್ಷಗಳ ನಂತರ ಸಾಕೇತರಾಮನ ಸಾವಿನ ಸಂದರ್ಭದಲ್ಲಿ ಅಮ್ಜದನ ಪತ್ನಿಯ ಶೋಕ, ಅವನ ಪುತ್ರನ ಗೌರವಾರ್ಪಣೆ, ಸ್ವತಃ ಗಾಂಧೀಜಿಯ ಮೊಮ್ಮಗ ತುಷಾರ್ ಗಾಂಧಿಯವರ ಗೌರವಾರ್ಪಣೆಯೊಂದಿಗೆ ಚಿತ್ರ ಮುಗಿಯುತ್ತದೆ.

ಚಿತ್ರವನ್ನು ನೋಡುವ ಮೊದಲೇ ಅದನ್ನು ತೆರೆದ ಮನಸ್ಸಿನಿಂದ ಸ್ವೀಕರಿಸಲಾಗದಂತೆ ಕನ್ನಡದ ಹಲವು ಪತ್ರಿಕೆಗಳು ವಿರೂಪಗೊಳಿಸಿದ ಹಿನ್ನೆಲೆಯಲ್ಲಿ ಚಿತ್ರದ ಕಥೆಯನ್ನು ದೀರ್ಘವಾಗಿ ಹೇಳಲಾಗಿದೆ. ಚಿತ್ರದ ಬಗೆಗಿನ ಅಪಪ್ರಚಾರಕ್ಕೆ ಚಿತ್ರವೇ ಉತ್ತರ. ಮೇಲೆ ವಿವರಿಸಿದ ಚಿತ್ರಕಥೆ ತನ್ನಿಂದ ತಾನೇ ಮುಚ್ಚಿದ ಮನಸ್ಸುಗಳ ಕುತ್ಸಿತ ಸಂದೇಹಗಳಿಗೆ ಉತ್ತರವಾಗುತ್ತದೆ.

ಆರ್.ಎಸ್.ಎಸ್.ನ ಅಂತರಂಗ ಬಯಲಿಗೆ

ಮಾನವೀಯ ಸಂಬಂಧಗಳು ಅದರ ನಡುವೆ ಗೋಡೆಗಳನ್ನು ನಿರ್ಮಿಸುವ ಎಲ್ಲಾ ಪ್ರಯತ್ನಗಳಿಗೆ ಸವಾಲಾಗಿ ಮತ್ತೆ ಪ್ರತಿಷ್ಠಾಪನೆಯಾಗುವುದೇ ಚಿತ್ರದ ಒಟ್ಟು ಕಥೆ. ಅದರ ಒಳಕಥೆಯಾಗಿ ಆರೆಸ್ಸೆಸ್ ಪರಿವಾರ ಹೇಗೆ ಕೋಮುವಿಷವನ್ನು ಹಬ್ಬಿಸುತ್ತದೆ, ಅದರ ಸಂಘಟನೆಯ ನಿಜ ಸ್ವರೂಪವೇನು ಎಂಬುದನ್ನು ಬಿಚ್ಚಿ ತೋರಿಸುತ್ತದೆ.

ಕಲ್ಕತ್ತದಲ್ಲಿ ಆರೆಸ್ಸೆಸ್ ಚಡ್ಡಿ ನಾಯಕನೊಬ್ಬ ಕೋಮುಗಲಭೆಯ ಸಂದರ್ಭದಲ್ಲಿಯೂ ತನ್ನ ಗೋತ್ರ ವಂಶಗಳನ್ನು ಹೇಳಿಕೊಂಡು ಅಭಿವಾದನೆ ಮಾಡಿಕೊಳ್ಳುವ ರೀತಿ ಮತ್ತು ಸಂಘ ಪರಿವಾರದ ಈ ಬ್ರಾಹ್ಮಣ ಪುರೋಹಿತಶಾಹಿ ಕಂದಾಚಾರಿ ಸ್ವರೂಪವನ್ನು ಈ ಒಂದು ಸಣ್ಣ ಉದಾಹರಣೆಯಿಂದ ಪ್ರೇಕ್ಷಕರಿಗೆ ಸೂಕ್ಷ್ಮವಾಗಿ ತಿಳಿಸುವುದು.

ಮಾನವ ಸಹಜವಾಗಿ ರೊಚ್ಚಿಗೆದ್ದ ಮನಸ್ಸುಗಳನ್ನು ಸಮುದಾಯದ ಒಂದು ವಿಭಾಗದ ವಿರುದ್ಧ ತಿರುಗಿಸುವ ತಂತ್ರ. ಆರೆಸ್ಸೆಸ್ ಸಾಹಿತ್ಯಪ್ರಚಾರ. ಇವುಗಳ ಜೊತೆಗೆ ಗಾಂಧೀಜಿಯ ಕೊಲೆ ಮಾಡುವುದಕ್ಕೆಂದು ಆಯ್ಕೆ ಮಾಡಲ್ಪಟ್ಟು ಮಹಾರಾಷ್ಟ್ರಕ್ಕೆ ಬಂದ ಮೇಲೆ ಆಧುನಿಕ ಯುಗದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ರಾಜರುಗಳು ಆರೆಸ್ಸೆಸ್‌ನ ಆಶ್ರಯದಾತರಾಗಿರುವ ರೀತಿ, ಮನಸ್ಸಿನ ವಿಚಾರ ಶಕ್ತಿಯನ್ನು ಉಡುಗಿಸಲು ಸೋಮರಸ ಪಾನ ಮಾಡಿಸಿ ಇಡೀ ದೇಶದ ಗೌರವ ಪಡೆದ ನೇತಾರನ ಕೊಲೆಗೆ ಪ್ರತಿಜ್ಞೆ ಮಾಡಿಸಿಕೊಳ್ಳುವುದು, ಆರೆಸ್ಸೆಸ್‌ನ ಫ್ಯಾಸಿಸ್ಟ್ ಸ್ವರೂಪವನ್ನು ಎತ್ತಿ ತೋರಿಸುವಂತೆ ಹಿಟ್ಲರನ ಚಿತ್ರ, ಸ್ವಸ್ತಿಕ್ ಇವುಗಳ ಹಿನ್ನೆಲೆಯನ್ನು ತೋರಿಸುವುದು ಭಾರತೀಯ ಸಂಸ್ಕೃತಿಯ ಅಪರಾವತಾರವೆನ್ನುವ ಸಂಘ ಪರಿವಾರದ (ಮಹಾರಾಷ್ಟ್ರದ ಜಾನಪದ ನೃತ್ಯ) ಮೂಲಕ ಮನಸ್ಸನ್ನು ಉದ್ರೇಕಗೊಳಿಸುವುದು, ದೆಹಲಿಗೆ ಬಂದ ಮೇಲೆ ಸಾಕೇತರಾಮನ ಮೇಲೆ ಕಣ್ಣಿಡಲು ಸಂಘದವನೊಬ್ಬನನ್ನು ಗೂಢಚಾರನ್ನಾಗಿ ಹೋಟೆಲನಲ್ಲಿಡುವ ರೀತಿ, ಕೋಮುಗಲಭೆಯನ್ನು ಎಬ್ಬಿಸಬಹುದಾದ ಸಣ್ಣ ಸುಳಿವು ಸಿಕ್ಕ ಕೂಡಲೇ ಆರೆಸ್ಸೆಸ್‌ನ ಕಾರ್ಯಕರ್ತನೊಬ್ಬ ಸಂಘದ ನಾಯಕರಿಗೆ ಸುದ್ದಿ ನೀಡಿ ಇಡೀ ಸಂಘದ ಪಡೆಯನ್ನೇ ಅಮಾಯಕರ ಮೇಲೆ ಹರಿಬಿಡುವುದು, ಸಾಕೇತರಾಮನಿಗೆ ನೀನೇ ಗಾಂಧೀಜಿಯ ಕೊಲೆಗಾರ ಎಂದು ಸಜ್ಜು ಮಾಡಿರುವಾಗಲೂ, ಅವನು ಸೋತರೆ ಮತ್ತೊಬ್ಬ ಎನ್ನುವಂತೆ ಇನ್ನೂ ಕೆಲವರನ್ನು ಈ ಕೆಲಸಕ್ಕೆ ನಿಯುಕ್ತಿ ಮಾಡಿರುವುದು ಇತ್ಯಾದಿ ಅನೇಕ ಸೂಕ್ಷ್ಮಗಳನ್ನು ಚಿತ್ರಿಸಿರುವುದು ಕಮಲ ಹಾಸನ್ ಮತ್ತು ತಂಡದ ಐತಿಹಾಸಿಕ ಪ್ರಜ್ಞೆಯ ಆಳಕ್ಕೆ ಹಾಗೂ ಆರೆಸ್ಸೆಸ್ ನ ಬಗೆಗಿನ ಸರಿಯಾದ ತಿಳುವಳಿಕೆಗೆ ಸಾಕ್ಷಿಯಾಗಿದೆ.

ಚಿತ್ರದ ನ್ಯೂನತೆಗಳು

ಹಾಗಾದರೆ ಏನೂ ಕೊರತೆ ಇಲ್ಲದ ಪರಿಪೂರ್ಣ ಚಿತ್ರವೆಂಬ ಭಾವನೆ ಮೂಡಿಸುವುದು ನನ್ನ ಉದ್ದೇಶವಲ್ಲ. ವಾಣಿಜ್ಯೀಯ ಯಶಸ್ಸಿನ ಉದ್ದೇಶದಿಂದ ಲೈಂಗಿಕ ಸಂಬಂಧಗಳ ಚಿತ್ರೀಕರಣ, ವಿಶ್ವದ, ಭಾರತದ ಇತಿಹಾಸದ ಹಲವು ಪ್ರಸಂಗಗಳ ಬಗ್ಗೆ ಗೊತ್ತಿಲ್ಲದ ಪ್ರೇಕ್ಷಕರಿಗೆ ಮೇಲೆ ನಮೂದಿಸಿದ ಹಲವು ಸೂಕ್ಷ್ಮಗಳು ತಿಳಿಯಲಾರದೆ ಹೋಗಬಹುದಾಂತಹುದು ಹೀಗೆ ಹಲವನ್ನು ಪಟ್ಟಿ ಮಾಡಬಹುದು.

ದೇಶದ ವಿಭಜನೆಯ ಬಗ್ಗೆ ಇತ್ತೀಚಿಗೆ ಬಂದ ಸಾಹ್ನಿಯವರ 'ತಮಸ್'(ಟಿ.ವಿ.ಕಥಾನಕ), ದೀಪಾ ಮೆಹ್ತಾ ನಿರ್ದೇಶನದ '1947 ಅರ್ಥ್' ಇವೆಲ್ಲವುಗಳಿಗಿಂತಲೂ ಹೆಚ್ಚು ವ್ಯಾಪ್ತಿಯ ಹಾಗೂ ರಾಜಕೀಯವಾದ ಈ ಚಿತ್ರವನ್ನು ಭಾರತದ ಜನತೆ ತೆರೆದ ಮನಸ್ಸಿನಿಂದ ನೋಡಬೇಕು. ತಮ್ಮ ಅರಿವನ್ನು ವಿಸ್ತರಿಸಿಕೊಳ್ಳಬೇಕು. ಇದರ ಬಗ್ಗೆ ಆಕ್ಷೇಪವೆತ್ತಿರುವ ವಿಮರ್ಶಕರು ಕೇವಲ ಹೇಳಿಕೆಗಳನ್ನು ನೀಡಿದ್ದಾರೆಯೇ ಹೊರತು ಸಮರ್ಥನೆಗಳನ್ನು ಒದಗಿಸಿಲ್ಲ. ಅವರೂ ಹಾಗೂ ಈ ಬರಹಗಳಿಂದ ಪ್ರಭಾವಿತರಾಗಿರುವವರು ತೆರೆದ ಮನಸ್ಸಿನಿಂದ ಮತ್ತೊಮ್ಮೆ ನೋಡಬೇಕು.

ಇನ್ನು ಚಲನಚಿತ್ರದ ಅಭಿನಯ, ತಾಂತ್ರಿಕತೆಗಳ ಬಗ್ಗೆ ಹೇಳುವುದಾದರೆ ಇಡೀ ಚಿತ್ರವನ್ನು ಪೂರ್ಣವಾಗಿ ವ್ಯಾಪಿಸಿಬಿಟ್ಟಿರುವುದು ಕಮಲ್‌ಹಾಸನ್. ಉಳಿದಂತೆ ಶಾರುಖ್‌ಖಾನ್ ಪಾತ್ರಕ್ಕೆ ಅವಕಾಶ ಸಿಕ್ಕಿದೆ. ಅದನ್ನು ಶಾರುಖ್‌ಖಾನ್ ಯಶಸ್ವಿಯಾಗಿ ಬಳಸಿಕೊಂಡು ಉತ್ತಮ ಅಭಿನಯ ನೀಡಿದ್ದಾರೆ. ಪ್ರಥಮವಾಗಿ ಚಲನಚಿತ್ರವನ್ನು ಪ್ರವೇಶಿಸಿರುವ ವಸುಂಧರಾಳ ಅಭಿನಯವೂ ಉತ್ತಮವಾಗಿದೆ. ಉಳಿದಂತೆ ಗಿರೀಶ್ ಕಾರ್ನಾಡ್, ಹೇಮಮಾಲಿನಿಯವರ ಹೆಸರನ್ನು ಟೈಟಲ್‌ಕಾರ್ಡ್‌ನಲ್ಲಿ ಬಳಸಿಕೊಳ್ಳುವುದಕ್ಕೆ ಅವಶ್ಯವಾದಷ್ಟು ಕನಿಷ್ಟ ಅವಕಾಶವೂ ದೊರೆತಿಲ್ಲ. ತಾಂತ್ರಿಕತೆಯ ದೃಷ್ಟಿಯಿಂದಲೂ ಸಿನಿಮಾ ಉತ್ತಮವಾಗಿ ಮೂಡಿಬಂದಿದೆ. ವಾಣಿಜ್ಯ ಚಿತ್ರಗಳ ಸೂತ್ರವನ್ನು ಪೂರ್ಣವಾಗಿ ಸ್ವೀಕರಿಸದೆ ಅದನ್ನು ಪೂರ್ಣವಾಗಿ ಬಿಡಲು ಆಗದೆ ಇತ್ತೀಚಿನ ಹಲವು ಚಿತ್ರಗಳಲ್ಲಿ ಕಾಣುವ ಮಧ್ಯಮ ಮಾರ್ಗವನ್ನು ಹಿಡಿದಿವೆ. ○

'ಕುರುಕ್ಷೇತ್ರದಿಂದ ಕಾರ್ಗಿಲ್‌ವರೆಗೆ'...........

ಪುಟ 12 ರಿಂದ

ಗಂಡನನ್ನು ಹುಡುಕುತ್ತಿರುವ ಮಹಿಳೆ ಪರಸ್ಪರ ಭೇಟಿಯಾದಾಗ ಯುದ್ಧದ ಬಗ್ಗೆ ಅವರು ಕೇಳುವ ಪ್ರಶ್ನೆಗಳು ಎಲ್ಲಾ ಯುದ್ಧಗಳಲ್ಲಿ ನರಳುವ ಸಾಮಾನ್ಯ ಜನತೆಯ ಪ್ರಶ್ನೆಗಳನ್ನು ಧ್ವನಿಸುತ್ತವೆ. ಹೆಚ್ಚಿನ ಯುದ್ಧಗಳು ಆಳುವವರ ನಡುವೆ ಅವರ ಆಸ್ತಿ-ಪಾಸ್ತಿ ಹಂಚಿಕೆಗೆ, ಆಳ್ವಿಕೆ ಗಟ್ಟಿ ಮಾಡಲು ನಡೆಯುತ್ತವೆ. ಆದರೆ ಸಾಯುವವರು ಸಾಮಾನ್ಯ ಜನ ಎಂಬ ಸಾರ್ವಕಾಲಿಕ, ಸಾರ್ವತ್ರಿಕ ಸತ್ಯವನ್ನು ಸ್ಪಷ್ಟವಾಗಿ ಮುಂದಿಡುತ್ತವೆ. ಹೆಂಗಸು ಮತ್ತು ಮುದುಕಿ ತಮ್ಮವರನ್ನು ಹುಡುಕುತ್ತಾ ಹೋಗುವಾಗ, ಅವರು ಪರಸ್ಪರ ತಿವಿದು ಹೆಣವಾಗಿರುವುದನ್ನು ನೋಡಿ ಗೋಳಾಡುವ ದೃಶ್ಯ ಅತ್ಯಂತ ಮಹತ್ವದ ಮನಕಲಕುವ ದೃಶ್ಯ. ನನ್ನ ಗಂಡ ಪಾಂಡವರ ಪರವಾಗಿ ಧರ್ಮಕ್ಕಾಗಿ ಯುದ್ಧ ಮಾಡಿದ್ದು, ನನ್ನಮಗ ಕೌರವರ ಪರವಾಗಿ ಧರ್ಮಕ್ಕಾಗೇ ಯುದ್ಧ ಮಾಡಿದ್ದು - ಎಂದು ಇಬ್ಬರೂ ಹೇಳುತ್ತಾ ಅವರಿಬ್ಬರೂ ಧರ್ಮಕ್ಕಾಗಿ ಯುದ್ಧ ಮಾಡಿದ್ದರೆ, ಒಬ್ಬರನ್ನೊಬ್ಬರು ತಿವಿದದ್ದೇಕೆ? ಅವರ ನಡುವೆ ಏನು ವೈರ ಇತ್ತು? ಎಂದು ಏಳುವ ಪ್ರಶ್ನೆಗಳು ನೋಡುಗನನ್ನು ಕಾಡುತ್ತವೆ. ಕರ್ಣನ ಸಾವಿಗೆ ರೋದಿಸುವ ಕುಂತಿಯಿಂದ ಆತ ಯಾರು ಎಂದು ಗೊತ್ತಾದಾಗ ಸೋದರ-ಹತ್ಯೆಯ ಆಘಾತವಾಗುತ್ತದೆ.

ಕುರುಕ್ಷೇತ್ರದಿಂದ ಕಾರ್ಗಿಲ್‌ವರೆಗೆ....

ನಾಟಕದ ಕೊನೆ ದೃಶ್ಯ ಮಹಾಭಾರತದ ಸಂದರ್ಭದಲ್ಲಿ ಯುದ್ಧದ ಬಗ್ಗೆ ಚಿಂತನೆಯನ್ನು ಇಂದಿನ ಇಂತಹ ಬೇಡದ ಸೋದರ-ಹತ್ಯೆ ಆಡಕವಾಗಿರುವ ಬೋಸ್ನಿಯಾ, ಕೊಸೋವೋ, ಕಾರ್ಗಿಲ್ ಕದನಗಳಿಗೆ ವಿಸ್ತರಿಸುತ್ತದೆ. ಕುರುಕ್ಷೇತ್ರ ಸ್ಮಶಾನದಲ್ಲಿ ರುದ್ರದೇವನಿಗೆ ಕೃಷ್ಣ ಕಲಿಯುಗದಲ್ಲೂ ಕುರುಕ್ಷೇತ್ರಗಳೂ ಮರುಕಳಿಸುವ ಬಗ್ಗೆ ಹೇಳುವ ಮೂಲಕ ಇದನ್ನು ತರಲಾಗಿದೆ. ಭಾರತ-ಪಾಕಿಸ್ತಾನ, ಸರ್ಬಿಯಾ-ಕೊಸೊವೋ, ಇರಾನ್-ಇರಾಖ್ ನೆರೆಹೊರೆಯವರು ಚಾರಿತ್ರಿಕವಾಗಿ ಘನ-ಸಂಬಂಧ ಇರುವ ಜನಗಳು ಹೊಡೆದಾಡುವಂತೆ 'ಸ್ಯಾಮ್ ಅಂಕಲ್'(ಅಮೆರಿಕ) ಬಗೆಗೂ, ಅಣ್ವಸ್ತ್ರ ತಯಾರಿ-ಕಾರ್ಗಿಲ್ ಕದನದ ಎಲ್ಲಾ ದುರಂತವನ್ನು ಹುಸಿ-ದೇಶಪ್ರೇಮದಲ್ಲಿ ಮುಳುಗಿಸಲು ಪ್ರಯತ್ನಿಸುವ ಮಾತುಗಳು ಬರುತ್ತವೆ.

ಉತ್ತಮ ಪ್ರಯತ್ನ

'ಶ್ಮಶಾನ ಕುರುಕ್ಷೇತ್ರ'ವನ್ನು ಸಮಕಾಲೀನಗೊಳಿಸಿ ಇಂದಿನ ಜಾಗತಿಕ, ದೇಶದ ಪರಿಸ್ಥಿತಿಗೆ ಅನ್ವಯಗೊಳಿಸಿ ನಾಟಕ ರೂಪಾಂತರಿಸಿ, ಮಾಡಿರುವ ಸತ್ಯೂರವರ ಪ್ರಯತ್ನ ಮೆಚ್ಚುವಂತದ್ದೇ. ಮೂಲ ನಾಟಕದ ಹಳಗನ್ನಡ ಪದ ಪ್ರಯೋಗ ಬಿಟ್ಟು ಆಡುಕನ್ನಡದಲ್ಲಿ ಅದನ್ನೇ ಪರಿಣಾಮಕಾರಿಯಾಗಿ ಮೂಲದ ಆಶಯಕ್ಕೆ ಹೆಚ್ಚಿನ ಚ್ಯುತಿ ಬರದಂತೆ ಬರುವ ಸಂಭಾಷಣೆ ಪರಿಣಾಮಕಾರಿಯಾಗಿತ್ತು. ನಾಟಕದಲ್ಲಿ ಬಳಸಿದ ಮೊದಲ ದೃಶ್ಯದ ಕಲರಿ ಪಯಟ್ಟು(ಕೇರಳದ ಸಮರಕಲೆ), ಸಮೂಹ ನೃತ್ಯಗಳು ಮಾತಿನ ಏಕತಾನತೆಯನ್ನು ಒಡೆದವು ಎಂಬುದನ್ನು ಬಿಟ್ಟರೆ, ನಾಟಕಕ್ಕೆ ಅಂತಹ ಬಲವನ್ನೇನೂ ಕೊಟ್ಟಿಲ್ಲ. ಮಹಾಭಾರತದ ಪಾತ್ರಗಳ ಉಡಿಗೆ ತೊಡಿಗೆಗಳಲ್ಲಿ ಸತ್ಯು ಹೊಸತು ಮೆರೆಸಿದ್ದಾರೆ. ಪೌರಾಣಿಕ, ಕ್ಯಾಲೆಂಡರ್ ಉಡಿಗೆ ತೊಡಿಗೆ ಬಿಟ್ಟು ಭಾರತದ ಮಿನಿಯೇಚರ್ ಕಲೆಯಲ್ಲಿ ಬರುವ ಉಡುಗೆ ತೊಡುಗೆ ಬಳಸಿದ್ದಾರೆ. ಮುರಿದು ಬಿದ್ದ ರಥದ ಗಾಲಿ, ಕುದುರೆಗೆ ಚುಚ್ಚಿದ ಈಟಿ ಒಂದು ವಿನ್ಯಾಸದ ಮೂಲಕ ರಣರಂಗವನ್ನು ಇಡೀ ನಾಟಕದ ಉದ್ದಕ್ಕೂ ಹಿನ್ನೆಲೆಯಲ್ಲಿದ್ದದ್ದು ಪರಿಣಾಮಕಾರಿಯಾಗಿತ್ತು. ಅದೇ ರೀತಿ ರಕ್ತಸಿಕ್ತ ಬಟ್ಟೆ ತೊಟ್ಟ ದ್ವಾಪರದೇವನ ತೊಡುಗೆ ಮನಸೆಳೆಯುವಂಥದ್ದಾಗಿತ್ತು.

ನಾಟಕದ ದೌರ್ಬಲ್ಯಗಳು

ಕುರುಕ್ಷೇತ್ರದಿಂದ ಯುದ್ಧದ ಬಗ್ಗೆ ವಿಶ್ಲೇಷಣೆಯನ್ನು ಕಾರ್ಗಿಲ್‌ವರೆಗೆ ವಿಸ್ತರಿಸುವ ಪ್ರಯತ್ನ ದೃಶ್ಯಗಳಲ್ಲಿ ಬರದೆ ಕೃಷ್ಣನ ಮಾತುಗಳಲ್ಲಿ (ಎಷ್ಟೇ ಸಶಕ್ತವಾಗಿದ್ದರೂ) ಉಳಿದುಹೋದದ್ದು ನಾಟಕದ ಮುಖ್ಯ ದೌರ್ಬಲ್ಯ. ಎಲ್ಲಾ ಯುದ್ಧಗಳನ್ನು ಅನ್ಯಾಯದ, ಸೋದರ-ಹತ್ಯೆಯ ಯುದ್ಧ ಎಂದು ಸಾಮಾನ್ಯೀಕರಿಸುವ ಧೋರಣೆ(ಮೂಲ ನಾಟಕದಲ್ಲಿ ಸೇರಿದಂತೆ) ಸಹ ಪ್ರಶ್ನಾರ್ಹವಾದದ್ದೇ. 'ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೇ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯವೆಲ್ಲ ತೊಲಗಿ ನ್ಯಾಯಸ್ಥಾಪನೆಯಾಗುತ್ತದೆಂದು ಭಾವಿಸುತ್ತೇವೆ" ಎಂದು ಕುವೆಂಪು ನಾಟಕದ ಬಗ್ಗೆ ಹೇಳುವ ಮಾತುಗಳು ಈ ಧ್ವನಿ ಹೊಂದಿವೆ. ಶೋಷಕವರ್ಗದ ವಿರುದ್ಧ ಜನರ ವಿಮೋಚನಾ ಯುದ್ಧವನ್ನು, ಇತರ ಅನ್ಯಾಯಯುತ ಯುದ್ಧಗಳ ಜತೆ ಸೇರಿಸಿಬಿಡುವ ಅಪಾಯದಿಂದ ನಾಟಕ ಪೂರ್ಣಮುಕ್ತವಾಗಿಲ್ಲ.

ಯಶಸ್ವಿ ಪಾರ್ಲಿಮೆಂಟ್ ಚಲೋ

ಪುಟ 5 ರಿಂದ

ಮೆರವಣಿಗೆ ವೀಕ್ಷಿಸಿದರು.

ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ವಿನಾಶಕಾರಿ ಆರ್ಥಿಕ ನೀತಿಗಳ ಜಾರಿಯನ್ನು ತತ್‌ಕ್ಷಣದಿಂದ ಕೈ ಬಿಡುವುದು ಮತ್ತು ಕೋಮುವಾದಿ ಶಕ್ತಿಗಳಿಗೆ ಪೋಷಣೆ ನೀಡುವ ಮತ್ತು ಆಡಳಿತದಲ್ಲಿ ಹಾಗೂ ಕಲೆ-ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ರಂಗಗಳಲ್ಲಿ ನುಗ್ಗಿಸುವ ಬಿಜೆಪಿ ಸರ್ಕಾರಗಳ ನೀತಿಗಳನ್ನು ಖಂಡಿಸಿ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. ಮಾತ್ರವಲ್ಲ ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ಮಣಿದು, ಆರ್ಥಿಕ, ರಾಜಕೀಯ ರಂಗಗಳಲ್ಲಿ ಶರಣಾಗುತ್ತಿರುವ ಭಾರತ ಸರ್ಕಾರ ಕ್ರಮಗಳನ್ನು ಉಗ್ರವಾಗಿ ವಿರೋಧಿಸಿ ಬಿಲ್ ಕ್ಲಿಂಟನ್ ದೇಶಕ್ಕೆ ಬಂದಾಗ ಎಲ್ಲೆಡೆ ಭಾರಿ ಪ್ರತಿಭಟನೆ ನಡೆಸುವುದಾಗಿ ಘೋಷಿಸಲಾಯಿತು.

ರಾಮಲೀಲಾ ಮೈದಾನದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾದ ಹಿರಿಯ ನಾಯಕರಾದ ಹರ್ಕಿಶನ್ ಸಿಂಗ್ ಸುರ್ಜಿತ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ.ಪಂಧೆ, ಎಐಟಿಯುಸಿಯ ರಾಷ್ಟ್ರೀಯ ನಾಯಕರಾದ ಕೆ.ಎಲ್.ಮಹೇಂದ್ರ, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಸಂಘದ ನಾಯಕ ಸುಕೋಮಲ್ ಸೇನ್, ಕೇಂದ್ರ ಸರ್ಕಾರಿ ನೌಕರರ ಸಂಘದ ನಾಯಕ ಎಸ್.ಕೆ.ವ್ಯಾಸ್, ಡಿವೈಎಫ್‌ಐ ಪ್ರಧಾನ ಕಾರ್ಯದರ್ಶಿ, ಸಂಸತ್ ಸದಸ್ಯ ಮಹಮದ್ ಸಲೀಂ, ಅ.ಭಾ. ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್, ವಿಮಾ ನೌಕರರ ಸಂಘದ ಎಸ್.ಆರ್.ಸೈನಿ, ಬ್ಯಾಂಕ್ ನೌಕರರ ಸಂಘದ ರಮಾನಂದ ಮುಂತಾದವರು ಮಾತನಾಡಿದರು. ಮೇ 11 ರಂದಿನ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಎಲ್ಲಾ ರಂಗಗಳಲ್ಲಿಯೂ ಯಶಸ್ವಿಗೊಳಿಸಲು ಕರೆ ನೀಡಿದರು.

ಈ ರ್‍ಯಾಲಿಯಲ್ಲಿ ಭಾಗವಹಿಸಿದ ಎಲ್ಲಾ ಜನತೆಯನ್ನು ಎನ್.ಪಿ.ಎಂ.ಓ. ಹಾರ್ದಿಕವಾಗಿ ಅಭಿನಂದಿಸಿದೆ. ವಿಶ್ವ ಹಣಕಾಸು ನಿಧಿ, ಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಗಳ ನಿರ್ದೇಶನದಂತೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತರಲಾಗುತ್ತಿರುವ ಆರ್ಥಿಕ ನೀತಿಯನ್ನು ಉಗ್ರವಾಗಿ ಖಂಡಿಸಿದ್ದು, ಇಂತಹ ಉದಾರೀಕರಣದ ಪ್ರಕ್ರಿಯೆಯು ಈಗಿನ ಬಜೆಟ್‌ನಲ್ಲಿ ಪ್ರತಿಫಲನಗೊಂಡಿದೆ ಎಂದು ಗುರುತಿಸಿದೆ. ಸಾರ್ವಜನಿಕ ರಂಗದ ಲಾಭ ತರುತ್ತಿರುವ ಉದ್ದಿಮೆ, ಬ್ಯಾಂಕ್, ವಿಮಾ ಕ್ಷೇತ್ರಗಳನ್ನು ಖಾಸಗೀಕರಿಸಲಾಗುತ್ತಿದ್ದು, ಕೆಲವನ್ನು ಕಿರುದುಗೊಳಿಸಿ ಮುಚ್ಚಲಾಗುತ್ತಿರುವುದು ರಾಷ್ಟ್ರದ್ರೋಹಿತನವೆಂದು ಟೀಕಿಸಿದೆ.

ದೇಶದ ಹಿತಾಸಕ್ತಿ ವಿರುದ್ಧವಾಗಿ ಆರ್ಥಿಕತೆ ಮತ್ತು ಮುಖ್ಯವಾಗಿ ಆಂತರಿಕ ಕೈಗಾರಿಕೆಗಳನ್ನು ನಾಶಗೊಳಿಸಲಾಗುತ್ತಿದೆ. ಆಮದನ್ನು ಇನ್ನೂ ಉದಾರೀಕರಿಸಲಾಗಿದ್ದು, ಆಮದು ಸುಂಕವನ್ನು ಗಣನೀಯ ಕಡಿತಗೊಳಿಸಲಾಗಿದೆ. ಎಕ್ಸೈಜ್ ಸುಂಕ ಹೊರೆ ಹೇರಲಾಗಿದೆ. ರಸಗೊಬ್ಬರಗಳ ಮೇಲಿನ ಸಬ್ಸಿಡಿ ಕಡಿತಗೊಳಿಸಿ, ಅಕ್ಕಿ, ಗೋಧಿ, ಸಕ್ಕರೆ ಬೆಲೆಗಳನ್ನು ಸಾರ್ವಜನಿಕ ಪಡಿತರ ಪದ್ಧತಿಯಲ್ಲಿಯೂ ಹೆಚ್ಚಿಸಲಾಗಿರುವುದು ಜನಸಾಮಾನ್ಯರ ಬದುಕು ಇನ್ನೂ ದುಸ್ತರಗೊಳಿಸಲಿದೆ. ಆದರೆ ಅತ್ಯಂತ ಶ್ರೀಮಂತರು ಹಣವುಳ್ಳವರು ಬಹುರಾಷ್ಟ್ರೀಯ ಕಂಪನಿಗಳಿಗೆ, ಯಥೇಚ್ಛವಾಗಿ ರಿಯಾಯಿತಿ ನೀಡಲಾಗಿದೆ. ಈ ಬಜೆಟ್ ಉದ್ಯೋಗವನ್ನು ಇನ್ನೂ ಕೊಲೆಗೈಯಲಿದೆ. ನಿರುದ್ಯೋಗ-ಬಡತನ ತೀವ್ರಗೊಳ್ಳಲಿದೆ.

ಈ ಆಕ್ರಮಣಕಾರಿ ಆರ್ಥಿಕ ನೀತಿಗಳಲ್ಲದೇ, ಬಿಜೆಪಿ ನೇತೃತ್ವದ ಸರ್ಕಾರ ಕೋಮುವಾದಿ ಶಕ್ತಿಗಳಿಗೆ ಇನ್ನೂ ಕುಮ್ಮಕ್ಕು ನೀಡಿ ದೇಶದ ಐಕ್ಯತೆ, ಸಮಗ್ರತೆಗೆ ಗಂಡಾಂತರ ಒಡ್ಡುತ್ತಿದೆ. ಆಡಳಿತ, ಶಿಕ್ಷಣ, ಸಾಹಿತ್ಯ-ಸಂಸ್ಕೃತಿಯಲ್ಲಿ ಖಾವೀಕರಣಗೊಳಿಸುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧ್ವಂಸಗೊಳಿಸುವ ಹುನ್ನಾರ ಅಡಗಿದೆ. ಆದ್ದರಿಂದ ಇವುಗಳನ್ನು ಎಲ್ಲಾ ಹಂತಗಳಲ್ಲಿ ಹೆಜ್ಜೆ ಹೆಜ್ಜೆಗೂ ಎದುರಿಸಿ ಹೋರಾಡಲು ರ್‍ಯಾಲಿಯು ಪಣತೊಟ್ಟಿದೆ. ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಅಹೋರಾತ್ರ ಶ್ರಮಿಸಲು ಘೋಷಿಸಲಾಗಿದೆ.

ಕೋಮುವಾದಿ ಹತ್ಯಾಕಾಂಡದ ದಾರುಣತೆ ಚಿತ್ರಿಸುವ

ಮಾನವೀಯ ಮಿಡಿತದ 'ಹೇರಾಮ್'

ಜಿ.ಎನ್.ನಾಗರಾಜ್



ಭಾರತೀಯ ಚಿತ್ರರಂಗದ ಮೇರುನಟ(ತಾರೆಯಲ್ಲ)ರಲ್ಲೊಬ್ಬರಾದ ಕಮಲಹಾಸನ್ ನಿರ್ಮಿಸಿ, ನಿರ್ದೇಶಿಸಿ ನಾಯಕ ಪಾತ್ರವಹಿಸಿದ ಚಿತ್ರ 'ಹೇರಾಮ್' -ಸ್ವಾತಂತ್ರ್ಯನಂತರದ ಭಾರತದ ವಿಭಜನೆಯ ಸಂದರ್ಭದ ದಾರುಣತೆಯ ಬಗ್ಗೆ ಹಲವಾರು ಚಲನಚಿತ್ರಗಳು ಬಂದಿವೆ. ಇತ್ತೀಚೆಗೆ ದೀಪಾಮೆಹ್ತಾರವರ ನಿರ್ದೇಶನದ ಚಿತ್ರ '1947 ಅರ್ಥ್'(ಆಮೀರ್ ಖಾನ್, ನಂದಿತಾದಾಸ್ ಅಭಿನಯದ ಚಿತ್ರ) ಭಾರತದಲ್ಲಿ ಪ್ರದರ್ಶಿತವಾಗಿದೆ. ಅದೇ ಸಮಯದ ವಸ್ತುವನ್ನುಳ್ಳ ವಿಭಿನ್ನರೀತಿಯ ಚಿತ್ರವಾಗಿದೆ 'ಹೇ ರಾಮ್'.

'ಹೇರಾಮ್' ನ ಚಿತ್ರಕಥೆ

ಮಣ್ಣಿನಾಳದಲ್ಲಿ ಹುದುಗಿಹೋಗಿರುವ ಹರಪ್ಪ-ಮೊಹೆಂಜದಾರೋ ನಾಗರೀಕತೆಯ ಅವಶೇಷಗಳನ್ನು ಹೊರತೆಗೆಯುವುದರಲ್ಲಿ ಒಟ್ಟಾಗಿ ದುಡಿಯುವ ಮೂರು ಜನ ಮಿತ್ರರ ಆಳದ ಮೈತ್ರಿಯ ಚಿತ್ರಣದೊಂದಿಗೆ ಚಿತ್ರ ಆರಂಭವಾಗುತ್ತದೆ.

ಭಾರತ-ಪಾಕಿಸ್ತಾನ ವಿಭಜನೆ ಮಾಡಬೇಕು ಎನ್ನುವ ನಿರ್ಧಾರ ಹರಪ್ಪಾಕ್ಕೆ ತಲುಪುತ್ತದೆ. ಆದರೆ ಒಟ್ಟಾಗಿ ಕೆಲಸ ಮಾಡುತ್ತಿದ್ದ ಆ ತಂಡದ ಮೇಲೆ ಇದು ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಎಲ್ಲರು ತಮ್ಮ ಎಂದಿನ ಮೈತ್ರಿಯನ್ನು ಮರೆದು ಒಟ್ಟಾಗಿ ಸಂತೋಷಗೋಷ್ಠಿಯಲ್ಲಿ ಭಾಗವಹಿಸಿ ನಮಾಜು ಮಡುವವರಾದರೇನು, ಪೂಜಾರಿಗಳಾದರೇನು ಎಲ್ಲರೂ ಒಂದೇ ಎಂಬ ಭಾವನೆಯಿಂದ ಹಾಡಿ ಕುಣಿದು ನಕ್ಕು ನಲಿದು ಬೇರೆಯಾಗುತ್ತಾರೆ. ಅದೇ ಸಂದರ್ಭದಲ್ಲಿ ಭಾರತದಾದ್ಯಂತ ಆರಂಭವಾದ ಕೋಮುಗಲಭೆಗಳಲ್ಲಿ ಕಲ್ಕತ್ತದಲ್ಲಿದ್ದ ಸಾಕೇತರಾಮನ ಬಂಗಾಳಿ ಪತ್ನಿ ಅವನ ಕಣ್ಣೆದುರೇ ಮಡಿಯುತ್ತಾಳೆ. ಅಲ್ಲಿಯವರೆಗೆ ಯಾವುದೇ ಕೋಮುಭಾವನೆಗೆ ಎಡೆ ಇಲ್ಲದಿದ್ದ ಸಾಕೇತರಾಮ ತನ್ನ ಪತ್ನಿಯ ಹಂತಕರನ್ನು (ಹಂತಕರನ್ನು ಮಾತ್ರ) ಹುಡುಕಾಡಿಕೊಂಡು ಹೋಗಿ ಕೊಲ್ಲುತ್ತಾನೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸಾಕೇತರಾಮನಿಗೆ ಕೋಮುಗಲಭೆಯನ್ನೆಬ್ಬಿಸುತ್ತಿದ್ದ ಆರೆಸ್ಸೆಸ್ ನಾಯಕನೊಬ್ಬ ಹಿಂದೂ ಕೋಮುದ್ವೇಷವನ್ನು, ಆರೆಸ್ಸೆಸ್ ವಿಚಾರಗಳನ್ನು ತುಂಬುತ್ತಾನೆ. ಗಾಂಧೀಜಿಯೇ ಹಿಂದೂಗಳ ಪ್ರಥಮ ಶತ್ರು ಎಂಬ ಭಾವನೆ ಮೂಡಿಸುತ್ತಾನೆ. ಆ ಸಂಘದ ಭಾಗವಾಗಿ ಮದ್ರಾಸಿಗೆ ಬಂದ ಸಾಕೇತರಾಮ ಅವನ ತಂದೆ ತಾಯಿಯ ಒತ್ತಾಯಕ್ಕೊಳಗಾಗಿ ಮತ್ತೊಮ್ಮೆ ಮದುವೆಯಾಗುತ್ತಾನೆ. ಅವಳ ಮುಗ್ಧತೆ, ಗಂಡ-ಹೆಂಡತಿಯರ ನಡುವೆ ಮೂಡುವ ಪ್ರೀತಿ ಇವುಗಳ ಜೊತೆ ಜೊತೆಗೆ ಗಾಂಧೀಜಿಯ ಅಭಿಮಾನಿಗಳಾದ ಕುಟುಂಬದಿಂದ ಬಂದ ಪತ್ನಿಯ ಮೂಲಕ ಗಾಂಧೀಜಿಯ ವಿಚಾರಗಳ ಪರಿಚಯವೂ ಆರಂಭವಾಗುತ್ತದೆ. ಆದರೆ ಮತಾಂಧ ಆರೆಸ್ಸೆಸ್‌ನ ಭಾಗವಾಗಿಬಿಟ್ಟಿರುವ ಸಾಕೇತರಾಮನನ್ನು ಗಾಂಧೀಜಿಯ ಕೊಲೆಗೆಂದೇ ಆಯ್ಕೆ ಮಾಡಿ ಅವನಿಂದ ಪ್ರತಿಜ್ಞೆ ಮಾಡಿಸಿಕೊಂಡು ತರಬೇತಿ ನೀಡುತ್ತಾರೆ. ಗಾಂಧೀಜಿಯ ಕೊಲೆಯ ಹೊಣೆಹೊತ್ತು ದೆಹಲಿಗೆ ಬಂದಾಗ ಆಕಸ್ಮಿಕವಾಗಿ ಮುಸ್ಲಿಂ ನಿವಾಸಸ್ಥಾನವೊಂದರಲ್ಲಿ ತನ್ನ ಗೆಳೆಯ ಅಮ್ಜದ್ ಖಾನನ ಭೇಟಿಯಾಗುತ್ತದೆ. ಅಷ್ಟರಲ್ಲಿ ಅಮ್ಜದ್‌ನ ತಂದೆ ತಾಯಿಗಳು ಕೋಮು ದಂಗೆಗೆ ಬಲಿಯಾಗಿದ್ದರೂ ಕೂಡ ಅವನ ಮನಸ್ಸು ಸೆಕ್ಯುಲರ್ ಬಗ್ಗೆ ಅಪರಿಮಿತ ಗೌರವ ಹೊಂದಿರುತ್ತಾನೆ. ಈ ಸ್ನೇಹಿತ ತೋರಿಸುವ ಸರಳ, ನಿಷ್ಕಳಂಕ ಪ್ರೇಮವನ್ನು ಮೊದಲು ಸಾಕೇತ್‌ರಾಮ ಅಂಗೀಕರಿಸಲು ನಿರಾಕರಿಸಿದರೂ ಅಂತಿಮವಾಗಿ ಅವನೇ ಕೇಂದ್ರ ಬಿಂದುವಾಗಿ ದಾರುಣ ಹತ್ಯಾಕಾಂಡವೊಂದು ಆರಂಭವಾಗಿಬಿಟ್ಟಾಗ ಅವರಿಬ್ಬರ ವಾಗ್ವಾದದ ನಡುವೆಯೇ ಸಾಕೇತರಾಮನನ್ನು ಅಮ್ಜದ್

'ಹೇರಾಮ್' ವಿಭಿನ್ನ ದೃಷ್ಟಿಕೋನಗಳು

ದೇಶ ವಿಭಜನೆಗೊಳಗಾದ ಸಂದರ್ಭದ ಕೋಮುವಾದಿ ದಂಗೆಗಳು ಮತ್ತು ಗಾಂಧೀಜಿಯವರ ಹತ್ಯೆಯನ್ನು ವಸ್ತುವಾಗುಳ್ಳ ಈ ಚಿತ್ರದ ನಿರ್ಮಾಣ ಆರಂಭವಾದಂದಿನಿಂದಲೂ ಹೆಚ್ಚು ಪ್ರಚಾರವನ್ನು ಪಡೆದುಕೊಂಡಿತು. ಇಂದಿನ ಭಾರತದ ಸಂದರ್ಭದಲ್ಲಿ ಇಂತಹ ವಸ್ತುವನ್ನು ಆಯ್ಕೆಮಾಡಿಕೊಳ್ಳುವುದಕ್ಕೇ ಎಂಟೆದೆ ಬೇಕು. ಆದ್ದರಿಂದ ಸಹಜವಾಗಿಯೇ ನಿರ್ಮಾಣ ಮಾಡುತ್ತಿರುವಾಗಲೇ ಹಲವು ವಿವಾದಗಳೂ ಉಂಟಾದವು. ಚಿತ್ರ ಬಿಡುಗಡೆಯಾದ ಮೇಲೆಯೂ ಅಪಪ್ರಚಾರದ ಧಾಳಿಗೆ ತುತ್ತಾಯಿತು. ಕಲ್ಕತ್ತಾದಲ್ಲಿ ಕಾಂಗ್ರೆ ಯುವಕ ಪಡೆಗಳು ಚಿತ್ರಪ್ರದರ್ಶನದ ಮಂದಿರದ ಮೇಲೆಯೇ ಧಾಳಿ ಮಾಡಿತು. ಗಾಂಧೀಜಿಯವರ ಪಾತ್ರ ಚಿತ್ರಣ ಸರಿಯಾಗಿಲ್ಲ ಎಂಬುದು ಅವರ ಆಪಾದನೆ. ಭಾರತದ ವಿಭಜನೆಯ ಸಂದರ್ಭದ ಮಾನವೀಯ ದುರಂತಗಳನ್ನೇ 'ಗರಂಹವಾ'ದಂತಹ ಚಲನಚಿತ್ರ ಮಾಡಿದ ಎಂ.ಎಸ್.ಸತ್ಯುವಿನಂತಹ ಪ್ರಗತಿಪರ ನಿರ್ದೇಶಕರೂ ಸೇರಿದಂತೆ ಪ್ರಗತಿಪರ ದೃಷ್ಟಿಕೋನದ ಅನೇಕ ವಿಮರ್ಶಕರೂ ಕಟುಟೀಕೆಗಳ ಸುರಿಮಳೆಗೈದಿದ್ದಾರೆ. ಆರೆಸ್ಸೆಸ್ ಮನೋಭಾವದ ಚಿತ್ರ ಎಂದು ಆಪಾದಿಸಿದ್ದಾರೆ.

ಅದೇ ಸಂದರ್ಭದಲ್ಲಿ ಪ.ಬಂಗಾಳದಲ್ಲಿ ಎಡರಂಗ ಸರ್ಕಾರ ಹತ್ತಾರು ಸಾವಿರ ಜನ ಏಕಕಾಲದಲ್ಲಿ ನೋಡಲಾಗುವಂತೆ ದೊಡ್ಡ ಪರದೆಯ ಮೇಲೆ ಚಲನಚಿತ್ರ ಪ್ರದರ್ಶನ ಮಾಡುತ್ತೇವೆಂದು ಪ್ರಕಟಿಸಿದೆ. 7.3.2000 ದಂದು ಜ್ಯೋತಿಬಸುರವರು ಚಿತ್ರದ ನಿರ್ಮಾಪಕ, ನಿರ್ದೇಶಕ ಹಾಗೂ ನಾಯಕ ನಟ ಕಮಲಾಹಾಸನ್‌ರವರನ್ನು ಸನ್ಮಾನಿಸಿದ್ದಾರೆ.

ಶ್ಮಶಾನ ಕುರುಕ್ಷೇತ್ರ ಹಾಗೂ ಯುದ್ಧ ವಿರೋಧಿ ನಿಲುವುಗಳು

ಕಳೆದ ಶತಮಾನದ ಆರಂಭದಲ್ಲಿ ಆರಂಭವಾದ ಆಧುನಿಕ ಕನ್ನಡ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆ ಬಹುದೊಡ್ಡದು. ಕಾದಂಬರಿಕಾರರಾಗಿ ಹಾಗೂ ಕವಿಯಾಗಿ ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಹಾಗೆಯೇ ಕನ್ನಡ ನಾಟಕದ ಬಹುಮುಖ್ಯ ನಾಟಕಕಾರರಾದ ಕೈಲಾಸಂ ಹಾಗೂ ಶ್ರೀರಂಗರಿಗಿಂತ ಭಿನ್ನ ಮಾರ್ಗದಲ್ಲಿ ನಾಟಕಗಳನ್ನು ರಚಿಸಿದವರು ಕುವೆಂಪು. ಅವರ ಜಲಗಾರ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿಯಂತಹ ನಾಟಕಗಳು ಕನ್ನಡ ನಾಟಕ ರಂಗಕ್ಕೆ ಹೊಸ ವಸ್ತುಗಳನ್ನು, ವಿಭಿನ್ನ ಅಲೋಚನೆಗಳನ್ನು ನೀಡಿದಂತಹವುಗಳು. ಈ ಸಾಲಿನಲ್ಲಿ 'ಶ್ಮಶಾನ ಕುರುಕ್ಷೇತ್ರ' ನಾಟಕ ಗಮನಿಸಬೇಕಾದದ್ದು.


ಶ್ಮಶಾನ ಕುರುಕ್ಷೇತ್ರದ ವಸ್ತು ಮಹಾಭಾರತ ಯುದ್ಧ ಕೊನೆಯ ದಿನ ದುರ್ಯೋಧನ ಭೀಮನ ಗದೆಯ ಏಟಿನಿಂದ ತೊಡೆ ಮುರಿದುಕೊಂಡು ಬಿದ್ದಿದ್ದು ಘೋರ ವಿನಾಶಕಾರಿ ದುರಂತಕ್ಕೆ ಸಾಕ್ಷಿಯಾಗಿ ಯುದ್ಧ ಭೂಮಿಯಲ್ಲೇ ನರಳುತ್ತಾ ಬಿದ್ದಿದ್ದಾನೆ. ಈ ಸಂದರ್ಭದಲ್ಲಿ ಯುಗ ಪುರುಷ ದ್ವಾಪರ ದೇವ ತನ್ನ ಆಳ್ವಿಕೆಯನ್ನು ಮುಗಿಸಿ ಮುಂದಿನ ಯುಗ ಪುರುಷ ಕಲಿ ದೇವನಿಗೆ ಸ್ಥಾನ ಬಿಟ್ಟುಕೊಡುವಾಗ ತನ್ನ ಯುಗದಲ್ಲಿ ನಡೆದ ಯುದ್ಧ-ಸಾವು ನೋವುಗಳಿಗೆ ವಿಷಾದ ವ್ಯಕ್ತಪಡಿಸುತ್ತಾ ತನ್ನ ಕಾಲದ ಸಂಸ್ಕೃತಿಯೆಲ್ಲ ಅತ್ಯುತ್ತಮವಾದುದೆಲ್ಲ ಈ ಯುದ್ಧದಿಂದಾಗಿ ವಿನಾಶ ಹೊಂದಿತೆಂದು ದುಃಖಿಸುತ್ತಾನೆ. ಕಲಿಯುಗದಲ್ಲಿ ಇಂತಹುದೆಲ್ಲಾ ಸಂಭವಿಸದಿರಲಿ ಎಂದು ಆಶಿಸುತ್ತಾನೆ. ಆದರೆ ಕಲಿಯುಗದಲ್ಲಿ ಇಂತಹ ಯುದ್ಧಗಳು ಸಂಭವಿಸುವುದರ ಮುನ್ಸೂಚನೆಯನ್ನು ಕಲಿದೇವ ನೀಡುತ್ತಾನೆ.

ಕುವೆಂಪು ಸಾರಸಗಟಾಗಿ ವಿಶ್ವದ ಎಲ್ಲ ಯುದ್ಧಗಳು ನಿರರ್ಥಕ ಎಂದು ಘೋಷಿಸುತ್ತಾರೆ. ಶ್ಮಶಾನ ಕುರುಕ್ಷೇತ್ರ ನಾಟಕದ ಮುನ್ನುಡಿಯ ರೂಪದ ಈ ಮಾತುಗಳನ್ನು ಗಮನಿಸಿ 'ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೇ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯವೆಲ್ಲಾ ತೊಲಗಿ ನ್ಯಾಯಸ್ಥಾಪನೆಯಾಗುವುದೆಂದು ಭಾವಿಸುತ್ತೇವೆ............. ಆದರೆ ಮತ್ತೆ? ವಿಶೇಷತೆಗಾಗಿ ಸಾಮಾನ್ಯ ಆಹುತಿ. ಸಂಸ್ಕೃತಿ ನಾಗರೀಕತೆ, ಪ್ರಗತಿ ಎಲ್ಲ ಸ್ಮಶಾನರುದ್ರನ ಮೈಯ್ಗೆ ಭಸ್ಮಲೇಪನವಾಗುತ್ತದೆ! ಯಾವುದೇ ಕಾರಣಕ್ಕೆ ಯುದ್ಧವಾದರೂ ಅದು ಸಮರ್ಥನೀಯವಲ್ಲ ಎಂಬುದು ಕುವೆಂಪು ಅಭಿಪ್ರಾಯ. ಏಕೆಂದರೆ ಎಲ್ಲಾ ಯುದ್ಧಗಳಿಂದ ಅಂತಿಮವಾಗಿ ತೊಂದರೆಗೆ ಒಳಗಾಗುವವರು, ನೋವಿಗೆ ಈಡಾಗುವವರು ಸಾಮಾನ್ಯರೆ. ಶ್ಮಶಾನ ಕುರುಕ್ಷೇತ್ರ ನಾಟಕದಲ್ಲಿ ಸೈನಿಕನೋರ್ವನ ಪತ್ನಿ, ಮಗು ಹಾಗೂ ಮತ್ತೊಬ್ಬ ಸೈನಿಕನ ತಾಯಿಯ ಪಾತ್ರಗಳ ಮೂಲಕ ಇದನ್ನು ಸಮರ್ಥವಾಗಿ ಅಭಿವ್ಯಕ್ತಿಗೊಳಿಸುತ್ತಾರೆ. ಸೈನಿಕನ ಪತ್ನಿ ತನ್ನ ಮುಗ್ಧ ಮಗುವಿಗೆ ಆತನ ತಂದೆ ಮತ್ತೆ ಮರಳಿ ಬದುಕಲಾರನೆಂದು ತಿಳಿಸುವ ಈ ಮಾತುಗಳನ್ನು ನೋಡಿ "ಇನ್ನಿವನು ಚೆಲುವಾದ ಈ ತಿರೆವೆಣ್ಣನಂಕದಲ್ಲಿ ಚಲಿಸಲಾರನು, ಕಾಲ್ಗಳುಡುಗಿಹವು, ಇನ್ನಿವನ ಕೊರಲಿಂದ ಮಾನವರಾಡುವ ಇಂಚರದ ಮಾತುಗಳು ಹೊರಹೊಮ್ಮಲಾರವು, ನಾಲಗೆಯುಳಿದಿಹುದು ಇನ್ನೀತನ ಎದೆಯಲಿ ಸತಿ ಪ್ರೇಮ, ಸುತ ವಾತ್ಸಲ್ಯ, ಬಂಧು ಮಮತೆ, ಕರುಣೆ, ನಯ ದಯೆ ಮೊದಲಾದ ಮಾನವೀಯ ದಿವ್ಯ ಭಾವನೆಗಳಲ್ಲಿ ಒಂದಾದರೂ ಮೂಡಲರಿದು. ನಗಲಾರನಿವನು, ಅಳಲು ಆದರನು" ಮತ್ತೊಬ್ಬ ಮೃತ ಸೈನಿಕನ ವಯಸ್ಸಾದ ತಾಯಿಯ ಮಾತು 'ನಮ್ಮ ಮೋಲಿಹ ಬಡಜನಗಳೆಲ್ಲಾ ಮಂಕುಗಳಮ್ಮ ಪಾಂಡವರ್

ಪುಟ 2 ಕ್ಕೆ

'ಕುರುಕ್ಷೇತ್ರದಿಂದ ಕಾರ್ಗಿಲ್‌ವರೆಗೆ'

ಸತ್ಯು ನಾಟಕ



ಕುವೆಂಪುರವರ 'ಸ್ಮಶಾನ ಕುರುಕ್ಷೇತ್ರಂ' ನ್ನು ಸಮಕಾಲೀನಗೊಳಿಸುವ ಉತ್ತಮ ಪ್ರಯತ್ನ

ಮಹಾಭಾರತದ ಪಾತ್ರಗಳು, ಘಟನೆಗಳ ಸಂದರ್ಭದಲ್ಲಿ ಯುದ್ಧದ ಸಾರ್ವಕಾಲಿಕ ಹಿಂಸೆ, ಕ್ರೌರ್ಯ, ವಿನಾಶಗಳ ಬಗ್ಗೆ ಜಿಜ್ಞಾಸೆ ಭಾರತೀಯ ಭಾಷೆಗಳ ಸಾಹಿತ್ಯದಲ್ಲಿ (ನಾಟಕದಲ್ಲಿ) ಅಪರೂಪವಲ್ಲ. ಹಿಂದಿಯಲ್ಲಿ ಧರ್ಮವೀರ ಭಾರತೀಯರ 'ಅಂಧಯುಗ', ಕನ್ನಡದಲ್ಲಿ ಕುವೆಂಪುರವರ 'ಸ್ಮಶಾನ ಕುರುಕ್ಷೇತ್ರಂ' ಇಂತಹ ನಾಟಕಗಳು. 'ಅಂಧಯುಗ'ವನ್ನು 70 ರ ದಶಕದಲ್ಲಿ ಬಿ.ವಿ.ಕಾರಂತು ರಂಗಕ್ಕೆ ತಂದಿದ್ದರು. 'ಸ್ಮಶಾನ ಕುರುಕ್ಷೇತ್ರ'ವನ್ನು ಇತ್ತೀಚೆಗೆ ಎಂ.ಎಸ್.ಸತ್ಯು ರೂಪಾಂತರಗೊಳಿಸಿ. 'ಕುರುಕ್ಷೇತ್ರದಿಂದ ಕಾರ್ಗಿಲ್‌ವರೆಗೆ' ಬೆಂಗಳೂರಿನಲ್ಲಿ 5 ದಿನಗಳ ಕಾಲ ಪ್ರದರ್ಶಿಸಿದರು. ಹಲವು ರೀತಿಯಲ್ಲಿ ಈ ನಾಟಕ ಗಮನ ಸೆಳೆಯಿತು.

ಕುವೆಂಪುರವರ ಮೂಲ ನಾಟಕದಲ್ಲಿ ಕ್ರಿಯೆ ಕುರುಕ್ಷೇತ್ರದಿಂದ ಮೊದಲನೇ ಮಹಾಯುದ್ಧದ ವರೆಗೆ ಇದ್ದರೆ, ಸತ್ಯುರವರ ಈ ನಾಟಕ ಇನ್ನೂ ಎಪ್ಪತ್ತು ವರ್ಷಗಳ ಕಾಲ ಮುಂದಕ್ಕೆ ಕಾರ್ಗಿಲ್‌ವರೆಗೆ ವಿಸ್ತರಿಸಿದೆ. ಹದಿನೆಂಟು ದಿನಗಳ ಕಾಲ ರಣ ಕೋಲಾಹಲದಿಂದ ತುಂಬಿ ತುಳುಕಿದ ಮಹಾಭಾರತ ಯುದ್ಧ ಕೊನೆಗೊಂಡ ದಿನದ ಘೋರ ರಾತ್ರಿಯಲ್ಲಿ ನಾಟಕದ ಪಾತ್ರಗಳು ಯುದ್ಧದ ಬಗ್ಗೆ ಜಿಜ್ಞಾಸೆ ನಡೆಸುತ್ತವೆ. ಆ ಕರಾಳ ರಾತ್ರಿಯೇ 'ದ್ವಾಪರಯುಗ'ವುಗಿದು 'ಕಲಿಯುಗ' ಆರಂಭವಾಗುವುದಂತೆ. ತನ್ನ ಆಳ್ವಿಕೆಯ ಕೊನೆಯಲ್ಲಿ ಮಸಣವೇ ಚರಮ ಸೋಪಾನವಾಯಿತಲ್ಲ ಎಂದು ದುಃಖಿಸುವ ಯುಗಪುರುಷ ದ್ವಾಪರದೇವನನ್ನು ಕಲಿಪುರುಷ ಸಂತೈಸುವುದರಿಂದ ನಾಟಕ ಆರಂಭವಾಗುತ್ತದೆ.

ಸ್ಮಶಾನ ಕುರುಕ್ಷೇತ್ರದಲ್ಲಿ ಯುದ್ಧದ ಬಗ್ಗೆ ಚಿಂತನೆ

ಅದೇ ಕರಾಳ ರಾತ್ರಿಯಲ್ಲಿ ಯುದ್ಧದಲ್ಲಿ ಮಡಿದ ತಮ್ಮ ಬಂಧುಗಳನ್ನು ಹುಡುಕುತ್ತಾ ಅವರ ಬಗ್ಗೆ ಮಹಾಭಾರತ ಯುದ್ಧದ ಬಗ್ಗೆ ತಮ್ಮ ಅನ್ನಿಸಿಕೆಗಳನ್ನು ಮಹಾಭಾರತದ ಹಲವು ಪಾತ್ರಗಳು ಹೇಳುತ್ತಾ ಹೋಗುತ್ತವೆ. ಕೌರವೇಶ್ವರನನ್ನು ಹುಡುಕುತ್ತಾ ಹೋಗುವ ಮೂವರು ಸೇವಕರು, ತನ್ನ ಮಗ ನಾರಾಯಣನನ್ನು ಹುಡುಕುತ್ತಿರುವ ಮುದುಕಿ, ಸಂಜಯನೊಡಗೂಡಿ ತನ್ನ ಮಗನನ್ನು ಹುಡುಕುತ್ತಿರುವ ಧೃತರಾಷ್ಟ್ರ-ಗಾಂಧಾರಿ, ಅಭಿಮನ್ಯು, ಘಟೋತ್ಕಚರನ್ನು ಹುಡುಕುತ್ತಿರುವ ಧರ್ಮರಾಯ-ಅರ್ಜುನ-ಭೀಮ-ದ್ರೌಪದಿ, ಕರ್ಣನ ದೇಹದೊಂದಿಗೆ ತನ್ನನ್ನು ಚಿತೆಗೇರಿಸಬೇಕೆಂಬ ದುರ್ಯೋಧನನ ಕೊನೆಯ ಆಸೆ ತೀರಿಸಲು ಕರ್ಣನ ಶವ ಹುಡುಕುತ್ತಿರುವ ಅಶ್ವತ್ಥಾಮ, ತನ್ನ ಮಗನ ಜತೆ ತನ್ನ ಗಂಡನನ್ನು ಹುಡುಕುತ್ತಿರುವ ಮಹಿಳೆ, ಜೀವಂತವಿದ್ದಾಗ ಸ್ವೀಕರಿಸದಿದ್ದಕ್ಕೆ ಗೋಳಾಡುತ್ತಾ ಸತ್ತ ನಂತರವಾದರೂ ನೋಡಲು ಅರಸುತ್ತಿರುವ ಕುಂತಿ ಪ್ರತಿಯೊಬ್ಬರು ತಮ್ಮ ದುಃಖದ ನಡುವೆ ಯುದ್ಧದ ಕಾರಣ, ಪರಿಣಾಮ, ಅನಿವಾರ್ಯತೆ ಬಗ್ಗೆ ಚಿಂತಿಸುತ್ತಾರೆ, ಪ್ರಶ್ನಿಸುತ್ತಾರೆ. ಅವರ ಚಿಂತನೆ, ಪ್ರಶ್ನೆಗಳು ಎಲ್ಲಾ ಯುದ್ಧಗಳ ಬಗ್ಗೆ ಇರುವ ಚಿಂತನೆ, ಪ್ರಶ್ನೆಗಳನ್ನು ಧ್ವನಿಸುತ್ತದೆ.

ಸೋದರ-ಹತ್ಯೆ, 'ಧರ್ಮಯುದ್ಧ'?

ರಾಜಮನೆತನಕ್ಕೆ ಸೇರದ ತನ್ನ ಮಗ ನಾರಾಯಣನನ್ನು ಹುಡುಕುತ್ತಿರುವ ಮುದುಕಿ, ಮತ್ತು ತನ್ನ ಮಗನ ಜತೆ

ಪುಟ 11 ಕ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee, Editor : G.N.NAGARA